
ಗುರುವಾರ, ಜುಲೈ 6, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 186 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಎಕ್ಸ್‌ಪ್ರೆಸ್ ಹೆದ್ದಾರಿಗಳಲ್ಲಿ ಅಪಘಾತ ತಪ್ಪಿಸಲು ಬೇಕು ವೇಗಕ್ಕೆ ಕಡಿವಾಣ

ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಗೆ ಅಸ್ತು 10

ಗ್ಯಾರಂಟಿ: ಕೈ–ಕಮಲ ಏಟು ಎದಿರೇಟು 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,446	19,398	₹60,310 (ಬೆಂಗಳೂರು)	₹71,900 (ಬೆಂಗಳೂರು)	82.25

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ಜಾತಿಗಳಿಗೆ ಪ್ರಾತಿನಿಧ್ಯ • ಭಕ್ತವತ್ಸಲ ಆಯೋಗದಿಂದ ಶಿಫಾರಸು

ಒಬಿಸಿ: ನಾಲ್ಕು ಪ್ರವರ್ಗ ಸೃಷ್ಟಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ಜಾತಿಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಲು ಸದ್ಯ ಇರುವ ಎರಡು ಪ್ರವರ್ಗಗಳನ್ನು ನಾಲ್ಕು ಪ್ರವರ್ಗಗಳಾಗಿ ಮರು ವರ್ಗೀಕರಿಸಬೇಕು ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ನೇತೃತ್ವದ ಆಯೋಗ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಆಯಾ ಸಮುದಾಯಗಳ ರಾಜಕೀಯ ಪ್ರಾತಿನಿಧ್ಯವನ್ನು ಖಚಿತ ಪಡಿಸಿದ ಬಳಿಕವೇ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಈ ಹಿನ್ನೆಲೆಯಲ್ಲಿ, ಹಿಂದುಳಿದ ವರ್ಗಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಮತ್ತು ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಲು, ಅಧ್ಯಯನ ನಡೆಸಿ ಶಿಫಾರಸು ಮಾಡಲು 2022ರ ಮೇ 16ರಂದು ಈ ಆಯೋಗವನ್ನು ಸರ್ಕಾರ ರಚಿಸಿತ್ತು.

‘ಚುನಾವಣೆ’ಗಾಗಿ ಹಿಂದುಳಿದ ವರ್ಗಗಳ ಮರು ವರ್ಗೀಕರಣ*

4 ಪ್ರವರ್ಗಗಳು	ಜಾತಿಗಳು	ಒಟ್ಟು ಶೇ 33 ಮೀಸಲಾತಿ ಹಂಚಿಕೆ (ಶೇ)
ಪ್ರವರ್ಗ–1	ಮೀಸಲಾತಿ ಪಟ್ಟಿಯಲ್ಲಿ ‘ಪ್ರವರ್ಗ 1’ರಲ್ಲಿರುವ ಅತ್ಯಂತ ಹಿಂದುಳಿದ 381 ಜಾತಿ	9.9
ಪ್ರವರ್ಗ–2	ಮೀಸಲಾತಿ ಪಟ್ಟಿಯಲ್ಲಿ ‘ಪ್ರವರ್ಗ 2ಎ’ಯಲ್ಲಿರುವ ಒಟ್ಟು 367 ಜಾತಿ	9.9
ಪ್ರವರ್ಗ–3	ಮೀಸಲಾತಿ ಪಟ್ಟಿಯ ‘ಪ್ರವರ್ಗ 2ಬಿ’ಯಲ್ಲಿರುವ ಮುಸ್ಲಿಂ, ‘ಪ್ರವರ್ಗ 3ಎ’ಯಲ್ಲಿರುವ ಕೊಡಗು, ಬಲಿಜ ಮತ್ತು 12 ಉಪ ಜಾತಿಗಳು, ‘ಪ್ರವರ್ಗ 3ಬಿ’ಯಲ್ಲಿರುವ ಮರಾಠ ಮತ್ತು 5 ಉಪ ಜಾತಿಗಳು, ಕ್ರಿಶ್ಚಿಯನ್, ಬಂಟ್ ಮತ್ತು ಉಪ ಜಾತಿ, ಜೈನ್, ಸಾತಾನಿ ಮತ್ತು 6 ಉಪಜಾತಿಗಳು ಸೇರಿ ಒಟ್ಟು 32 ಜಾತಿ	6.6
ಪ್ರವರ್ಗ 4	ಮೀಸಲಾತಿ ಪಟ್ಟಿಯ ‘ಪ್ರವರ್ಗ 3ಎ’ಯಲ್ಲಿರುವ ಒಕ್ಕಲಿಗ ಮತ್ತು 19 ಉಪ ಜಾತಿಗಳು (ಒಟ್ಟು 20 ಜಾತಿಗಳು), ‘ಪ್ರವರ್ಗ 3ಬಿ’ ಯಲ್ಲಿರುವ ವೀರಶೈವ ಲಿಂಗಾಯತ ಮತ್ತು ಉಪ ಜಾತಿಗಳು	6.6

* ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ಆಯೋಗದ ಶಿಫಾರಸು

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಟ್ಟು ಸ್ಥಾನಗಳಲ್ಲಿ ಹಿಂದುಳಿದ ಜಾತಿಗಳಿಗೆ ಶೇ 33ರಷ್ಟು ಮೀಸಲಾತಿಯಿದೆ. ಚುನಾವಣೆ ಉದ್ದೇಶಕ್ಕೆ ಹಿಂದುಳಿದ ವರ್ಗಗಳನ್ನು ಪ್ರವರ್ಗ 1, 2, 3 ಮತ್ತು 4 ಎಂದು ಮರು ವರ್ಗೀಕರಿಸಿ, ಮೊದಲ ಎರಡು ಪ್ರವರ್ಗಗಳಿಗೆ ತಲಾ ಶೇ 9.9ರಂತೆ ಮತ್ತು ಪ್ರವರ್ಗ 3 ಮತ್ತು 4ಕ್ಕೆ ತಲಾ ಶೇ 6.6ರಂತೆ ಹಂಚಿಕೆ ಮಾಡಬಹುದು ಎಂದು ಆಯೋಗ ತಿಳಿಸಿದೆ.



ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಲು ನಾಲ್ಕು ಪ್ರವರ್ಗಗಳಾಗಿ ವರ್ಗೀಕರಿಸಲು ಶಿಫಾರಸು ಮಾಡಲಾಗಿದೆ

ಕೆ. ಭಕ್ತವತ್ಸಲ
ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ಹಿಂದುಳಿದ ವರ್ಗಗಳ ಮರು ವರ್ಗೀ ಕರಣವೂ ಸೇರಿದಂತೆ ಒಟ್ಟು ಐದು ಶಿಫಾರಸುಗಳನ್ನು ಒಳಗೊಂಡ ಮುಖ್ಯ ವರದಿಯನ್ನು 2022ರ ಜುಲೈ 21ರಂದೇ ಸರ್ಕಾರಕ್ಕೆ ಆಯೋಗವು ಸಲ್ಲಿಸಿತ್ತು.

ಆ ವರದಿಯಲ್ಲಿದ್ದ ಅಂಶಗಳನ್ನೇ ಪುನರುಚ್ಚರಿಸಿ 2022ರ ಅ. 31ರಂದು ಪೂರಕ ವರದಿಯನ್ನೂ ನೀಡಿತ್ತು. ಆ ಶಿಫಾರಸುಗಳ ಪೈಕಿ, ರಾಜ್ಯ ಸರ್ಕಾರವು ಅಲ್ಪಸಂಖ್ಯಾತರೂ ಸೇರಿದಂತೆ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಪರಿಣಾಮಕಾರಿಯಾಗಿ ಮೀಸಲಾತಿ ನೀಡುವ ಉದ್ದೇಶದಿಂದ, 2027 ಅಥವಾ 2028ರಲ್ಲಿ ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಮೊದಲು ಹಿಂದುಳಿದ ವರ್ಗಗಳಲ್ಲಿ ಇನ್ನೂ ಎರಡು ಪ್ರವರ್ಗಗಳನ್ನು ಸೃಜಿಸಲು ಹಿಂದುಳಿದ ವರ್ಗಗಳ ‘ಪ್ರವರ್ಗ ಎ’ ಮತ್ತು ‘ಪ್ರವರ್ಗ ಬಿ’ಯನ್ನು ಮರು ವಿಂಗಡಿಸುವ ಬಗ್ಗೆ ಪರಿಶೀಲಿಸಬಹುದು ಎಂದು ಮಾಡಿದ್ದ ಶಿಫಾರಸಿನ ವರದಿಯನ್ನು ಆಯೋಗ ಸಲ್ಲಿಸಿದೆ. ಕೆಲಸ ಮುಗಿದಿರುವುದರಿಂದ ಆಯೋಗವನ್ನು ವಿಸರ್ಜಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

11ನೇ ಪುಟ ನೋಡಿ



ಶಿವಮೊಗ್ಗ ಸಮೀಪದ ಗಾಜನೂರಿನ ತುಂಗಾ ಜಲಾಶಯ ಬುಧವಾರ ಭರ್ತಿಯಾಗಿದೆ

ಭಾರಿ ಮಳೆಗೆ ಐದು ಜನ, ಮೂರು ಜಾನುವಾರು ಸಾವು

ತುಂಗಾ ಜಲಾಶಯ ಭರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಹಾವೇರಿ, ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಬುಧವಾರವೂ ಮಳೆ ಮುಂದುವರಿದಿದೆ.

ಕೊಡಗು ಜಿಲ್ಲೆಯಲ್ಲಿ ಹಾರಂಗಿ ಜಲಾಶಯದ ಒಳ ಹರಿವು 1,500 ಕ್ಯೂಸೆಕ್ ದಾಟಿದೆ. 2,859 ಗರಿಷ್ಠ ಅಡಿಯ ಜಲಾಶಯದಲ್ಲಿ ಸದ್ಯ, 2823.99 ಅಡಿ ನೀರಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಗಾಜನೂರಿನ ತುಂಗಾ ಜಲಾಶಯ ಭರ್ತಿಯಾಗಿದೆ. ತುಂಗಾ, ಭದ್ರಾ, ಲಿಂಗನಮಕ್ಕಿ, ಮಾಣಿ ಸೇರಿದಂತೆ ಪ್ರಮುಖ ಜಲಾಶಯಗಳಿಗೆ ಒಳ ಹರಿವಿನ ಪ್ರಮಾಣ ಹೆಚ್ಚಿದೆ.

ಮಳೆ ಸಂಬಂಧಿತ ಅವಘಡಗಳಲ್ಲಿ ಐದು ಜನ ಮೃತಪಟ್ಟಿದ್ದು, 3 ಜಾನುವಾರುಗಳು ಸಾವಿಗೀಡಾಗಿವೆ.

ಮಂಗಳೂರು ಬಳಿಯ ಕುಳಾಯಿ ಎಂಬಲ್ಲಿ ಬಿರುಗಾಳಿಗೆ ಮರದ ಜತೆಗೆ ಉರುಳಿಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಕಾರ್ಮಿಕ ಸಂತೋಷ್ (34) ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಮರ ಬಿದ್ದು ರಸ್ತೆ ಬಂದ್ ಆಗಿದ್ದರಿಂದ ಸಂತೋಷ್ ಕೆಲಸಕ್ಕೆ ಹೋಗಲು ಕಾಂಪೌಂಡ್ ಹಾರಲು ಹೋದಾಗ ಈ ಅವಘಡ ಸಂಭವಿಸಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಮಳೆ ವಿವರ ಪಟ್ಟಿ (ಸೆಂ.ಮೀ)

ಪಡುವರಿ (ಉಡುಪಿ)	22.1	ಮೂಲ್ಕಿ (ದಕ್ಷಿಣಕನ್ನಡ)	17
ಯಡ್ತರೆ (ಉಡುಪಿ)	20.7	ಮಲಂತಬೆಟ್ಟು (ದಕ್ಷಿಣ ಕನ್ನಡ)	16.9
ರೆಂಜಾಳ (ಉಡುಪಿ)	20.5	ಪದವಿನಂಗಡಿ (ದಕ್ಷಿಣ ಕನ್ನಡ)	16.7
ಮರೋಡಿ (ದಕ್ಷಿಣ ಕನ್ನಡ)	20.2	ಕೆರ್ಗಾಲು (ಉಡುಪಿ)	16.4
ಶಿರೂರು (ಉಡುಪಿ)	19.6	ಲಾಯಿಲ (ದಕ್ಷಿಣ ಕನ್ನಡ)	16.2
ಬಳಂಜ (ದಕ್ಷಿಣ ಕನ್ನಡ)	19.6	ಕಾಶಿಪಟ್ಣ(ದಕ್ಷಿಣ ಕನ್ನಡ)	16
ಮುಂಡಳ್ಳಿ (ಉತ್ತರಕನ್ನಡ)	19	ಆಗುಂಬೆ (ಶಿವಮೊಗ್ಗ)	15.54
ಪಜೀರು (ದಕ್ಷಿಣ ಕನ್ನಡ)	18.8	ಮಣಿಪುರ, ವಡ್ಡರ್ಸೆ(ಉಡುಪಿ)	15.4
ಶಿರವಾಡ,ಕಾರವಾರ, ಹೊನ್ನಾವರ (ಉತ್ತರಕನ್ನಡ)	18.8	ತೆಕ್ಕಾರು (ದಕ್ಷಿಣ ಕನ್ನಡ)	15.4
ಅಳದಂಗಡಿ(ದಕ್ಷಿಣ ಕನ್ನಡ)	18.5	ಮಾಣಿ (ಶಿವಮೊಗ್ಗ)	14.2
ಉಪ್ಪುಂದ (ಉಡುಪಿ)	18.2	ಹುಲಿಕಲ್ ಘಾಟ (ಶಿವಮೊಗ್ಗ)	12.7
ಕಾಲ್ತೋಡು (ಉಡುಪಿ)	17.6		
ಕಾಂತಾವರ(ಉಡುಪಿ)	17.5		
ಕುಕ್ಕೇಡಿ (ದಕ್ಷಿಣ ಕನ್ನಡ)	17.5		

5ನೇ ಪುಟ ನೋಡಿ

‘ಶರದ್ ಪವಾರ್ ನಿವೃತ್ತರಾಗಲಿ’

ಮುಖ್ಯಮಂತ್ರಿಯಾಗುವ ಇಚ್ಛೆ ಪುನರುಚ್ಚರಿಸಿದ ಡಿಸಿಎಂ ಅಜಿತ್ ಪವಾರ್

ಪ್ರಜಾವಾಣಿ ವಾರ್ತೆ

ಮುಂಬೈ: ‘ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಸಂಸ್ಥಾಪಕ ಶರದ್ ಪವಾರ್ ಅವರು ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಬೇಕು ಹಾಗೂ ನಮಗೆ ಮಾರ್ಗದರ್ಶನ ಮಾಡುವ ಜವಾಬ್ದಾರಿ ಹೊತ್ತುಕೊಳ್ಳಬೇಕು’ ಎಂದು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಬುಧವಾರ ಹೇಳಿದರು.

ಹಿಂದೆಂದೂ ಕಾಣಿಸದಷ್ಟು ಭಾವೋದ್ವೇಗಕ್ಕೆ ಒಳಗಾಗಿದ್ದ ಅವರು, ಮುಖ್ಯಮಂತ್ರಿಯಾಗಬೇಕು ಎಂಬ ತಮ್ಮ ಮಹತ್ವಾಕಾಂಕ್ಷೆಯನ್ನು ಮತ್ತೊಮ್ಮೆ ಬಹಿರಂಗವಾಗಿ ವ್ಯಕ್ತಪಡಿಸಿದರು.

ಶರದ್ ಪವಾರ್ ಅವರಿಂದಾಗಿಯೇ ರಾಜಕೀಯದಲ್ಲಿ ಯಶಸ್ಸಿನ ಏಣಿ ಏರಿರುವ ಅಜಿತ್ ಪವಾರ್, ಅವರ ವಿರುದ್ಧವೇ ವಾಗ್ದಾಳಿ ನಡೆಸಿ ಅಚ್ಚರಿ ಮೂಡಿಸಿದರು. ‘ನನ್ನನ್ನು ಖಳನಾಯಕನಂತೆ ಅವರು ಚಿತ್ರಿಸುತ್ತಿದ್ದಾರೆ’ ಎಂದು ಆರೋಪಿಸಿದರು.

ಬಾಂದ್ರಾದ ಮುಂಬೈ ಎಜುಕೇಷನ್ ಟ್ರಸ್ಟ್ ಸಂಕೀರ್ಣದಲ್ಲಿ ಆಯೋಜಿಸಿದ್ದ ತಮ್ಮೊಂದಿಗೆ ಗುರುತಿಸಿಕೊಂಡಿರುವ ಶಾಸಕರು, ವಿಧಾನಪರಿಷತ್ ಸದಸ್ಯರು ಹಾಗೂ ಬೆಂಬಲಿಗರ ಸಭೆಯಲ್ಲಿ ಅವರು ಮಾತನಾಡಿದರು.

> **ನಾನು ಇವತ್ತು ಸ್ವಲ್ಪವೇ ಮಾತನಾಡಿರುವೆ. ರ‍್ಯಾಲಿಗಳನ್ನು ಆಯೋಜಿಸುವುದಾಗಿ ಈಗ ನೀವು (ಶರದ್ ಪವಾರ್) ಹೇಳುತ್ತಿದ್ದೀರಿ. ಹಾಗಾದಲ್ಲಿ ನಾನೂ ಬಹಿರಂಗ ಸಭೆಗಳನ್ನು ಹಮ್ಮಿಕೊಳ್ಳುತ್ತೇನೆ**
> **ಅಜಿತ್ ಪವಾರ್,** ಉಪ ಮುಖ್ಯಮಂತ್ರಿ

‘ಚಿಕ್ಕಪ್ಪನ ಬಗ್ಗೆ ಅಪಾರ ಗೌರವ ಇದೆ. ಆದರೆ, ಅವರು ತಮ್ಮ ರಾಜಕೀಯ ಪಯಣದಲ್ಲಿ ವಿಶ್ರಮಿಸಿ, ಹೊಸ ಪೀಳಿಗೆ ನಾಯಕರು ಬೆಳೆಯಲು ಅವಕಾಶ ಮಾಡಿಕೊಡುವುದು ಅಗತ್ಯ’ ಎಂದು ಅಜಿತ್ ಪವಾರ್ ಹೇಳಿದರು.

‘ಐಎಎಸ್ ಅಧಿಕಾರಿಗಳು 60ನೇ ವಯಸ್ಸಿಗೆ ನಿವೃತ್ತರಾಗುತ್ತಾರೆ. ರಾಜಕಾರಣಕ್ಕೆ ಬಂದರೆ, ಬಿಜೆಪಿ ನಾಯಕರು 75 ವರ್ಷ ತುಂಬಿದಾಗ ನಿವೃತ್ತರಾಗುತ್ತಾರೆ. ಲಾಲ್‌ಕೃಷ್ಣ ಅಡ್ವಾಣಿ, ಮುರಳಿಮನೋಹರ್ ಜೋಶಿ ಅವರಂತಹ ಹಿರಿಯರು ನಿವೃತ್ತರಾದ ನಿದರ್ಶನಗಳಿವೆ. ಹಿರಿಯರ ಇಂತಹ ನಡೆಯಿಂದ ಹೊಸ ತಲೆಮಾರಿನವರು ಬೆಳೆಯಲು ಅವಕಾಶ ಸಿಗುತ್ತದೆ. ಹೀಗಾಗಿ ನೀವು ನಮಗೆ ಆಶೀರ್ವಾದ ಮಾಡಬೇಕು’ ಎಂದು ಶರದ್ ಪವಾರ್ ಅವರನ್ನು ಉದ್ದೇಶಿಸಿ ಹೇಳಿದರು.

‘ನಿಮಗೆ ಈಗ 83 ವರ್ಷ ತುಂಬಿದೆ. ಈಗ ನೀವು ವಿಶ್ರಾಂತಿ ಪಡೆಯುವ ಹಂತವಿದು. ನೀವು ಶತಾಯುಷಿಯಾಗಬೇಕು ಎಂಬುದು ನಮ್ಮ ಆಶಯ. ನೀವು ನಮ್ಮ ಆರಾಧ್ಯ ದೈವ, ನನ್ನನ್ನು ಹರಸಿ’ ಎಂದು ಕೋರಿದರು. ‘ಪವಾರ್ ಸಾಹೇಬರ ಮನವೊಲಿಸುವಂತೆ ಸುಪ್ರಿಯಾ ಸುಳೆ ಅವರಿಗೆ ಹೇಳಿದೆ. ನನ್ನ ಮಾತು ಕೇಳುತ್ತಿಲ್ಲ. ಅವರು ಬಹಳ ಹಟವಾದಿ ಎಂದು ಸುಳೆ ಕೈಚೆಲ್ಲಿದರು. ಇದು ಎಲ್ಲಿವರೆಗೆ ನಡೆಯಬೇಕು’ ಎಂದು ಪ್ರಶ್ನಿಸಿದರು.

‘ನಾನು ನಿಮ್ಮಿಂದ ಸಾಕಷ್ಟು ಪಡೆದಿರುವೆ. ಐದು ಬಾರಿ ಉಪ ಮುಖ್ಯಮಂತ್ರಿಯಾಗಿದ್ದೆ. ದಾಖಲೆಗಳಲ್ಲಿ ಮಾತ್ರ ಆ ಹುದ್ದೆಗೇರಿದಂತಾಗಿತ್ತು. ಮಹಾರಾಷ್ಟ್ರದ ಸೇವೆ ಮಾಡಬೇಕು ಎಂಬ ಆಸೆ ಇದೆ. ಆದರೆ, ನಾನು ಮಾಡಿದ ತಪ್ಪಾದರೂ ಏನು? ನಾನು ನಿರ್ದಿಷ್ಟ ಕುಟುಂಬದಲ್ಲಿ ಜನಿಸಿಲ್ಲ ಎಂಬ ಕಾರಣಕ್ಕೆ ಈ ಹುದ್ದೆಯನ್ನು ನಿರಾಕರಿಸಲಾಗುತ್ತಿದೆಯೇ’ ಎನ್ನುವ ಮೂಲಕ ಮುಖ್ಯಮಂತ್ರಿ ಪದವಿಗೇರುವ ಆಕಾಂಕ್ಷೆಯನ್ನು ವ್ಯಕ್ತಪಡಿಸಿದರು.

ಮೇ ನಲ್ಲಿ ನಡೆದ ಪ್ರಸಂಗ ಪ್ರಸ್ತಾಪಿಸಿದ ಅವರು, ‘ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ, ನಂತರ ವಾಪಸ್ ಪಡೆದಿದ್ದು ಏಕೆ’ ಎಂದು ಪ್ರಶ್ನಿಸಿದರು. ‘ಸುಪ್ರಿಯಾ ಸುಳೆ ಅಧ್ಯಕ್ಷೆಯಾಗಲಿ ಎಂದರು. ಅದಕ್ಕೂ ನಾವು ಒಪ್ಪಿಕೊಂಡೆವು’ ಎಂದು ಅಜಿತ್ ಹೇಳಿದರು. ‘2004ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗಿಂತಲೂ ಎನ್‌ಸಿಪಿ ಹೆಚ್ಚು ಸ್ಥಾನಗಳನ್ನು ಗಳಿಸಿತ್ತು. ಆದರೆ, ಮುಖ್ಯಮಂತ್ರಿ ಸ್ಥಾನವನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡಲಾಯಿತು’ ಎಂದು ಟೀಕಿಸಿದರು.

‘ಮಹಾರಾಷ್ಟ್ರ ಮುಖ್ಯಮಂತ್ರಿಯಾಗಲು ಅರ್ಹತೆ ಹೊಂದಿರುವವರ ಪಟ್ಟಿ ಸಿದ್ಧಪಡಿಸಿದಲ್ಲಿ, ಆ ಸಾಮರ್ಥ್ಯ ಹೊಂದಿರುವ ನಾಯಕರ ಪೈಕಿ ನಾನು ಒಬ್ಬನಲ್ಲವೇ? ನನಗೆ ಯಾಕೆ ನಿಮ್ಮ ಆಶೀರ್ವಾದ ಸಿಗುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ಗೋಹತ್ಯೆ ನಿಷೇಧ ಕಾಯ್ದೆ ರದ್ದು ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಮತ್ತು ಸಂರಕ್ಷಣಾ ಅಧಿನಿಯಮ–2020 ರದ್ದುಪಡಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ಹೇಳಿದರು. ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಎನ್. ರವಿಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಗೋಹತ್ಯೆ ನಿಷೇಧ ಕಾಯ್ದೆಯ ಸಾಧಕ ಬಾಧಕಗಳ ಕುರಿತು ಚರ್ಚೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು. 7

ಹೊರರಾಜ್ಯದಿಂದ ಭಾರಿ ಬೇಡಿಕೆ

ಕೋಲಾರ: ಹೊರ ರಾಜ್ಯಗಳಿಂದ ಬೇಡಿಕೆ ಹೆಚ್ಚಾದ ಹಿನ್ನೆಲೆಯಲ್ಲಿ ಕೋಲಾರ ಎಪಿಎಂಸಿಯಿಂದ ಒಂದೇ ದಿನ 13 ರಾಜ್ಯಗಳಿಗೆ 41 ಲಾರಿ ಟೊಮೆಟೊ ಸರಬರಾಜು ಆಗಿದೆ.

ಹೊರ ರಾಜ್ಯಗಳಿಂದ ಹೆಚ್ಚುತ್ತಿರುವ ಬೇಡಿಕೆ ಹಿನ್ನೆಲೆಯಲ್ಲಿ ದಿನೇ ದಿನೇ ಟೊಮೆಟೊ ಧಾರಣೆ ಏರುತ್ತಲೇ ಇದೆ. ಆದರೆ, ಇಳುವರಿ ಕೊರತೆ ಕಾರಣ ಬೇಡಿಕೆಗೆ ತಕ್ಕಂತೆ ಟೊಮೆಟೊ ಪೂರೈಕೆ ಸಾಧ್ಯವಾಗುತ್ತಿಲ್ಲ. ತಿಂಗಳ ಅಂತ್ಯಕ್ಕೆ ಟೊಮೆಟೊ ಬೆಲೆ ಇನ್ನೂ ದುಬಾರಿ ಆಗುವ ಸಾಧ್ಯತೆ ಇದೆ. 7

ಜಮೀನಿನಿಂದಲೇ ಟೊಮೆಟೊ ಕಳವು

ಹಳೇಬೀಡು: ಸಮೀಪದ ಗಣಿ ಸೋಮನಹಳ್ಳಿಯ ರೈತ ಸೋಮಶೇಖರ್ ಅವರ ಜಮೀನಿಗೆ ಮಂಗಳವಾರ ರಾತ್ರಿ ನುಗ್ಗಿದ ದುಷ್ಕರ್ಮಿಗಳು ಟೊಮೆಟೊ ಬೆಳೆಯನ್ನು ಕಟಾವು ಮಾಡಿಕೊಂಡು ಕದ್ದೊಯ್ದಿದ್ದಾರೆ. ದರ ಹೆಚ್ಚಾಗಿರುವ ಸಂದರ್ಭದಲ್ಲೇ ಕಳವಾಗಿರುವುದರಿಂದ ಸೋಮಶೇಖರ್ ಚಿಂತೆಗೆ ಬಿದ್ದಿದ್ದಾರೆ. 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಗರದಲ್ಲಿ ಇಂದು

1008 ಜಯತೀರ್ಥರ ಆರಾಧನಾ ಮಹೋತ್ಸವ: ಪೂರ್ವಾರಾಧನೆ ಚತುರ್ಥಿ ಬೆಳಿಗ್ಗೆ 8ಕ್ಕೆ, ಅಲಂಕಾರ ಸೇವೆ ತೀರ್ಥ ಪ್ರಸಾದ ಮಧ್ಯಾಹ್ನ 12.30ಕ್ಕೆ, ಮೈಸೂರು ರಾಮಚಂದ್ರಾಚಾರ್ಯ ಸಂಗೀತ ಸಂಜೆ 7ಕ್ಕೆ, ಆಯೋಜನೆ ಮತ್ತು ಸ್ಥಳ: ದಿಗ್ವಿಜಯ ಲಕ್ಷ್ಮೀನರಸಿಂಹ ದೇವರ ಸನ್ನಿಧಾನ, ಉತ್ತರಾದಿಮಠ, ಬಸವನಗುಡಿ

ಮಾಡೆಲ್ ಜಿ-20 ಸಮ್ಮಿಟ್ ಉದ್ಘಾಟನೆ: ಮೀನಾಕ್ಷಿ ಲೇಖಿ, ಅಧ್ಯಕ್ಷತೆ: ಚೆನ್‌ರಾಜ್ ರಾಯಚಂದ್, ಉಪಸ್ಥಿತಿ: ರವೀಂದ್ರ ಭಂಡಾರಿ, ರಾಜ್ ಸಿಂಗ್, ಅಶ್ವರನ್ ಐಯ್ಯರ್, ಎಸ್.ವಿ.ಎಚ್. ಕೃಷ್ಣನ್, ಎಂ.ಎಸ್. ಸಂತೋಷ್, ಆಯೋಜನೆ ಮತ್ತು ಸ್ಥಳ: ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

'ನಾಡಹಬ್ಬ', 'ಚಮ್ಮಾರನ ಚಾಲಾಕಿ ಹೆಂಡತಿ' ನಾಟಕ ಪ್ರದರ್ಶನ: ಉದ್ಘಾಟನೆ: ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿ: ಎಂ.ಆರ್. ದೊರೆಸ್ವಾಮಿ, ಉಪಸ್ಥಿತಿ: ಪಿ.ಟಿ. ಶ್ರೀನಿವಾಸ ನಾಯಕ, ರಂಗಗೌರವ: ಎಸ್. ಬಾಲಾಜಿ, ಪ್ರದೀಪ್ ತಿಪಟೂರು, ಆಯೋಜನೆ: ಸರ್ಕಾರಿ ಕಲಾ ಕಾಲೇಜು, ಸ್ಥಳ: ಕಲಾಂಗಣ, ಸರ್ಕಾರಿ ಕಾಲೇಜು, ಬೆಳಿಗ್ಗೆ 10ರಿಂದ

ಅಂತರ ಕಾಲೇಜು ಪುರುಷರ ಕಬಡ್ಡಿ ಪಂದ್ಯಾವಳಿ ಉದ್ಘಾಟನೆ: ಎನ್.ಟಿ. ಸೋಮಶೇಖರ್, ಪಿ. ಗೋಪಾಲಪ್ಪ, ಉಪಸ್ಥಿತಿ: ನಿರ್ಮಲ್ ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಟಿ.ಆರ್. ವೆಂಕಟರೆಡ್ಡಿ, ಅಧ್ಯಕ್ಷತೆ: ಬಿ.ಸಿ. ಶಿವಲಿಂಗೇಗೌಡ, ಆಯೋಜನೆ: ಬಿ.ಇ.ಎಸ್. ಕಾಲೇಜು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಬಿ.ಇ.ಎಸ್. ಕಾಲೇಜು ಮೈದಾನ, ಜಯನಗರ, ಬೆಳಿಗ್ಗೆ 10ರಿಂದ

ವೀರಶೈವ ಲಿಂಗಾಯತ ಸಚಿವರು, ಶಾಸಕರಿಗೆ ಅಭಿನಂದನಾ ಸಮಾರಂಭ: ಅಧ್ಯಕ್ಷತೆ: ಶಾಮನೂರು ಶಿವಶಂಕರಪ್ಪ, ಉಪಸ್ಥಿತಿ: ಭೀಮಣ್ಣ ಖಂಡ್ರೆ, ಎಸ್. ತಿಪ್ಪಣ್ಣ, ಆಯೋಜನೆ: ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5

ಹೈ ಟೀ: ಅತಿಥಿ: ಅಹಲ್ಯಾ ಶರ್ಮಾ, ಅಧ್ಯಕ್ಷತೆ: ಎಸ್.ಆರ್. ಪಂಡಿತಾರಾಧ್ಯ, ಆಯೋಜನೆ: ಶೇಷಾದ್ರಿಪುರ ಎಜುಕೇಷನಲ್ ಟ್ರಸ್ಟ್, ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಸಂಜೆ 5

'ವಿಜ್ಞಾನ ಮತ್ತು ಧರ್ಮ ಪರಸ್ಪರ ವಿರುದ್ಧವಾಗಿವೆಯೇ ಅಥವಾ ಪೂರಕವಾಗಿವೆಯೇ?' ಉಪನ್ಯಾಸ: ಪ್ರವೀಣ್ ಕುಮಾರ್ ಆರ್., ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡ ನಗರ, ಸಂಜೆ 6.30

ಪ್ರವಚನ ಮಾಲಿಕೆ: 'ಸಾಮೂಹಿಕ ಸಂಕಷ್ಟಹರ ಗಣಪತಿ ಪೂಜೆ', ಆಯೋಜನೆ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಮಾತಾ' ನಾಟಕ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ಅಭಿನಯ: ಅರುಣ್ ಕುಮಾರ್, ಆಯೋಜನೆ: ಕಾಜಾಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ಈ ಹೊತ್ತಿಗೆ ಕಥಾ ಕಮ್ಮಟಕ್ಕೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಹೊತ್ತಿಗೆ ಟ್ರಸ್ಟ್' ದಶಮಾನೋತ್ಸವ ಸಂಭ್ರಮದ ನಿಮಿತ್ತ ಸೆಪ್ಟೆಂಬರ್ 23 ಮತ್ತು 24ರಂದು 'ಈ ಹೊತ್ತಿಗೆ ಕಥಾ ಕಮ್ಮಟ'ವನ್ನು 'ಅರಿವು' ಬಳ್ಳಾರಿ ಸಹಯೋಗದೊಂದಿಗೆ ಬಳ್ಳಾರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಮರ್ಶಕಿ ಎಂ.ಎಸ್. ಆಶಾದೇವಿ ಕಮ್ಮಟದ ನಿರ್ದೇಶಕಿಯಾಗಿರುತ್ತಾರೆ. ಎಸ್. ದಿವಾಕರ್, ಅಮರೇಶ ನುಗಡೋಣಿ, ಕೇಶವ ಮಳಗಿ ಮತ್ತು ಜಯಶ್ರೀ ಕಾಸರವಳ್ಳಿ ಸಂಪನ್ಮೂಲ ವ್ಯಕ್ತಿಗಳಾಗಿರುತ್ತಾರೆ.

ಈ ಕಮ್ಮಟದಲ್ಲಿ ಭಾಗವಹಿಸಲು ಬಯಸುವವರು ಪರಿಚಯ, ಸಂಪರ್ಕ ಸಂಖ್ಯೆ, ಭಾವಚಿತ್ರ ಮತ್ತು ಸ್ವರಚಿತ ಎರಡು ಕಥೆಗಳನ್ನು ehottige.ks@gmail.comಗೆ ಆಗಸ್ಟ್ 10ರ ಒಳಗೆ ಕಳುಹಿಸಿಕೊಡಬೇಕು. 30 ಜನರಿಗೆ ಮಾತ್ರ ಅವಕಾಶ ಇರುತ್ತದೆ.

ಮಾಹಿತಿಗೆ ಮೊಬೈಲ್: 9611782621, 9900222621 ಸಂಪರ್ಕಿಸುವಂತೆ ಈ ಹೊತ್ತಿಗೆ ಟ್ರಸ್ಟ್ ಅಧ್ಯಕ್ಷೆ ಜಯಲಕ್ಷ್ಮಿ ಪಾಟೀಲ್ ತಿಳಿಸಿದ್ದಾರೆ.

ರವಿವರ್ಮ, ಕೋಟಗಾನಹಳ್ಳಿ, ಸುಂದರರಾಜ್‌ಗೆ ಬರಗೂರು ಪ್ರಶಸ್ತಿ

ಮಾಗಡಿ: ನಾಡೋಜ ಡಾ.ಬರಗೂರು ಪ್ರತಿಷ್ಠಾನ ಪ್ರತಿವರ್ಷ ಸಿನಿಮಾ ಮತ್ತು ಸಾಹಿತ್ಯ ಕ್ಷೇತ್ರದವರಿಗೆ ನೀಡುವ 'ನಾಡೋಜ ಬರಗೂರು' ಪ್ರಶಸ್ತಿಗೆ ವಕೀಲ ರವಿವರ್ಮ ಕುಮಾರ್, ಸಾಹಿತಿ ಕೋಟಗಾನಹಳ್ಳಿ ರಾಮಯ್ಯ ಮತ್ತು ಚಲನಚಿತ್ರ ನಟ ಸುಂದರರಾಜ್ ಅವರನ್ನು ಆಯ್ಕೆ ಮಾಡಲಾಗಿದೆ.

ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ಜುಲೈ7 ರಂದು ಸಂಜೆ 4.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಚಲನಚಿತ್ರ ನಿರ್ಮಾಪಕ ಚನ್ನೇಗೌಡ, ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಡಾ.ಪಿ.ಟಿ.ಶ್ರೀನಿವಾಸ ನಾಯಕ, ಡಾ. ಬರಗೂರು ರಾಮಚಂದ್ರಪ್ಪ ಹಾಗೂ ಬಳಗದವರು ಭಾಗವಹಿಸಲಿದ್ದಾರೆ ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಟೆಂಡರ್‌ನಲ್ಲಿ 4 ಕಂಪನಿಗಳು ಭಾಗಿ

ಬೆಂಗಳೂರು: ಉಪನಗರ ರೈಲು ಯೋಜನೆಯ ಬಹುನಿರೀಕ್ಷಿತ ಕಾರಿಡಾರ್ ಹೀಲಳಿಗೆ- ರಾಜಾನುಕುಂಟೆ ನಡುವಿನ 'ಕನಕ ಮಾರ್ಗ'ದ ನಿರ್ಮಾಣಕ್ಕೆ 4 ಕಂಪನಿಗಳು ಮುಂದಾಗಿವೆ. ಮಂಗಳವಾರ ನಡೆದ ಟೆಂಡರ್‌ನ ಬಿಡ್‌ನಲ್ಲಿ ಈ ಕಂಪನಿಗಳು ಭಾಗಿಯಾಗಿದ್ದವು.

ಒಟ್ಟು 46.88 ಕಿ.ಮೀ ಉದ್ದದ ಈ ಕಾರಿಡಾರ್ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿತ್ತು. ಎಲ್ ಅಂಡ್ ಟಿ ಕಂಪನಿ, ಆಫ್ಕಾನ್ಸ್ ಇನ್ಫ್ರಾಸ್ಟ್ರಕ್ಚರ್ ಸಂಸ್ಥೆ, ಇಂಟಾರ್ವೊ ಟೆಕ್ನಾಲಜೀಸ್ ಕಂಪನಿ, ದಿನೇಶ್ ಚಂದ್ರ ಆರ್ ಅಗರ್‌ವಾಲ್ ಇನ್ಫ್ರಾಸ್ಟ್ರಕ್ಚರ್‌ಕಂಪನಿಗಳು ಆಸಕ್ತಿ ತೋರಿಸಿವೆ ಎಂದು ಕೆ-ರೈಡ್ (ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ) ತಿಳಿಸಿದೆ.

ಎಂಜಿನಿಯರಿಂಗ್, ಪ್ರೊಕ್ಯುರ್‌ಮೆಂಟ್ ಮತ್ತು ಕನ್‌ಸ್ಟ್ರಕ್ಷನ್ ಒಳಗೊಂಡ 'ಇಪಿಸಿ' ಮಾದರಿಯಲ್ಲಿ ಟೆಂಡರ್ ಕರೆಯಲಾಗಿದೆ. 37.92 ಕಿ.ಮೀ ಗ್ರೇಡ್ ಸೆಕ್ಷನ್ ಹೊಂದಿರುವ ಮಾರ್ಗದಲ್ಲಿ 8.96 ಕಿ.ಮೀ ಎತ್ತರಿಸಿದ ಮಾರ್ಗವಿದೆ ಎಂದು ಪ್ರಕಟಣೆ ತಿಳಿಸಿದೆ.

ಪುನಶ್ಚೇತನಕ್ಕೆ ನಿರಾಸಕ್ತಿ, ಪ್ರವೇಶಕ್ಕೆ ವಿದ್ಯಾರ್ಥಿಗಳ ಹಿಂದೇಟು

ಚಲನಚಿತ್ರ ಸಂಸ್ಥೆಗೆ ಗ್ರಹಣ

• ಚಂದ್ರಹಾಸ ಹಿರೇಮಳಲಿ



ಬೆಂಗಳೂರಿನ ಹೆಸರಘಟ್ಟದಲ್ಲಿರುವ ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ

ಬೆಂಗಳೂರು: ಸಿನಿಮಾ ಕ್ಷೇತ್ರಕ್ಕೆ ಪ್ರತಿಭಾವಂತ ತಂತ್ರಜ್ಞರನ್ನು ಪರಿಚಯಿಸಲು ಸರ್ ಎಂ. ವಿಶ್ವೇಶ್ವರಯ್ಯ ಅವರು ಸ್ಥಾಪಿಸಿದ್ದ 'ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ' ಬಾಗಿಲು ಮುಚ್ಚುವ ಸ್ಥಿತಿ ತಲುಪಿದೆ.

1943ರಲ್ಲಿ ವಿಶ್ವೇಶ್ವರಯ್ಯ ಅವರು ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಸ್ಥಾಪಿಸಿದ್ದರು. ರಾಜ್ಯದಲ್ಲಿ ಚಿತ್ರೋದ್ಯಮ ನೆಲೆಯೂರುವ ಮೊದಲೇ ಚಲನಚಿತ್ರ ಮತ್ತು ಮಾಧ್ಯಮದ ಅಗತ್ಯಗಳನ್ನು ಮನಗಂಡು ಇದರಲ್ಲಿ 'ಸಿನಿಮಾಟೋಗ್ರಫಿ, ಸೌಂಡ್ ರೆಕಾರ್ಡಿಂಗ್ ಮತ್ತು ಎಂಜಿನಿಯರಿಂಗ್ 'ಕೋರ್ಸ್‌ಗಳನ್ನು ಪರಿಚಯಿಸಿದ್ದರು. 1996ರಲ್ಲಿ ಈ ಎರಡೂ ಕೋರ್ಸ್‌ಗಳಿಗಾಗಿಯೇ ಹೆಸರಘಟ್ಟದಲ್ಲಿ 'ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ' ಆರಂಭಿಸಲಾಗಿತ್ತು.

ಬಹು ಬೇಡಿಕೆ ಹೊಂದಿದ್ದ ಸಂಸ್ಥೆಗೆ ಸೇರಲು ಹಲವು ದಶಕಗಳು ವಿದ್ಯಾರ್ಥಿಗಳ ನಡುವೆ ಪೈಪೋಟಿ ಇತ್ತು. ಹೊರ ರಾಜ್ಯದ ವಿದ್ಯಾರ್ಥಿಗಳೂ ಅಧಿಕ ಸಂಖ್ಯೆಯಲ್ಲಿ ಪ್ರವೇಶ ಪಡೆ ಯುತ್ತಿದ್ದರು. ಸಂಸ್ಥೆಯಲ್ಲಿ ಕಲಿತ ಹಲವರು ಕನ್ನಡ ಸೇರಿದಂತೆ ವಿವಿಧ ಭಾಷೆಗಳ ಚಿತ್ರೋದ್ಯಮ ದಲ್ಲಿ ಅತ್ಯುತ್ತಮ ತಂತ್ರಜ್ಞರಾಗಿ ಹೆಸರು ಮಾಡಿದ್ದಾರೆ. ದೃಶ್ಯ ಮಾಧ್ಯಮ ಕ್ಷೇತ್ರಗಳಲ್ಲಿ ಉದ್ಯೋಗ ಕಂಡುಕೊಂಡಿದ್ದಾರೆ. ಆದರೆ, ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಸರ್ಕಾರಿ ತಾಂತ್ರಿಕ ಶಿಕ್ಷಣ ಸಂಸ್ಥೆ ಆಧುನೀಕರಣಗೊಳ್ಳದೆ ಬೇಡಿಕೆ ಕಳೆದುಕೊಂಡಿದೆ. ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ.

ಎಸ್‌ಎಸ್‌ಎಲ್‌ಸಿ ನಂತರ ಮೂರು ವರ್ಷಗಳ ಡಿಪ್ಲೊಮಾ, ಪಿಯು ನಂತರ ಪ್ರವೇಶ ಪಡೆದರೆ ಎರಡು ವರ್ಷಗಳ ಕಲಿಕೆಗೆ ಅಲ್ಲಿ ಅವಕಾಶವಿದೆ. ಮೂರು ವರ್ಷಗಳ ಆರೂ ಸೆಮಿಸ್ಟರ್ ಸೇರಿ ಪ್ರಸ್ತುತ ಇರುವ ವಿದ್ಯಾರ್ಥಿಗಳ ಸಂಖ್ಯೆ 54. ಅಂತಿಮ ವರ್ಷದಲ್ಲಿ 9 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯವಾದ ಉಪಕರಣಗಳು ಇಲ್ಲ. ಕ್ಯಾಮೆರಾ ಸೇರಿ ದಶಕಗಳ ಹಿಂದೆ ಖರೀದಿಸಿದ ಚಿತ್ರೋದ್ಯಮದ ತಾಂತ್ರಿಕ ಉಪಕರಣಗಳು ಉಪಯೋಗಕ್ಕೆ ಬಾರದಂತಾಗಿವೆ. ಹೊಸ ಉಪಕರಣ ಖರೀದಿಗೆ ಅನುದಾನ ನೀಡಿಲ್ಲ. 25 ಎಕರೆಯಲ್ಲಿ ನೆಲೆಗೊಂಡಿರುವ ಸಂಸ್ಥೆಯ ಕಟ್ಟಡಗಳಷ್ಟೇ ಸುಸ್ಥಿತಿಯಲ್ಲಿವೆ.

'₹ 4 ಸಾವಿರ ಶುಲ್ಕ ನೀಡಿ ಪ್ರವೇಶ ಪಡೆಯುತ್ತೇವೆ. ಅಂತಿಮ ವರ್ಷದಲ್ಲಿ ಪ್ರಾಜೆಕ್ಟ್ ವರ್ಕ್ ಮಾಡಲು ಕ್ಯಾಮೆರಾ ಬಾಡಿಗೆಗೆ ದಿನಕ್ಕೆ ₹ 30 ಸಾವಿರ ಖರ್ಚು ಮಾಡಬೇಕು. 50 ಸೆಕೆಂಡ್‌ನಿಂದ ಗರಿಷ್ಠ 30 ನಿಮಿಷದ ಕಿರುಚಿತ್ರ ನಿರ್ಮಿಸಲು ₹ 1.50 ಲಕ್ಷ ಖರ್ಚು ಮಾಡಿಸುತ್ತಾರೆ. ಪ್ರಾಜೆಕ್ಟ್ ಬದಲು ಚಲನಚಿತ್ರ ನಿರ್ಮಾಣ ಸಂಸ್ಥೆಗಳಲ್ಲಿ ಮೂರು ತಿಂಗಳು ಇಂಟರ್ನ್‌ಶಿಪ್‌ಗೆ ಅವಕಾಶವಿದ್ದರೂ ಪ್ರಾಂಶುಪಾಲರು ಒಪ್ಪುತ್ತಿಲ್ಲ. ಖರ್ಚು ಭರಿಸಲು ಸಾಧ್ಯವಾಗದೇ ವಿದ್ಯಾರ್ಥಿಗಳು ಅರ್ಧಕ್ಕೆ ಕಾಲೇಜು ತೊರೆಯುತ್ತಿದ್ದಾರೆ' ಎನ್ನುತ್ತಾರೆ ಪೋಷಕರಾದ ಕೆ.ಎಚ್. ಕುಮಾರ್.

ಇಡೀ ಕಾಲೇಜಿಗೆ ಇಬ್ಬರೇ ನೌಕರರು: ಹುದ್ದೆಗಳು ಖಾಲಿ ಇದ್ದರೂ ಸರ್ಕಾರ ಹಲವು ವರ್ಷಗಳಿಂದ ನೇಮಕಾತಿ ಮಾಡಿಲ್ಲ. 3 ವರ್ಷಗಳ ಹಿಂದೆ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕಾತಿಗೆ ಅರ್ಜಿ ಆಹ್ವಾನಿಸಿದರೂ, ಅರ್ಹ ಉಪನ್ಯಾಸಕರು ದೊರೆಯದೇ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಸದ್ಯಕ್ಕೆ ಪ್ರಾಂಶುಪಾಲರೂ ಸೇರಿ ಇಬ್ಬರೇ ಅಲ್ಲಿನ ಕಾಯಂ ಉದ್ಯೋಗಿಗಳು.

ಸಂಸ್ಥೆ ಉನ್ನತೀಕರಿಸಲು ಸಮಿತಿ ರಚಿಸಲಾಗಿತ್ತು. ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಅಗತ್ಯ ಅನುದಾನ ದೊರೆತ ತಕ್ಷಣ ಆಧುನಿಕ ಉಪಕರಣ ಖರೀದಿಸಲಾಗುವುದು.
–ಪ್ರದೀಪ್ ಕೆ., ಆಯುಕ್ತ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ.

ಪ್ರಾಜೆಕ್ಟ್ ವರ್ಕ್‌ಗೆ ಕಿರುಚಿತ್ರ ನಿರ್ಮಿಸಲು ಸಂಸ್ಥೆ ಹಣ ಪಡೆಯುವುದಿಲ್ಲ. ಉಪಕರಣ ಬಾಡಿಗೆಗೆ ವಿದ್ಯಾರ್ಥಿಗಳು ವೆಚ್ಚ ಮಾಡುತ್ತಾರೆ.
–ಟಿ.ಜಿ.ರವಿಕಿರಣ್, ಪ್ರಭಾರ ಪ್ರಾಂಶುಪಾಲ, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ.

₹42 ಸಾವಿರ
ವಾರ್ಷಿಕ ಶುಲ್ಕ

₹20 ಸಾವಿರ
ಹೊರರಾಜ್ಯದ ವಿದ್ಯಾರ್ಥಿಗಳ ಶುಲ್ಕ

₹1.50 ಲಕ್ಷ
ಉಪಕರಣದ ಬಾಡಿಗೆಗೆ ವಿದ್ಯಾರ್ಥಿಗಳು ಮಾಡುವ ಖರ್ಚು

ಅಕ್ರಮ ಎ ಖಾತಾ: ಮತ್ತೊಂದು ವಾರ ಗಡುವು

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ಎ ಖಾತಾ ನೋಂದಣಿ ಮಾಡಿರುವ ಮಾಹಿತಿಯನ್ನು ನೀಡಲು ಸಹಾಯಕ ಕಂದಾಯ ಅಧಿಕಾರಿಗಳಿಗೆ ಮತ್ತೊಂದು ವಾರ ಗಡುವು ನೀಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 9,736 ಆಸ್ತಿಗಳಿಗೆ ಅಕ್ರಮವಾಗಿ ಎ ಖಾತಾ ಮಾಡಿಕೊಟ್ಟಿರುವ ಬಗ್ಗೆ ಸಹಾಯಕ ಕಂದಾಯ ಅಧಿಕಾರಿಗಳು (ಎಆರ್‌ಒ) ಮಾಹಿತಿ ನೀಡಿದ್ದಾರೆ. ಆದರೆ ಈ ಸಂಖ್ಯೆ ಲಕ್ಷ ಮೀರುವ ಅಂದಾಜಿದ್ದು, ಇನ್ನೊಂದು ವಾರದಲ್ಲಿ ಎಲ್ಲ ಮಾಹಿತಿ ನೀಡುವಂತೆ ಎಲ್ಲ ಎಆರ್‌ಒಗಳಿಗೆ ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ಮತ್ತೊಮ್ಮೆ ಗಡುವು ನೀಡಿದ್ದಾರೆ.

ಬೊಮ್ಮನಹಳ್ಳಿ ವಲಯದಲ್ಲಿ 4,008, ರಾಜರಾಜೇಶ್ವರಿನಗರ– 3,666, ಮಹದೇವಪುರ– 925, ಪೂರ್ವ– 453, ಪಶ್ಚಿಮ– 139, ದಾಸರಹಳ್ಳಿ– 4 ಹಾಗೂ ದಕ್ಷಿಣ ವಲಯದಲ್ಲಿ ಒಂದು ಅಕ್ರಮ ಎ ಖಾತಾ ನೋಂದಣಿಯಾಗಿದೆ ಎಂದು ಎಆರ್‌ಒಗಳು ಮಾಹಿತಿ ನೀಡಿದ್ದಾರೆ. ಆದರೆ, ಇವುಗಳ ಸಂಖ್ಯೆ ಹೆಚ್ಚಿವೆ. ಇದನ್ನು ಮತ್ತೊಮ್ಮೆ ಪರಿಶೀಲಿಸಿ ವರದಿ ನೀಡಬೇಕು. ಇದನ್ನು ವಲಯಗಳ ಜಂಟಿ ಆಯುಕ್ತರು ನಿಗಾವಹಿಸಿ, ಒಂದು ವಾರದಲ್ಲಿ ವರದಿ ನೀಡಬೇಕು ಎಂದು ಸೂಚಿಸಲಾಗಿದೆ ಎಂದು ಜಯರಾಂ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಭೂ ಪರಿವರ್ತನೆಯಾಗದ, ಶುಲ್ಕ ಪಾವತಿಸದ ಆಸ್ತಿಗಳಿಗೆ ನಿಯಮಬಾಹಿರವಾಗಿ ಎ ಖಾತಾ ನೀಡಲಾಗಿದೆ. ಇವುಗಳನ್ನು ಬಿ ರಿಜಿಸ್ಟ್ರಾರ್‌ನಲ್ಲಿ ನಿರ್ವಹಿಸಬೇಕು. ಇಂತಹ ಪ್ರಕರಣಗಳ ತನಿಖೆಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಫೆಬ್ರುವರಿಯಲ್ಲಿ ಜಯರಾಂ ರಾಯಪುರ ನೇತೃತ್ವದಲ್ಲಿ ಪರಿಶೀಲನಾ ಸಮಿತಿ ರಚಿಸಿದ್ದರು. ನಾಲ್ಕು ತಿಂಗಳಾದರೂ ಇನ್ನೂ ಪರಿಶೀಲನೆ ನಡೆಯುತ್ತಿದ್ದು, ಎಆರ್‌ಒಗಳು ಮಾಹಿತಿ ನೀಡುತ್ತಿಲ್ಲ. ಹೀಗಾಗಿ, ಗಡುವು ಮುಂದಕ್ಕೆ ಹೋಗುತ್ತಿದೆ.



ಚಿತ್ರದುರ್ಗ ಎಸ್‌ಜೆ.ಎಂ. ಕಾನೂನು ಮಹಾವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ಚಿತ್ರದುರ್ಗದಲ್ಲಿ ನಡೆದ ಅಂತರಕಾಲೇಜು ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಬೆಂಗಳೂರು ನಗರದ ಬಿ.ಎಂ.ಎಸ್ ಕಾನೂನು ಮಹಾವಿದ್ಯಾಲಯದ ಮಹಿಳಾ ತಂಡ ಪ್ರಥಮ ಸ್ಥಾನ ಪಡೆಯಿತು. ತಂಡದಲ್ಲಿದ್ದ ಶೀತಲ್ ಡಿ., ಅನನ್ಯ ಕೆ.ಆರ್., ಶಿರೀಷಾ ಎಸ್ ಇದ್ದರು

‘ಡಿಕೆಶಿ ಏಳಿಗೆ ಸಹಿಸಲಾಗದೆ ಸಿಬಿಐ ತನಿಖೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ದಿನೇ ದಿನೇ ರಾಷ್ಟ್ರೀಯ ನಾಯಕನ ವರ್ಚಸ್ಸು ಲಭಿಸುತ್ತಿದೆ ಎಂಬ ಆತಂಕದಲ್ಲಿ ಅವರ ವಿರುದ್ಧ ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದಡಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಕಿರುಕುಳ ನೀಡಲಾಗುತ್ತಿದೆ’ ಎಂದು ಡಿ.ಕೆ.ಶಿವಕುಮಾರ್ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

‘ನನ್ನ ಬಳಿ ಇದ್ದ ಹಣಕ್ಕೆ ಬ್ಯಾಂಕ್ ಖಾತೆಯ ದಾಖಲೆ ಇಲ್ಲ ಎಂಬ ಕಾರಣ ದಡಿ; ಆದಾಯ ಮೀರಿದ ಆಸ್ತಿ ಗಳಿಕೆ ಆರೋಪದಡಿಯ ಎಫ್‌ಐಆರ್ ರದ್ದು ಪಡಿಸುವಂತೆ ಕೋರಿ ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರ ಶಿವಕುಮಾರ್ ಪರ ಸುದೀರ್ಘ ವಾದ ಮಂಡಿಸಿದ ಹಿರಿಯ ವಕೀಲ ಸಂದೇಶ್ ಚೌಟ ಅವರು, ‘ಶಿವಕುಮಾರ್ ಅವರ ನವದೆಹಲಿ, ಬೆಂಗಳೂರು ಸೇರಿದಂತೆ ಇತರೆಡೆಯ ಮನೆಗಳ ಮೇಲೆ 2017ರ ಆಗಸ್ಟ್ 2ರಂದು ಆದಾಯ ತೆರಿಗೆ (ಐಟಿ) ದಾಳಿ ನಡೆಸಲಾಗಿತ್ತು. ಆಗ ಅವರು ಈಗಲ್ ಟನ್ ರೆಸಾರ್ಟ್‌ನಲ್ಲಿದ್ದರು. ಈ ಮಾಹಿತಿ ತಿಳಿದ ಅಧಿಕಾರಿಗಳು ಅಲ್ಲಿಯೂ ದಾಳಿ ನಡೆಸಿದ್ದರು. ಅಂದಿನಿಂದ ಶಿವಕುಮಾರ್ ವಿರುದ್ಧ ಐಟಿ, ಜಾರಿ ನಿರ್ದೇಶನಾಲಯ ಮತ್ತು ಸಿಬಿಐ ಒಂದಾದ ಮೇಲೊಂದರಂತೆ ಪ್ರಕರಣ ದಾಖಲಿಸಿವೆ. ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿರುವ ಈ ಹಿಂದಿನ ರಾಜ್ಯ ಸರ್ಕಾರದ ಕ್ರಮ ಸಂಪೂರ್ಣ ಕಾನೂನು ಬಾಹಿರ’ ಎಂದು ಆರೋಪಿಸಿದರು.

ಕೋರ್ಟ್‌ನ ದಿನದ ಕಲಾಪದ ಅವಧಿ ಮೀರುತ್ತಿದ್ದ ಕಾರಣ ವಿಚಾರಣೆಯನ್ನು ಇದೇ 7ಕ್ಕೆ ಮುಂದೂಡಲಾಗಿದೆ.

ಆದಾಯ ತೆರಿಗೆ ಅಧಿಕಾರಿಗಳು ದಾಳಿ ನಡೆಸಿದ ಸಮಯದಲ್ಲಿ ಒಟ್ಟು ₹ 8.59 ಕೋಟಿ ಮೊತ್ತವನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಸಂಬಂಧ ಶಿವಕುಮಾರ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ವಿವಿಧ ಕಲಂಗಳ ಅಡಿಯಲ್ಲಿ 2020ರ ಅಕ್ಟೋಬರ್ 3ರಂದು ಸಿಬಿಐ ಪ್ರಕರಣ ದಾಖಲಿಸಿದೆ.

ವಕೀಲರ ನೇಮಕಕ್ಕೆ ನ್ಯಾಯಪೀಠ ಅಸ್ತು

ಬೆಂಗಳೂರು: ‘ಪಾಲಕರ ಪೋಷಣೆ, ಸಂರಕ್ಷಣೆ ಮತ್ತು ಹಿರಿಯ ನಾಗರಿಕರ ರಕ್ಷಣಾ ಕಾಯ್ದೆಯಡಿ ಪರಿಹಾರ ಕೋರಿ ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ಮುಂದೆ ಕ್ರಮವಾಗಿ ಅರ್ಜಿ ಮತ್ತು ಮೇಲ್ಮನವಿ ಸಲ್ಲಿಸುವ ಹಿರಿಯ ನಾಗರಿಕರು ತಮ್ಮ ಪರವಾಗಿ ವಕೀಲರನ್ನು ನೇಮಿಸಿಕೊಳ್ಳುವ ಹಕ್ಕು ಹೊಂದಿರುತ್ತಾರೆ’ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಉಡುಪಿ ಜಿಲ್ಲಾಧಿಕಾರಿ ಆದೇಶ ರದ್ದುಪಡಿಸಲು ಕೋರಿ ಅಂಬಲಪಾಡಿ ನಿವಾಸಿ ಕೆ.ಶ್ರೀನಿವಾಸ್ ಗಾಣಿಗ (82) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಪಾಲಕರ ಪೋಷಣೆ, ಸಂರಕ್ಷಣೆ ಮತ್ತು ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ-2007ರ ಅಡಿ ಸಲ್ಲಿಸಲಾಗುವ ಅರ್ಜಿ ಮತ್ತು ಮೇಲ್ಮನವಿಗೆ ಸಂಬಂಧಿಸಿದಂತೆ ಪಕ್ಷಗಾರರಾದ ಹಿರಿಯ ನಾಗರಿಕರು ನೇರವಾಗಿ ಮನವಿ ಸಲ್ಲಿಸಬೇಕು. ವಕೀಲರನ್ನು ಪ್ರತಿನಿಧಿಸಬಾರದು ಎಂಬುದನ್ನು ಕಡ್ಡಾಯಗೊಳಿಸಿರುವ ಕಾಯ್ದೆಯ ಕಲಂ 17, ವಕೀಲರ ಕಾಯ್ದೆ-1961ರ ಕಲಂ 30ಕ್ಕೆ ವಿರುದ್ಧವಾಗಿದೆ’ ಎಂದು ನ್ಯಾಯಪೀಠ ಘೋಷಿಸಿದೆ.

‘ಅರ್ಜಿ ಮತ್ತು ಮೇಲ್ಮನವಿ ಸಲ್ಲಿಸುವ ಪಕ್ಷಗಾರರನ್ನು ಪ್ರತಿನಿಧಿಸಲು ವಕೀಲರಿಗೆ ಅವಕಾಶ ನೀಡಲು ರಾಜ್ಯದ ಎಲ್ಲಾ ಎ.ಸಿ, ಡಿ.ಸಿಗೆ ನಿರ್ದೇಶಿಸಬೇಕು’ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆದೇಶಿಸಲಾಗಿದೆ. ಅರ್ಜಿದಾರರ ಪರ ವಕೀಲ ಡಿ.ಮೋಹನ್ ಕುಮಾರ್ ಮತ್ತು ಕೇಂದ್ರದ ಪರ ಡೆಪ್ಯುಟಿ ಸಾಲಿಸಿಟರ್ ಜನರಲ್ ಶಾಂತಿಭೂಷಣ್ ವಾದ ಮಂಡಿಸಿದ್ದರು.

‘ನನ್ನ ಮಕ್ಕಳು ಅಕ್ರಮವಾಗಿ ಆಸ್ತಿ ವರ್ಗಾಯಿಸಿಕೊಂಡಿ ದ್ದಾರೆ’ ಎಂದು ಆರೋಪಿಸಿ ಶ್ರೀನಿವಾಸ್ ಗಾಣಿಗ ಮೇಲ್ಮನವಿಯಲ್ಲಿ, ‘ನನ್ನ ಪರ ವಕೀಲರು ಪ್ರತಿನಿಧಿಸಲು ಅನುಮತಿಸಿ’ ಎಂದು ಕೋರಿದ್ದರು. ಆದರೆ, ಈ ಮನವಿಯನ್ನು ಉಡುಪಿ ಜಿಲ್ಲಾಧಿಕಾರಿ ತಿರಸ್ಕರಿಸಿದ್ದರು. ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ದುಡಿಯುವ ಪತ್ನಿ ಹೆಚ್ಚಿನ ಜೀವನಾಂಶ ಕೇಳುವಂತಿಲ್ಲ: ಹೈಕೋರ್ಟ್

ಬೆಂಗಳೂರು: ‘ದುಡಿಯಲು ಸಮರ್ಥವಾಗಿರುವ ಪತ್ನಿಯು ಪತಿಯಿಂದ ಹೆಚ್ಚಿನ ಜೀವನಾಂಶ ಕೋರಲು ಆಗದು’ ಎಂಬ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕೌಟುಂಬಿಕ ವ್ಯಾಜ್ಯವೊಂದರಲ್ಲಿ ಪತ್ನಿಗೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಘೋಷಿಸಿದ್ದ ಪ್ರತಿ ತಿಂಗಳ ₹ 10 ಸಾವಿರ ಜೀವನಾಂಶ ಹಾಗೂ ₹ 3 ಲಕ್ಷದ ಪರಿಹಾರವನ್ನು ಕ್ರಮವಾಗಿ ₹ 5 ಸಾವಿರ ಹಾಗೂ ₹ 2 ಲಕ್ಷಕ್ಕೆ ಇಳಿಕೆ ಮಾಡಿದ್ದ ಸೆಷನ್ಸ್ ನ್ಯಾಯಾಲಯದ ಕ್ರಮವನ್ನು ಎತ್ತಿ ಹಿಡಿದಿದೆ.

ಜೀವನಾಂಶ ಹಾಗೂ ಪರಿಹಾರದ ಮೊತ್ತ ಕಡಿತಗೊಳಿಸಿದ್ದ ಬೆಂಗಳೂರಿನ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆ ಮತ್ತು ಅವರ ಅಪ್ರಾಪ್ತ ವಯಸ್ಸಿನ ಪುತ್ರ ಸಲ್ಲಿಸಿದ್ದ ಕ್ರಿಮಿನಲ್ ಮರುಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ರಾಜೇಂದ್ರ ಬದಾಮಿಕರ್ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ದುಡಿಯುವ ಸಾಮರ್ಥ್ಯವಿರುವ ಪತ್ನಿ ಉದ್ಯೋಗವಿಲ್ಲದೆ ಸುಮ್ಮನೆ ಕುಳಿತು ಪತಿಯಿಂದಲೇ ಜೀವನಾಂಶ ಕೇಳುವಂತಾಗಬಾರದು. ಪತಿಯಿಂದ ಪೂರಕ ಜೀವನಾಂಶವನ್ನಷ್ಟೇ ಕೇಳಬಹುದು’ ಎಂದು ನ್ಯಾಯಪೀಠ ಹೇಳಿದೆ.

ಸಂಚಾರ ನಿಯಮ ಉಲ್ಲಂಘನೆ: ದಂಡಕ್ಕೆ ಶೇ 50 ರಿಯಾಯಿತಿ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ ಪ್ರಕರಣಗಳಿಗೆ ವಿಧಿಸಲಾದ ದಂಡದಲ್ಲಿ ಶೇ 50 ರಿಯಾಯಿತಿ ನೀಡಿ ಸರ್ಕಾರ ಆದೇಶಿಸಿದೆ. ಫೆ. 11ರ ಹಿಂದಿನ ಪ್ರಕರಣಗಳಿಗಷ್ಟೇ ಈ ಆದೇಶ ಅನ್ವಯವಾಗಲಿದೆ.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾಗಿರುವ ಹೈಕೋರ್ಟ್ ನ್ಯಾಯಮೂರ್ತಿ ಅಧ್ಯಕ್ಷತೆಯಲ್ಲಿ ಜೂನ್ ತಿಂಗಳಲ್ಲಿ ಸಭೆ ನಡೆದಿತ್ತು. ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್‌ನಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ದಂಡದ ಮೊತ್ತಕ್ಕೆ ರಿಯಾಯಿತಿ ನೀಡುವಂತೆ ಕೋರಲಾಗಿತ್ತು.

ಇದನ್ನು ಪರಿಗಣಿಸಿರುವ ಸಾರಿಗೆ ಇಲಾಖೆ ದಂಡದ ಮೊತ್ತ ಶೇ 50ರಷ್ಟು ಮಾತ್ರ ಪಡೆಯಲು ಆದೇಶಿಸಿದೆ. ದಂಡ ಮೊತ್ತದ ಅರ್ಧದಷ್ಟನ್ನು ಸೆ.9ರ ಒಳಗೆ ಪಾವತಿಸಿ, ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಆದೇಶ ಹೇಳಿದೆ.

35.60 ಲಕ್ಷ ಪ್ರಕರಣ ಇತ್ಯರ್ಥ: ಶೇ 50 ದಂಡ ಕಟ್ಟುವ ಅವಕಾಶವನ್ನು ಫೆಬ್ರುವರಿಯಲ್ಲಿ ಕೂಡ ನೀಡಲಾಗಿತ್ತು. ಆಗ 35.60 ಲಕ್ಷ ಪ್ರಕರಣಗಳು ಇತ್ಯರ್ಥವಾಗಿದ್ದವು. ₹ 102 ಕೋಟಿ ದಂಡ ಸಂಗ್ರಹವಾಗಿತ್ತು.

ದಕ್ಷಿಣ ಪಿನಾಕಿನಿ: ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ಹಾಗೂ ಬಳಕೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯಿಂದ ಸುಪ್ರೀಂ ಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳು ಬುಧವಾರ ಹಿಂದೆ ಸರಿದಿದ್ದಾರೆ.



ತಮಿಳುನಾಡು ಸಲ್ಲಿಸಿದ ಮೂಲ ದಾವೆಗೆ ಸಂಬಂಧಿಸಿದ ವಿಚಾರಣೆಯಿಂದ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ಎಂ.ಎಂ. ಸುಂದರೇಶ್ ಅವರಿದ್ದ ಪೀಠವು ಹೊರಗುಳಿಯಿತು. ‘ನಾವಿಬ್ಬರೂ ಇದನ್ನು ವಿಚಾರಣೆ ನಡೆಸಲು ಸಾಧ್ಯವಿಲ್ಲ’ ಎಂದು ಪೀಠ ಹೇಳಿತು. ‘ನಾವು ಈ ಪ್ರಕರಣದ ವಿಚಾರಣೆ ಪ್ರಾರಂಭಿಸಿದರೆ, ನಾವು ವಿವಾದದ ಬಗ್ಗೆ ಹೋರಾಡಲು ಪ್ರಾರಂಭಿಸಬಹುದು’ ಎಂದು ನ್ಯಾಯಮೂರ್ತಿಗಳು ಲಘು ದಾಟಿಯಲ್ಲಿ ಹೇಳಿದರು. ಈ ವಿಷಯವನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ಮುಂದೆ ಪಟ್ಟಿ ಮಾಡಲು ಸೂಚಿಸಿದರು.

ನ್ಯಾಯಮೂರ್ತಿ ಬೋಪಣ್ಣ ಅವರು ಕರ್ನಾಟಕದವರು ಹಾಗೂ ನ್ಯಾಯಮೂರ್ತಿ ಸುಂದರೇಶ್ ತಮಿಳುನಾಡಿನವರು.

‘ನ್ಯಾಯಮಂಡಳಿ ರಚನೆಯ ಪ್ರಸ್ತಾವನೆಯನ್ನು ಕೇಂದ್ರ ಸಚಿವ ಸಂಪುಟದ ಸಚಿವಾಲಯಕ್ಕೆ ಸಲ್ಲಿಸಲಾಗಿದೆ ಮತ್ತು ಅದರ ಅಂತಿಮ ಅನುಮೋದನೆಗೆ ಕಾಯುತ್ತಿದ್ದೇವೆ’ ಎಂದು ಕೇಂದ್ರ ಜಲಶಕ್ತಿ ಸಚಿವಾಲಯವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ದಕ್ಷಿಣ ಪಿನಾಕಿನಿ ಜಲವಿವಾದ ನ್ಯಾಯಮಂಡಳಿ ರಚಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಈ ವರ್ಷ ಮೇ ತಿಂಗಳಲ್ಲಿ ಒಂದು ತಿಂಗಳ ಕಾಲಾವಕಾಶ ನೀಡಿತ್ತು.

ಕಳೆದ ಶುಕ್ರವಾರ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿದ್ದ ಕರ್ನಾಟಕದ ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್, ‘ಯಾವುದೇ ಕಾರಣಕ್ಕೂ ನ್ಯಾಯಮಂಡಳಿ ರಚಿಸಬಾರದು. ಈ ವಿವಾದವನ್ನು ನಾವು ಮಾತುಕತೆಯ ಮೂಲಕ ಸೌಹಾರ್ದದಿಂದ ಬಗೆಹರಿಸಿಕೊಳ್ಳುತ್ತೇವೆ’ ಎಂದು ತಿಳಿಸಿದ್ದರು.

ವಿಭಜಕಕ್ಕೆ ಆಟೊ ಡಿಕ್ಕಿ: ಚಾಲಕ ಸಾವು

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊವೊಂದು ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕ ನಂಜುಂಡಸ್ವಾಮಿ (29) ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಿಂಗ್ ರಸ್ತೆಯ ರಾಜ್‌ಕುಮಾರ್ ಸ್ಮಾರಕ ಬಳಿ ಏಕಮುಖ ಸಂಚಾರದಲ್ಲಿ ಮಂಗಳವಾರ ಮಧ್ಯರಾತ್ರಿ ಆಟೊ ವೇಗವಾಗಿ ಚಲಿಸುತ್ತಿತ್ತು. ವಿಭಜಕಕ್ಕೆ ಡಿಕ್ಕಿಯಾಗಿದ್ದರಿಂದ ಚಾಲಕನ ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟರು. ಇಬ್ಬರು ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಕೌಟುಂಬಿಕ ಕಲಹ

ಬೆಂಗಳೂರು: ಮಾಗಡಿ ರಸ್ತೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಬಂಧಿಕರ ನಡುವೆ ನಡೆದ ಗಲಾಟೆಯಲ್ಲಿ ಹಲ್ಲೆಗೆ ಒಳಗಾಗಿದ್ದ ಯುವಕ ಬುಧವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಗೋಪಾಲಪುರ 3ನೇ ಕ್ರಾಸ್‌ನ ಮಹಾವೀರ್ ಮೆಡಿಕಲ್ ಹಿಂಭಾಗದ ನಿವಾಸಿ ಕೂಲಿಕಾರ್ಮಿಕ ಸೋನು ಪಾಷಾ (30) ಕೊಲೆಯಾದ ವ್ಯಕ್ತಿ.

‘ಸೋನು ಪಾಷಾ ಮಂಗಳವಾರ ಮಧ್ಯಾಹ್ನ ರಾಮಚಂದ್ರಪುರದಲ್ಲಿರುವ ಸಂಬಂಧಿಕರ ಮನೆಗೆ ತೆರಳಿದ್ದರು. ಅಲ್ಲಿ ಸಂಬಂಧಿಕರೇ ಆಗಿದ್ದ ಮಹಿಳೆಗೆ ಸೋನು ನಿಂದಿಸಿದ್ದರು ಎನ್ನಲಾಗಿದೆ. ಬಳಿಕ, ಸೋನು ಮನೆಗೆ ಬಂದಿದ್ದರು. ಮಹಿಳೆ ಗಲಾಟೆಯ ವಿಚಾರವನ್ನು ಕುಟುಂಬಸ್ಥರಿಗೆ ತಿಳಿಸಿದ್ದರು. ಗೋಪಾಲಪುರದ ಸೋನು ಪಾಷಾ ಮನೆಗೆ ಬಂದು, ಗಲಾಟೆ ನಡೆಸಿದ್ದರು. ಗಲಾಟೆ ವೇಳೆ ಕಬ್ಬಿಣದ ರಾಡಿನಿಂದ ಹಲ್ಲೆ ನಡೆಸಲಾಗಿತ್ತು. ತೀವ್ರವಾಗಿ ಗಾಯಗೊಂಡಿದ್ದ ಸೋನು ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಬುಧವಾರ ಸೋನು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ದೊಣ್ಣೆಯಿಂದ ಥಳಿತ

ಬೆಂಗಳೂರು: ಕಾಟನ್‌ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಜಾಲಿ ಮೊಹಲ್ಲದಲ್ಲಿ ಬಿಬಿಎಂಪಿಯ ಕಸ ಸಂಗ್ರಹಿಸುವ ಆಟೊ ಚಾಲಕ ಸತೀಶ್ ಅವರ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿ ಪರಾರಿಯಾಗಿ ದ್ದಾರೆ.

ದೊಣ್ಣೆ ಹಾಗೂ ಕ್ರಿಕೆಟ್ ಬ್ಯಾಟ್‌ನಿಂದ ಹಲ್ಲೆ ನಡೆಸುತ್ತಿರುವ ದೃಶ್ಯವು ರಸ್ತೆ ಪಕ್ಕದ ಅಂಗಡಿ ಹಾಗೂ ಮನೆಗಳ ಎದುರು ಅಳವಡಿಸಿರುವ ಸಿ.ಸಿ ಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ರಾಜೇಂದ್ರ ಹಾಗೂ ಮನು ಅವರ ಸ್ನೇಹಿತರು ಹಲ್ಲೆ ನಡೆಸಿದ್ದರು ಎನ್ನಲಾಗಿದೆ. ಗಂಭೀರವಾಗಿ ಗಾಯಗೊಂಡಿರುವ ಸತೀಶ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಶೋಧ ಆರಂಭಿಸಿದ್ದಾರೆ.

ಮೆಜೆಸ್ಟಿಕ್‌ನಲ್ಲಿ ಹಲ್ಲೆ

ಬೆಂಗಳೂರು: ನಗರದ ಮೆಜೆಸ್ಟಿಕ್ ಬಳಿಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಕಡೆಗೆ ತೆರಳುವ ಅಂಡರ್‌ಪಾಸ್ ನಲ್ಲಿ ಮೂವರು ದುಷ್ಕರ್ಮಿಗಳು, ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದಾರೆ.

ಗಾರೆ ಕೆಲಸ ಮಾಡಿಕೊಂಡಿರುವ ಮಡಿಕೇರಿ ನಗರದ ಕೃಷ್ಣಪ್ಪ, ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಕಡೆಯಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಕಡೆಗೆ ಅಂಡರ್‌ಪಾಸ್‌ನಲ್ಲಿ ತೆರಳುತ್ತಿದ್ದರು. ಮೂವರು ಅಡ್ಡಗಟ್ಟಿ ಹರಿತವಾದ ಆಯುಧದಿಂದ ಕುತ್ತಿಗೆ ಭಾಗಕ್ಕೂ ಹಲ್ಲೆ ನಡೆಸಿದ್ದಾರೆ. ಕೃಷ್ಣಪ್ಪ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಅಂಡರ್ ಪಾಸ್‌ನಲ್ಲಿ ಅಳವಡಿಸಿರುವ ಸಿಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ಆರೋಪಿಗಳ ಮಾಹಿತಿ ಸಿಕ್ಕಿದ್ದು, ಬಂಧನಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ನಾಲ್ಕು ದಿನ ಉತ್ತಮ ಮಳೆ

ಬೆಂಗಳೂರು: ನಗರದಲ್ಲಿ ಗುರುವಾರದಿಂದ ನಾಲ್ಕು ದಿನ ಉತ್ತಮ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಮೋಡ ಕವಿದ ವಾತಾವರಣ ಇರಲಿದೆ. ಮೇಲ್ಮೈ ಸುಳಿಗಾಳಿ ಜತೆಗೆ ಮಳೆಯೂ ಆಗಲಿದೆ ಎಂದು ತಿಳಿಸಿದೆ.

ಬುಧವಾರ ಮೋಡ ಕವಿದ ವಾತಾವರಣ ಇತ್ತು. ಬೆಳಿಗ್ಗೆ ನಾಗಸಂದ್ರ, ಯಲಹಂಕ, ಸುಂಕದಕಟ್ಟೆ, ರಿಂಗ್ ರಸ್ತೆ, ದಾಸರಹಳ್ಳಿಯಲ್ಲಿ ಮಳೆಯಾಗಿದೆ. ಮಧ್ಯಾಹ್ನ ಮೂರು ಗಂಟೆಯ ವೇಳೆಯಲ್ಲಿ ಅಶೋಕನಗರ, ಹಲಸೂರು, ಟ್ರಿನಿಟಿ, ಎಂ.ಜಿ.ರಸ್ತೆ, ಶಾಂತಿನಗರ, ಕಲ್ಯಾಣ ನಗರ, ಚಾಮರಾಜಪೇಟೆ, ಶಿವಾಜಿನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ.

ನಿಧನ ವಾರ್ತೆ

ಕಮಲಾ



ಬೆಂಗಳೂರು: ರಾಜರಾಜೇಶ್ವರಿ ನಗರದ ನಿಸರ್ಗ ಫಾರೆಸ್ಟ್ ಲೇಔಟ್‌ನ ನಿವಾಸಿ ಕಮಲಾ (54) ಬುಧವಾರ ನಿಧನರಾದರು. ಇವರಿಗೆ ಪತಿ, ಪುತ್ರ ಇದ್ದಾರೆ. ಕೆಂಗೇರಿಯ ರುದ್ರ ಭೂಮಿಯಲ್ಲಿ ಗುರುವಾರ ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ

‘ತೃತೀಯ ಲಿಂಗಿಗಳಿಗೆ ರಾಜಕೀಯ ಪ್ರಾತಿನಿಧ್ಯ ಅಗತ್ಯ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಎಲ್‌ಜಿಬಿಟಿಕ್ಯೂ ಸಮುದಾಯಕ್ಕೆ ಸಾಮಾಜಿಕ ನ್ಯಾಯ; ಚೇತನ್ ಅಹಿಂಸಾ
- ಶಾಶ್ವತ ನೆಲೆ ಸ್ಥಾಪಿಸಿಕೊಂಡರೆ ಮಾತ್ರ ತೃತೀಯ ಲಿಂಗಿಗಳಿಗೆ ಸೌಲಭ್ಯ
- ತೃತೀಯ ಲಿಂಗಿಗಳ ಅಭಿವೃದ್ಧಿಗೆ ನಿಗಮ ಮಂಡಳಿ ಸ್ಥಾಪಿಸಿ

ಬೆಂಗಳೂರು: ‘ತೃತೀಯ ಲಿಂಗಿಗಳ ಸರ್ವತೋಮುಖ ಅಭಿವೃದ್ಧಿಗೆ ರಾಜಕೀಯ ಪ್ರಾತಿನಿಧ್ಯ ಅಗತ್ಯ’ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ಅನೇಕ ಸಂಸ್ಥೆ ಬುಧವಾರ ಆಯೋಜಿಸಿದ್ದ ‘ಧರ್ಮ ಮತ್ತು ಲಿಂಗತ್ವ ಅಥವಾ ಲೈಂಗಿಕತೆ’ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ತೃತೀಯ ಲಿಂಗಿಗಳು ಒಂದು ಕಡೆ ಶಾಶ್ವತ ನೆಲೆ ಸ್ಥಾಪಿಸಿಕೊಂಡರೆ ಮಾತ್ರ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾನ ಚೀಟಿ ಪಡೆದುಕೊಳ್ಳಲು ಸಾಧ್ಯ. ಇಲ್ಲದಿದ್ದರೆ, ಸರ್ಕಾರದ ಯಾವುದೇ ಯೋಜನೆ ನಿಮಗೆ ಸಿಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತೃತೀಯ ಲಿಂಗಿಗಳ ಅಭಿವೃದ್ಧಿಗೆ ನಿಗಮ ಮಂಡಳಿ ಸ್ಥಾಪಿಸುವಂತೆ ಒತ್ತಾಯಿಸುತ್ತೇವೆ’ ಎಂದು ಹೇಳಿದರು.

ನಟ ಚೇತನ್ ಅಹಿಂಸಾ, ‘ಸಮಾನತೆ, ನ್ಯಾಯ, ವೈಜ್ಞಾನಿಕತೆಯ ಕಲ್ಪನೆಯೇ ನಿಜವಾದ ಧರ್ಮ. ಲಿಂಗ ಸಮಾನತೆಗಾಗಿ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಹೋರಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್‌ಜಿಬಿಟಿಕ್ಯೂ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕು. ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಬೇಕು’ ಎಂದು ಕರೆ ನೀಡಿದರು.



ಧರ್ಮ ಮತ್ತು ಲಿಂಗತ್ವ ಅಥವಾ ಲೈಂಗಿಕತೆ ಕಾರ್ಯಕ್ರಮದಲ್ಲಿ ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಕ್ವೀರ್ ಹೋರಾಟಗಾರ ತಾಷಿ ಚೋಡಪ್, ರಿಯಾನಾ ರಾಜು, ಸಿರಿಲ್ ವಿಕ್ಟರ್ ಜೋಸೆಫ್, ನಟ ಚೇತನ್ ಅಹಿಂಸಾ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಜಮಾಅತೆ ಇಸ್ಲಾಮಿ ಹಿಂದ್‌ನ ಕಾರ್ಯದರ್ಶಿ ಅಕ್ಬರ್ ಅಲಿ, ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಸಂಶೋಧಕ ಎಂ.ಎಚ್.ಹೆಬ್ಬಾಳ ಇದ್ದರು.

‘ಮೀಸಲಾತಿ ಗೊಂದಲ: ಪ್ರತ್ಯೇಕ ಸಭೆ’

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜನಹಳ್ಳಿಯ ವಾಲ್ಮೀಕಿ ಪೀಠದ ಪ್ರಸನ್ನಾನಂದ ಸ್ವಾಮೀಜಿಯ ನೇತೃತ್ವದಲ್ಲಿ ಸಚಿವರಾದ ಕೆ.ಎನ್. ರಾಜಣ್ಣ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮತ್ತು ವಾಲ್ಮೀಕಿ ಸಮುದಾಯದ ಶಾಸಕರು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು

ಬೆಂಗಳೂರು: ‘ಮೀಸಲಾತಿ ವಿಚಾರದಲ್ಲಿ ಬಿಜೆಪಿ ಸರ್ಕಾರ ಸೃಷ್ಟಿಸಿರುವ ಗೊಂದಲಗಳನ್ನು ನಿವಾರಿಸಲು ಅಡ್ವೊಕೇಟ್ ಜನರಲ್, ಕಾನೂನು ಇಲಾಖೆ ಮತ್ತು ಸಮುದಾಯಗಳನ್ನು ಪ್ರತಿನಿಧಿಸುವ ಸಚಿವರ ಪ್ರತ್ಯೇಕ ಸಭೆ ಕರೆದು ಚರ್ಚಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಪೀಠದ ಪ್ರಸನ್ನಾನಂದ ಸ್ವಾಮೀಜಿಯ ನೇತೃತ್ವದಲ್ಲಿ ಸಚಿವರು ಹಾಗೂ ಶಾಸಕರ ನಿಯೋಗ ತಮ್ಮನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ, ‘ನಾನು ಸಾಮಾಜಿಕ ನ್ಯಾಯದ ಪರವಾಗಿದ್ದು, ವಾಲ್ಮೀಕಿ ಸಮಾಜದ ಹಿತ ಕಾಪಾಡಲು ಬದ್ಧ’ ಎಂದರು.

‘ಮುಸ್ಲಿಮರಿಗೆ ಶೇ 4ರಷ್ಟಿದ್ದ ಮೀಸಲಾತಿಯನ್ನು ರದ್ದುಪಡಿಸಿ, ಒಕ್ಕಲಿಗರು ಹಾಗೂ ಲಿಂಗಾಯತರಿಗೆ ತಲಾ ಶೇ 2ರಂತೆ ಹಿಂದಿನ ಸರ್ಕಾರ ಹಂಚಿದೆ. 2 ಸಿ, 2 ಡಿ ಕೂಡಾ ಮಾಡಿದ್ದಾರೆ. ಈ ಹಂಚಿಕೆ ಸಂವಿಧಾನಾತ್ಮಕವಾಗಿ ಇಲ್ಲದಿರುವ ಕಾರಣ ಸುದೀರ್ಘ ಚರ್ಚೆಯ ಅಗತ್ಯವಿದೆ. ಒಟ್ಟಾರೆ ಮೀಸಲಾತಿಯ ಪರಿಮಿತಿ ಸಡಿಲಗೊಳಿಸದಿದ್ದರೆ ಪರಿಹಾರ ಸಿಗುವುದಿಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.

‘ಪರಿಶಿಷ್ಟ ಪಂಗಡಕ್ಕೆ ಸ್ಥಾಪನೆಯಾಗಿರುವ ಪ್ರತ್ಯೇಕ ಸಚಿವಾಲಯಕ್ಕೆ ಕಾರ್ಯದರ್ಶಿ ನೇಮಕಾತಿ ಮಾಡಲಾಗುವುದು. ಬುಡಕಟ್ಟು ಸಲಹಾ ಮಂಡಳಿ ಸ್ಥಾಪನೆ ಬಗ್ಗೆ ವರದಿ ನೀಡಿದಲ್ಲಿ ಪರಿಶೀಲಿಸಿ ಕ್ರಮ ವಹಿಸಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಮೀಸಲಾತಿಯನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಿದೆ. ಅದಕ್ಕೆ ಮೊದಲು ಬಿಜೆಪಿ ಸರ್ಕಾರ ಸೃಷ್ಟಿಸಿದ ಎಲ್ಲ ಗೊಂದಲಗಳನ್ನು ನಿವಾರಿಸಿಕೊಳ್ಳುವ ಅನಿವಾರ್ಯ ಇದೆ’ ಎಂದರು.

‘ನಕಲಿ ಜಾತಿ ಪ್ರಮಾಣಪತ್ರಕ್ಕೆ ಕಡಿವಾಣ’

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಕಲಿ ಪ್ರಮಾಣಪತ್ರ ವಿತರಣೆ ಆಗುತ್ತಿರುವ ಬಗ್ಗೆ ನಾಗರಿಕ ಹಕ್ಕುಗಳ ಜಾರಿ ಕೋಶ (ಸಿಆರ್‌ಇಸಿ) ಕ್ರಮ ತೆಗೆದುಕೊಳ್ಳಬೇಕು. ರಾಯಚೂರು, ವಿಜಯಪುರ ಭಾಗದಲ್ಲಿ ಕೋಲಿ, ಕಬ್ಬಲಿಗ, ತಳವಾರರ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎನ್ನುವ ಬೇಡಿಕೆ ಇದೆ. ಕೋಲಿ ಸಮಾಜದವರು ತಳವಾರರು ಎಂದೇ ಹೇಳುತ್ತಾರೆ. ಈ ಗೊಂದಲಗಳ ಬಗ್ಗೆಯೂ ತೀರ್ಮಾನ ಆಗಬೇಕು. ನಾಯಕ ಸಮುದಾಯದ ತಳವಾರರನ್ನು ಮಾತ್ರ ಎಸ್‌ಟಿಗೆ ಸೇರಿಸಲಾಗಿದೆ. ಇದೆಲ್ಲ ಸೂಕ್ಷ್ಮ ವಿಚಾರವಾಗಿರುವುದರಿಂದ ಸಂವಿಧಾನ ಮತ್ತು ಕಾನೂನು ತಜ್ಞರ ಜತೆ ಚರ್ಚೆ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಹೇಳಿದರು.

ಸಚಿವ ಸತೀಶ ಜಾರಕಿಹೊಳಿ ಪ್ರಶ್ನೆ • ಚರ್ಚೆಗೆ ಆಹ್ವಾನ

‘ದಲಿತರೇ ಏಕೆ ಮಲ ಹೊರುತ್ತಾರೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿನಲ್ಲಿ ಬುಧವಾರ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರ ಮಾತುಗಳು ಪರಸ್ಪರ ವಾಗ್ವಾದಗಳಿಗೆ ವೇದಿಕೆಯಾಯಿತು.

ಆದರ್ಶ ಪುರುಷ ಶ್ರೀರಾಮ ಕಾಂಗ್ರೆಸ್‌ಗೆ ಏಕೆ ಆಗಿಬರುವುದಿಲ್ಲ ಎಂಬ ತೇಜಸ್ವಿನಿಗೌಡ ಹೇಳಿಕೆಗೆ ಪ್ರತಿಕ್ರಿಯಿಸಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ‘ಶ್ರೀರಾಮನ ಕುರಿತು ಚರ್ಚೆ ಮಾಡೋಣ. ಹಾಗೆಯೇ, ದಲಿತರೇ ಏಕೆ ಮಲಹೊರುತ್ತಾರೆ?, ಸಾವಿರಾರು ವರ್ಷಗಳಿಂದ ಹಿಂದುಳಿದ ವರ್ಗಗಳು ಏಕೆ ಅಕ್ಷರ ವಂಚಿತರಾದರು ಎಂಬ ವಿಷಯಗಳ ಕುರಿತೂ ಚರ್ಚಿಸೋಣ’ ಎಂದರು.

ಅದಕ್ಕೆ ಧ್ವನಿಗೂಡಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ‘ನೀವು ಕಾಂಗ್ರೆಸ್‌ನಲ್ಲಿದ್ದಾಗ ಇಂತಹ ವಿಚಾರಗಳ ಬಗ್ಗೆ ಏಕೆ ಮಾತನಾಡಲಿಲ್ಲ’ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್, ‘ನಾವು ಸಾಮಾನ್ಯ ಜನರ ಬಡತನ ನೀಗಿಸಲು ಹೆಣಗುತ್ತಿದ್ದೇವೆ. ನೀವು ಧರ್ಮಗಳ ಮಧ್ಯೆ ವಿಷ ಬೀಜ ಬಿತ್ತಿ ದೇವರನ್ನೇ ಜಗಳಕ್ಕೆ ಹಚ್ಚುವಿರಿ. ನಾನೂ ಬ್ರಾಹ್ಮಣ. ಪೂಜೆ ಮಾಡದೇ ಹೊರಗೆ ಹೋಗುವುದಿಲ್ಲ. ಬಿಜೆಪಿಯವರು ತಾವು ಮಾತ್ರ ಹಿಂದೂಗಳು ಎಂಬ ಭ್ರಮೆಯಲ್ಲಿ ಇದ್ದಾರೆ‘ ಎಂದರು.

ಅವರ ಮಾತುಗಳನ್ನು ಅನುಮೋದಿಸಿದ ನಾಗರಾಜ್ ಯಾದವ್, ಬಿಜೆಪಿ ಕೇಂದ್ರ, ರಾಜ್ಯಗಳಲ್ಲಿ ಯಾವ ಹೊಸ ಯೋಜನೆಗಳನ್ನೂ ಜಾರಿಗೆ ತರಲಿಲ್ಲ. ಧರ್ಮದ ಮಂತ್ರ ಜಪಿಸುತ್ತಾ ಹಳೇ ಶೀಶೆಯಲ್ಲಿನ ಮದ್ಯಕ್ಕೆ ಹೊಸ ಲೇಬಲ್ ಹಚ್ಚುವ ಕೆಲಸವಷ್ಟೇ ಮಾಡಿತು ಎಂದು ಹೇಳಿದರು.

ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, ತೇಜಸ್ವಿನಿಗೌಡ, ಡಿ.ಎಸ್. ಅರುಣ್, ಭಾರತಿ ಶೆಟ್ಟಿ, ಹಾಗೆ ಮಾತನಾಡದಂತೆ ಬುದ್ಧಿ ಹೇಳಬೇಕು ಎಂದು ಸಭಾಪತಿಗೆ ವಿನಂತಿಸಿದರು.

‘ಹೀಗೇ ಮಾತನಾಡಿ ಎಂದು ಹೇಳಲು ಅಧಿಕಾರವಿಲ್ಲ. ತಪ್ಪು ಮಾತನಾಡಿದರೆ, ಅಸಂಸದೀಯ ಪದ ಬಳಸಿದರೆ ಕಡತದಿಂದ ತೆಗೆದುಹಾಕಲಾಗುವುದು‘ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಕೋಟ ಅವರು ಮತ್ತೆಮತ್ತೆ ಎದ್ದು ನಿಂತು ಆಕ್ಷೇಪ ವ್ಯಕ್ತಪಡಿಸಿದಾಗ, ‘ಕುಳಿತುಕೊಳ್ಳಿ. ನೀವು ವಿರೋಧ ಪಕ್ಷದ ನಾಯಕರಲ್ಲ’ ಎಂದು ಸುಮ್ಮನಾಗಿಸಿದರು. ಅದೇ ರೀತಿ ಮಧ್ಯೆ ಮಾತನಾಡಲು ಎದ್ದು ನಿಂತ ಕಾಂಗ್ರೆಸ್ ಸದಸ್ಯ ಪ್ರಕಾಶ್ ರಾಠೋಡ್ ಅವರನ್ನೂ ತರಾಟೆಗೆ ತೆಗೆದುಕೊಂಡ ಸಭಾಪತಿ, ‘ಮುದುಕರಾದ್ರು ಬುದ್ಧಿ ಬರಲಿಲ್ಲ‘ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೊರಟ್ಟಿ@43: ವಿಶೇಷ ಕಾರ್ಯಕ್ರಮ

ಬಸವರಾಜ ಹೊರಟ್ಟಿ ಅವರು 43 ವರ್ಷಗಳು ಪರಿಷತ್ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಇನ್ನೂ ಐದು ವರ್ಷ ಇರುತ್ತಾರೆ. ಇದು ಇತಿಹಾಸ. ಅವರಿಗಾಗಿ ವಿಶೇಷ ಕಾರ್ಯಕ್ರಮ ಆಯೋಜಿಸಲು ಸರ್ಕಾರಕ್ಕೆ ವಿನಂತಿಸಲಾಗುವುದು ಎಂದು ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್ ಹೇಳಿದರು. ಉಳಿದ ಸದಸ್ಯರೂ ಅದಕ್ಕೆ ಧ್ವನಿಗೂಡಿಸಿದರು.



ವಿಧಾನ ಮಂಡಲದಲ್ಲಿ

ನಾಳೆಯಿಂದ ಸಸ್ಯ ಸಂತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ವಿದ್ಯಾರಣ್ಯಪುರದಲ್ಲಿರುವ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಜುಲೈ 7ರಿಂದ 9ರವರೆಗೆ ಸಸ್ಯ ಸಂತೆ ಆಯೋಜಿಸಲಾಗಿದೆ.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಯಲಹಂಕದಲ್ಲಿರುವ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕೆ ಮಹಾವಿದ್ಯಾಲಯದ ಸಹಯೋಗದಲ್ಲಿ ಸಂತೆ ನಡೆಯಲಿದೆ.

ತೋಟಗಾರಿಕೆ ಬಗ್ಗೆ ಅರಿವು ಮೂಡಿಸಲು, ಗುಣಮಟ್ಟದ ಸಸಿಗಳು ಮತ್ತು ತೋಟಗಾರಿಕಾ ಪರಿಕರಗಳನ್ನು ನಗರದ ಕೃಷಿ ಆಸಕ್ತರಿಗೆ ದೊರಕಿಸುವುದು ಈ ಸಂತೆಯ ಮುಖ್ಯ ಉದ್ದೇಶ.

ನಟಿ ಅಕ್ಷತಾ ಪಾಂಡವಪುರ ಸಸ್ಯಸಂತೆಯನ್ನು ಜುಲೈ 7 ರಂದು ಉದ್ಘಾಟಿಸಲಿದ್ದಾರೆ. ತೋಟಗಾರಿಕಾ ಇಲಾಖೆ ನಿವೃತ್ತ ಹೆಚ್ಚುವರಿ ನಿರ್ದೇಶಕರಾದ ಎಸ್. ವಿ. ಹಿತ್ತಲಮನಿ ಭಾಗವಹಿಸುತ್ತಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು ಪ್ರಕಟಣೆ ತಿಳಿಸಿದೆ.

‘ಬಿಜೆಪಿಯಿಂದ ಭ್ರಷ್ಟಾಚಾರಕ್ಕೆ ಸಾಂಸ್ಥಿಕ ರೂಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ಸಾಂಸ್ಥಿಕ ರೂಪ ಪಡೆಯಿತು. ಹಣ ಕೊಡದೇ ಕೆಲಸ ಮಾಡಿಸಿಕೊಳ್ಳಲು ಸಾಧ್ಯವಿರಲಿಲ್ಲ ಎಂದು ಕಾಂಗ್ರೆಸ್‌ನ ಟಿ.ಬಿ.ಜಯಚಂದ್ರ ಆರೋಪಿಸಿದರು.

ವಿಧಾನಸಭೆಯಲ್ಲಿ ಬುಧವಾರ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಿದ ಅವರು, ಭ್ರಷ್ಟಾಚಾರದಲ್ಲಿ ಮುಳುಗೆದ್ದ ಬಿಜೆಪಿಗೆ ಗ್ಯಾರಂಟಿ ಯೋಜನೆ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ ಎಂದರು.

ಯಾವುದೇ ಕಚೇರಿಯಲ್ಲಿ ಕೆಲಸ ಮಾಡಿಸಿಕೊಳ್ಳಲು ಪ್ರತಿಯೊಂದಕ್ಕೂ ‘ರೇಟ್ ಫಿಕ್ಸ್’ ಆಗಿತ್ತು. ಮಧ್ಯವರ್ತಿಗಳು ಇಲ್ಲದೆ ಯಾವುದೇ ಕೆಲಸಗಳು ಆಗುತ್ತಿರಲಿಲ್ಲ. ಕಳೆದ ನಾಲ್ಕು- ಐದು ವರ್ಷಗಳಲ್ಲಿ ರಾಜ್ಯವನ್ನು ಹದಗೆಡಿಸಲಾಯಿತು ಎಂದು ಜಯಚಂದ್ರ ಹೇಳಿದರು.

ಆಗ ಮಧ್ಯ ಪ್ರವೇಶಿಸಿದ ಎಚ್‌.ಡಿ.ಕುಮಾರಸ್ವಾಮಿ, ನಾಲ್ಕು ವರ್ಷಗಳ ಹಿಂದೆ ನಾನೇ ಮುಖ್ಯಮಂತ್ರಿ ಆಗಿದ್ದೆ, ಕಾಂಗ್ರೆಸ್–ಜೆಡಿಎಸ್ ಸರ್ಕಾರ ಇತ್ತು ಎಂದರು.

‘ನಿಮ್ಮ ಅವಧಿಯಲ್ಲಿ ಅಲ್ಲ, ಆ ಬಳಿಕ’ ಎಂದು ಜಯಚಂದ್ರ ಸಮಜಾಯಿಷಿ ನೀಡಿದರು.

ಎತ್ತಿನಹೊಳೆ ಯೋಜನೆಯಲ್ಲಿ ತುಮಕೂರು ಜಿಲ್ಲೆಯ ಭಾಗದಲ್ಲಿ ನಾಲೆಯೇ ಆಗದೇ ಪೈಪ್‌ಗಳನ್ನು ಅಳವಡಿಸಲಾಗಿದೆ. ₹1,258 ಕೋಟಿಯ ಈ ಕಾಮಗಾರಿಗೆ ಟೆಂಡರ್ ಕೂಡ ಕರೆದಿಲ್ಲ, ಕಾಮಗಾರಿ ಮಾಡಿದವರಿಗೆ ಬಿಲ್ ಕೂಡ ಮಂಜೂರಾತಿ ನೀಡಲಾಗಿದೆ. ನಾಲೆ ಕಾಮಗಾರಿ ಮುಗಿದು ನೀರು ಬರುವಾಗ 15 ವರ್ಷ ಕಳೆದರೂ ಅಚ್ಚರಿ ಇಲ್ಲ. ಇದೂ ಕೂಡ ಭ್ರಷ್ಟಾಚಾರದ ಇನ್ನೊಂದು ಮುಖ ಎಂದು ಅವರು ಹೇಳಿದರು.

ಗುತ್ತಿಗೆದಾರರ ಸಂಘದ ಕೆಂಪಣ್ಣ ಅವರು, ಶೇ 40ರಷ್ಟು ಕಮಿಷನ್ ಪಡೆಯುತ್ತಿದ್ದರು ಎಂದು ಹೇಳಿದ್ದರು. ವಾಸ್ತವದಲ್ಲಿ ಇದು ಶೇ 60 ರಿಂದ 70ಕ್ಕೆ ಏರಿತ್ತು. ಇದನ್ನು ನಿಯಂತ್ರಿಸಬೇಕು ಎಂದೇ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಕಾಂಗ್ರೆಸ್ ಅನ್ನು ಗೆಲ್ಲಿಸುವ ಮೂಲಕ ಸಂದೇಶ ನೀಡಿದ್ದಾರೆ ಎಂದರು.

ಪ್ರಧಾನಿ ಮೋದಿಯವರು ಟ್ರಿಲಿಯನ್ ಡಾಲರ್ ಆರ್ಥಿಕತೆ ಬಗ್ಗೆ ಮಾತನಾಡುತ್ತಾರೆ. ಅದರಿಂದ ಹೊಟ್ಟೆ ತುಂಬುತ್ತದೆಯೇ ಎಂದು ಪ್ರಶ್ನಿಸಿದರು.

ರಾಜ್ಯದ 160 ಕಡೆಗಳಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಹಾಸ್ಟೆಲ್

ಬೆಂಗಳೂರು: ರಾಜ್ಯದಲ್ಲಿ 160 ಕಡೆಗಳಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಸೇರಿದ ಕಟ್ಟಡಗಳಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳನ್ನು ಆರಂಭಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ಎಸ್. ತಂಗಡಗಿ ಹೇಳಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿ ಅವರು ಈ ವಿಷಯ ತಿಳಿಸಿದರು.

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಈ ವ್ಯವಸ್ಥೆ ಮಾಡಲಾಗುವುದು. ಈ ಹಾಸ್ಟೆಲ್‌ಗಳಲ್ಲಿ ಎಲ್ಲ ರೀತಿಯ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಹೆಚ್ಚು ವಿದ್ಯಾರ್ಥಿಗಳು ಹಾಸ್ಟೆಲ್‌ಗೆ ಬಂದು ಸೇರುತ್ತಿದ್ದಾರೆ. ಹಾಸ್ಟೆಲ್ ಸಿಗದವರಿಗೆ ವಿದ್ಯಾಸಿರಿ ಯೋಜನೆಯಡಿ ತಿಂಗಳಿಗೆ ₹1,500 ನೀಡಲಾಗುವುದು ಎಂದು ವಿವರಿಸಿದರು.

ಪಟ್ಟಿ ಅಂತಿಮಗೊಳಿಸಲು ಸಚಿವ ಜಮೀರ್ ಸೂಚನೆ

‘ವಸತಿ: ಫಲಾನುಭವಿಗಳ ಆಯ್ಕೆ ಬಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಇಲ್ಲದವರಿಗೆ ಸೂರನ್ನು ಕಲ್ಪಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿ ಯೋಜನೆಯಡಿ 2.90 ಲಕ್ಷ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಶಾಸಕರು ಫಲಾನುಭವಿಗಳ ಪಟ್ಟಿಯನ್ನು ನಿಗದಿತ ಅವಧಿಯಲ್ಲಿ ನೀಡದಿದ್ದರೆ, ಕೇಂದ್ರದ ಅನುದಾನ ವಾಪಸ್ ಹೋಗಲಿದೆ.

ಈ ಬಗ್ಗೆ ಮಾಹಿತಿ ಪಡೆದ ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್, ಗ್ರಾಮಸಭೆ ಹಾಗೂ ಶಾಸಕರ ಸಮಿತಿ ಈ ಫಲಾನುಭವಿಗಳನ್ನು ಅಂತಿಮಗೊಳಿಸಿ, ಪಟ್ಟಿಯನ್ನು ಒಂದು ವಾರದಲ್ಲಿ ಕಳುಹಿಸಿಕೊಡಲು ಸೂಚಿಸಿದ್ದಾರೆ.

ನಗರ ಮತ್ತು ಗ್ರಾಮೀಣ ಸೇರಿ ವಿವಿಧ ಯೋಜನೆಗಳಲ್ಲಿ ಒಟ್ಟು 2,90,878 ಫಲಾನುಭವಿಗಳ ಆಯ್ಕೆ ಮಾಡಬೇಕಾಗಿದೆ. ಅ ಬಗ್ಗೆಯೂ ಶಾಸಕರಿಗೆ ಮನವಿ ಮಾಡಲಾಗಿದೆ. ಫಲಾನುಭವಿಗಳ ಪಟ್ಟಿ ಬಂದ ಕೂಡಲೇ ಹಂಚಿಕೆ ಮಾಡಲಾಗುವುದು. ಇದೇ 20ರೊಳಗೆ ಹಂಚಿಕೆ ಮಾಡದಿದ್ದರೆ, ಯೋಜನೆ ಕೇಂದ್ರಕ್ಕೆ ವಾಪಸ್ ಹೋಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿ ಗ್ರಾಮೀಣ ಭಾಗದ ವಸತಿ ರಹಿತರಿಗೆ ಮನೆ ಕಟ್ಟಿಸಿಕೊಡುವ ಯೋಜನೆಯಡಿ ರಾಜ್ಯಕ್ಕೆ 1.41 ಲಕ್ಷ ಮನೆ ಹಂಚಿಕೆಯಾಗಿದೆ. ಇದುವರೆಗೂ 63 ಸಾವಿರ ಮನೆಗೆ ಫಲಾನುಭವಿಗಳ ಆಯ್ಕೆಯಾಗಿದೆ. 78 ಸಾವಿರ ಮನೆಗಳಿಗೆ ಫಲಾನುಭವಿಗಳ ಆಯ್ಕೆ ಮಾಡಬೇಕಾಗಿದೆ ಎಂದಿದ್ದಾರೆ.

ಗ್ರಾಮಸಭೆಗಳಿಗೆ ಈ ಕುರಿತು ಶಾಸಕರು ಸೂಚನೆ ನೀಡಿ ಒಂದು ವಾರದಲ್ಲಿ ಪಟ್ಟಿ ಅಂತಿಮಗೊಳಿಸಿದರೆ ಯೋಜನೆಯ ಲಾಭ ರಾಜ್ಯದ ವಸತಿ ರಹಿತರಿಗೆ ಸಿಗುತ್ತದೆ. ಆನ್‌ಲೈನ್ ಮೂಲಕವೇ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಯೋಜನೆಗೆ 60:40 ಅನುಪಾತದಲ್ಲಿ ಅನುದಾನ ನೀಡಲಿವೆ. ಸಾಮಾನ್ಯ ವರ್ಗಕ್ಕೆ ₹1.03 ಲಕ್ಷ, ಎಸ್‌ಸಿ–ಎಸ್‌ಟಿ ಸಮುದಾಯಕ್ಕೆ ₹1.25ಲಕ್ಷ ಸಬ್ಸಿಡಿ ಸಿಗಲಿದೆ. 150ರಿಂದ 700 ಚದರಡಿವರೆಗೆ ವೈಯಕ್ತಿಕ ಮನೆ ನಿರ್ಮಾಣ ಮಾಡಿ ಕೊಡಲಾಗುವುದು ಎಂದು ತಿಳಿಸಿದ್ದಾರೆ.

ಪಶುವೈದ್ಯಾಧಿಕಾರಿಗಳಿಗೂ ಬೆಂಗಳೂರು ಅಚ್ಚುಮೆಚ್ಚು!

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯಲ್ಲಿನ 91 ಪಶು ವೈದ್ಯಾಧಿಕಾರಿಗಳ ಹುದ್ದೆಗಳೆಲ್ಲವೂ ಭರ್ತಿ. ಆದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿನ 129 ಹುದ್ದೆಗಳಲ್ಲಿ 110 ಖಾಲಿ, ಸದ್ಯ ಕಾರ್ಯನಿರ್ವಹಿಸುತ್ತಿರುವವರಲ್ಲಿ ಹಲವರು ನಿಯೋಜನೆ ಮೇಲೆ ಇತರ ಇಲಾಖೆಗಳಲ್ಲಿ ಕಾರ್ಯನಿರ್ವಹಣೆ...

ಪಶು ಸಂಗೋಪನಾ ಇಲಾಖೆಯಲ್ಲಿನ ಪರಿಸ್ಥಿತಿಯನ್ನು ವಿಧಾನ ಪರಿಷತ್‌ನಲ್ಲಿ ವಿವರಿಸಿದ ಸಚಿವ ಕೆ. ವೆಂಕಟೇಶ್ ಅವರು, ‘ರಾಜ್ಯದಲ್ಲಿ ಮಂಜೂರಾದ ಒಟ್ಟು 3,235 ಹುದ್ದೆಗಳಲ್ಲಿ 1,974 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, 1,261 ಹುದ್ದೆಗಳು ಖಾಲಿ ಉಳಿದಿವೆ’ ಎಂದು ತಿಳಿಸಿದರು.

ಬಿಜೆಪಿಯ ಎಸ್‌.ವಿ. ಸಂಕನೂರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘400 ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಕೈಗೊಳ್ಳುವಂತೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಆದರೆ, ಮೀಸಲಾತಿ ಗೊಂದಲದಿಂದ ವಿಳಂಬವಾಗಿದೆ. ಆಯೋಗದಿಂದ ಶೀಘ್ರ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದ್ದು, ಡಿಸೆಂಬರ್ ಒಳಗೆ ಮುಗಿಯುವ ಸಾಧ್ಯತೆ ಇದೆ’ ಎಂದು ತಿಳಿಸಿದರು.

‘ಬೆಂಗಳೂರು ಸೇರಿದಂತೆ ಅನಗತ್ಯ ಸ್ಥಳಗಳಲ್ಲಿರುವವರನ್ನು ಬದಲಾವಣೆ ಮಾಡಲಾಗುವುದು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹುದ್ದೆ ಸೇರಿದಂತೆ ವಿವಿಧ ಇಲಾಖೆಗಳಿಗೆ ನಿಯೋಜನೆ ಮೇರೆಗೆ ತೆರಳಿದವರನ್ನು ಸಹ ವಾಪಸ್ ಕರೆಯಿಸಿಕೊಳ್ಳಲಾಗುವುದು’ ಎಂದು ತಿಳಿಸಿದರು.

150 ಪಿಡಿಓ ನೇಮಕ ಪ್ರಕ್ರಿಯೆ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಓ) ವೃಂದದ ನೇರ ನೇಮಕಾತಿ ಕೋಟಾದಲ್ಲಿ ಖಾಲಿ ಇರುವ 385 ಹುದ್ದೆಗಳಲ್ಲಿ 150 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ಉಳಿದ ಹುದ್ದೆಗಳ ಭರ್ತಿಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಾಂಗ್ರೆಸ್‌ನ ಬಸನಗೌಡ ದದ್ದಲ್ ಅವರ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸಿದರು.

ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್(1) 604, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್(2) 719 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ 345 ಹುದ್ದೆಗಳು ಖಾಲಿ ಇವೆ ಎಂದು ಅವರು ಹೇಳಿದರು.

ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ • ಅಪಘಾತ ಸ್ಥಳಗಳ ಸಮೀಕ್ಷೆ

ಅಪಘಾತ ತಡೆಗೆ ಜಂಟಿ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನನಲ್ಲಿ ಹೆಚ್ಚುತ್ತಿರುವ ಅಪಘಾತಗಳನ್ನು ತಗ್ಗಿಸುವ ಉದ್ದೇಶದಿಂದ ಹೆದ್ದಾರಿಯಲ್ಲಿರುವ ಅಪಾಯಕಾರಿ ಮತ್ತು ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತಿಸಲು ಶೀಘ್ರ ಜಂಟಿ ಸಮೀಕ್ಷೆ ಆರಂಭವಾಗಲಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಪೊಲೀಸ್, ಸರ್ವೆ ಹಾಗೂ ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾಡಳಿತ ಜಂಟಿಯಾಗಿ ಈ ಸಮೀಕ್ಷೆ ನಡೆಸಲಿವೆ.

ಎಕ್ಸ್‌ಪ್ರೆಸ್‌ವೇ ನಲ್ಲಿ ಅಪಘಾತ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ಸಮೀಕ್ಷೆ ನಡೆಸಿ ವರದಿ ನೀಡುವಂತೆ ಸರ್ಕಾರ ನೀಡಿದ ಸೂಚನೆ ಮೇರೆಗೆ ಈ ಸಮೀಕ್ಷೆ ಆರಂಭವಾಗಿದೆ. ಅದರ ಭಾಗವಾಗಿ ಬುಧವಾರ ಜಿಲ್ಲಾಧಿಕಾರಿ ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಸೇರಿದಂತೆ ಇತರ ಇಲಾಖೆಗಳ ಹಿರಿಯ ಅಧಿಕಾರಿಗಳು ಹೆದ್ದಾರಿಯ ಕೆಲವು ಸ್ಥಳಗಳಿಗೆ ತೆರಳಿ ಪರಿಶೀಲನೆ ನಡೆಸಿದರು.

‘ಹೆದ್ದಾರಿ ಗುಣಮಟ್ಟ, ಅಪಾಯಕಾರಿ ಸ್ಥಳಗಳು, ಪ್ರವೇಶ–ನಿರ್ಗಮನ, ಅಂಕುಡೊಂಕು ಮಾರ್ಗ ಸೇರಿದಂತೆ ಅಪಘಾತಕ್ಕೆ ಕಾರಣ ಹಾಗೂ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಜಂಟಿ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಕೊಡಲಾಗುವುದು’ ಎಂದು ಈ ತಂಡದಲ್ಲಿದ್ದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಎಕ್ಸ್‌ಪ್ರೆಸ್ ವೇನಲ್ಲಿ ಸಂಚಾರ ಆರಂಭವಾದ ನಂತರ ಒಂಬತ್ತು ತಿಂಗಳಲ್ಲಿ ನಡೆದ ಅಪಘಾತಗಳಲ್ಲಿ ಒಟ್ಟು 158 ಜನರು ಮೃತಪಟ್ಟಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಈ ವರದಿ ಪ್ರಕಟವಾದ ಬೆನ್ನಲ್ಲೇ ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅಧಿಕಾರಿಗಳೊಂದಿಗೆ ಇಲ್ಲಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅದಕ್ಕೂ ಮುಂಚೆ, ಜಿಲ್ಲಾ ಪೊಲೀಸ್ ಇಲಾಖೆ ಕೂಡ ಅಪಘಾತ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಹೆದ್ದಾರಿ ಪ್ರಾಧಿಕಾರಕ್ಕೆ ವರದಿ ನೀಡಿತ್ತು.

‘ಎಡಿಜಿಪಿ ಸೂಚನೆಯಂತೆ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ವೇಗದ ಮೇಲೆ ನಿಗಾ ಇಡಲು ರೇಡಾರ್ ನಿಯೋಜಿಸಲಾಗಿದೆ. ವೇಗವಾಗಿ ಸಂಚರಿಸುವ ವಾಹನಗಳನ್ನು ಗುರುತಿಸಿ ದಂಡ ವಿಧಿಸಲಾಗುತ್ತಿದೆ. ಜೊತೆಗೆ ರಸ್ತೆಯಲ್ಲಿ ನಾಲ್ಕು ಗಸ್ತು ವಾಹನ ಹಾಗೂ ಸಿಬ್ಬಂದಿಯನ್ನು ಸಹ ನಿಯೋಜಿಸಲಾಗಿದೆ’ ಎಂದು ಸಂಚಾರ ಪೊಲೀಸ್ ಸಿಬ್ಬಂದಿಯೊಬ್ಬರು ಹೇಳಿದರು.

ದ್ವಿಚಕ್ರ ವಾಹನಗಳ ನಿರ್ಬಂಧಕ್ಕೆ ಪರಿಶೀಲನೆ

ಬೆಂಗಳೂರು: ‘ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳನ್ನು ನಿರ್ಬಂಧಿಸುವ ಪ್ರಸ್ತಾವ ಕುರಿತು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಪರಿಶೀಲನೆ ನಡೆಸುತ್ತಿದೆ’ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಮರಿತಿಬ್ಬೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಅತಿಯಾದ ವೇಗದಿಂದ ಈ ಹೆದ್ದಾರಿಯಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಲೇನ್ ಶಿಸ್ತಿನ ಕೊರತೆ ಮತ್ತು ನಿಗದಿತ ವೇಗದ ಮಿತಿಯಾದ ಪ್ರತಿ ಗಂಟೆಗೆ 100 ಕಿ.ಮೀ. ಮೀರುವ ವಾಹನಗಳು ಅಪಘಾತಕ್ಕೆ ಪ್ರಮುಖ ಕಾರಣವಾಗಿವೆ. ವಾಹನ ಸವಾರರಿಗೆ ವೇಗದ ಮಿತಿ ಬಗ್ಗೆ ಅರಿವು ಮೂಡಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ವಿವರಿಸಿದರು.

‘ಈ ರಸ್ತೆ ವೈಜ್ಞಾನಿಕವಾಗಿ ನಿರ್ಮಿಸಿಲ್ಲ. ಹೆದ್ದಾರಿಯಲ್ಲಿನ ಸಮಸ್ಯೆಗಳ ಕುರಿತು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಅಧಿಕಾರಿಗಳ ಜತೆ ಚರ್ಚಿಸಲಾಗುವುದು’ ಎಂದರು. ಮರಿತಿಬ್ಬೇಗೌಡ ಮಾತನಾಡಿ, ‘ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ ರಾಷ್ಟ್ರೀಯ ಹೆದ್ದಾರಿ ಅಲ್ಲ, ಸಾವಿನ ದಾರಿಯಾಗಿದೆ. ಕೇವಲ ಆರು ತಿಂಗಳಲ್ಲಿ 512 ಅಪಘಾತಗಳು ಸಂಭವಿಸಿವೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಪ್ರತಿ ನಿತ್ಯ ಅಪಘಾತಗಳು ಸಂಭವಿಸುತ್ತಿದ್ದರೂ ನಿಯಂತ್ರಣಕ್ಕೆ ಕ್ರಮಕೈಗೊಂಡಿಲ್ಲ. ಹೆದ್ದಾರಿಯಲ್ಲಿ ಕಳ್ಳತನಗಳು ನಡೆಯುತ್ತಿವೆ. ಹೀಗಾಗಿ, ಹೆದ್ದಾರಿಯಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಅತಿ ವೇಗ: ದಂಡದ ಬಿಸಿ

ಎಕ್ಸ್‌ಪ್ರೆಸ್ ವೇ ನಲ್ಲಿ ಮಿತಿ ಮೀರಿದ ವೇಗದಲ್ಲಿ ಸಂಚರಿಸುತ್ತಿದ್ದ ವಾಹನಗಳ ಮೇಲೆ ಸ್ಪೀಡ್ ರೇಡಾರ್ ಮೂಲಕ ನಿಗಾ ಇಟ್ಟಿರುವ ಸಂಚಾರ ಪೊಲೀಸರು ಇದುವರೆಗೂ 44 ಚಾಲಕರಿಗೆ ದಂಡ ವಿಧಿಸಿದ್ದಾರೆ. ಈ ವಿಷಯನ್ನು ಎಡಿಜಿಪಿ ಅಲೋಕ್ ಕುಮಾರ್ ಟ್ವಿಟರ್‌ನಲ್ಲಿ ಫೋಟೊ ಸಮೇತ ಪೋಸ್ಟ್ ಮಾಡಿದ್ದಾರೆ. ಎಕ್ಸ್‌ಪ್ರೆಸ್‌ನಲ್ಲಿ ವಾಹನಗಳ ವೇಗದ ಮಿತಿ ಗಂಟೆಗೆ ನೂರು ಕಿ.ಮೀ. ಇದೆ.

ಬ್ರೈನ್ಸ್ ನ್ಯೂರೋ ಸ್ಪೈನ್ ಆಸ್ಪತ್ರೆ ಆರಂಭ

ಪ್ರಜಾವಾಣಿ ವಾರ್ತೆ



ಬ್ರೈನ್ಸ್ ನ್ಯೂರೋ ಸ್ಪೈನ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮತ್ತಿಕೆರೆ ಶಾಖೆಯನ್ನು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಉದ್ಘಾಟಿಸಿದರು. ವಿವಿಡಸ್ ಆಸ್ಪತ್ರೆ ನಿರ್ದೇಶಕರಾದ ಡಾ. ಪರಮೇಶ್ವರ ರೆಡ್ಡಿ ವೀನಾಪುಸ, ಡಾ.ಚಂದ್ರು ಬಾಹುಮನ, ಗುರುಭಾಸ್ಕರ್, ಡಾ.ಶ್ರೀಹರಿ ಮುದಗಲ ಅನಿತಾ ಮುದಗಲ ಇದ್ದರು

ಬೆಂಗಳೂರು: ಮಿದುಳು ಮತ್ತು ಬೆನ್ನುಹುರಿ ನರ ಚಿಕಿತ್ಸೆಗೆ ಹೆಸರಾಗಿರುವ ಬ್ರೈನ್ಸ್ ನ್ಯೂರೋ ಸ್ಪೈನ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ತನ್ನ ಶಾಖೆಯನ್ನು ಮತ್ತಿಕೆರೆಯ ವಿವಿಡಸ್ ಆಸ್ಪತ್ರೆಯಲ್ಲಿ ಆರಂಭಿಸಿದೆ.

ಮಲ್ಲೇಶ್ವರ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಬುಧವಾರ ಉದ್ಘಾಟಿಸಿ, ‘ಇಂದು ಲಕ್ವ, ಅಪಘಾತ ಸೇರಿದಂತೆ ವಿವಿಧ ಕಾರಣಗಳಿಂದಾಗಿ ನರ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಅತ್ಯಾಧುನಿಕ ಶಾಖಾ ಆಸ್ಪತ್ರೆಯು ಸುತ್ತಮುತ್ತಲ ಭಾಗದ ಜನರಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸಲು ಅನುಕೂಲವಾಗಲಿದೆ’ ಎಂದು ತಿಳಿಸಿದರು.

ಬ್ರೈನ್ಸ್ ಆಸ್ಪತ್ರೆಯ ಸ್ಥಾಪಕರಾದ ನರ ಶಸ್ತ್ರಚಿಕಿತ್ಸಾ ತಜ್ಞ ಡಾ.ಎನ್. ಕೆ. ವೆಂಕಟರಮಣ ಮಾತನಾಡಿ, ‘ಉತ್ತಮ ಚಿಕಿತ್ಸೆ ನೀಡಲಾಗುವುದು. ಜೊತೆಗೆ ನರಸ್ವಾಸ್ಥ್ಯದ ಬಗ್ಗೆ ಜನರಲ್ಲಿ ತಿಳಿವಳಿಕೆ ಮೂಡಿಸಲಾಗುವುದು’ ಎಂದು ಹೇಳಿದರು. ವಿವಿಡಸ್ ಆಸ್ಪತ್ರೆ ನಿರ್ದೇಶಕರಾದ ಡಾ. ಪರಮೇಶ್ವರ ರೆಡ್ಡಿ ವೀನಾಪುಸ, ಡಾ.ಚಂದ್ರು ಬಾಹುಮನ, ಗುರುಭಾಸ್ಕರ್, ಡಾ.ಶ್ರೀಹರಿ ಮುದಗಲ ಮತ್ತು ಅನಿತಾ ಮುದಗಲ ಇದ್ದರು.

ನಿರಾಶ್ರಿತರ ಮೇಲೆ ದಾಳಿ: ಖಂಡನೆ

ಬೆಂಗಳೂರು: ಪ್ಯಾಲೆಸ್ಟೀನ್‌ನ ವೆಸ್ಟ್ ಬ್ಯಾಂಕ್‌ನ ಹೊರವಲಯದಲ್ಲಿರುವ ಜೆನಿನ್ ನಿರಾಶ್ರಿತರ ಶಿಬಿರಗಳ ಮೇಲಿನ ಅಮೆರಿಕ ಬೆಂಬಲಿತ ಜಿಯೋನಿಸ್ಟ್ ಇಸ್ರೇಲ್‌ನ ಮಿಲಿಟರಿ ದಾಳಿಯನ್ನು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ಖಂಡಿಸಿದೆ.

11 ಸಾವಿರ ಪ್ಯಾಲೆಸ್ಟೀನ್ ನಿರಾಶ್ರಿತರ ಆಶ್ರಯತಾಣವಾಗಿದ್ದ ಈ ಶಿಬಿರದಲ್ಲಿ, ಮಕ್ಕಳನ್ನು ಸೇರಿ 9 ಜನರು ಪ್ರಾಣ ಕಳೆದುಕೊಂಡಿದ್ದು, ಹಲವರು ಗಾಯಗೊಂಡಿದ್ದಾರೆ. ಇದುವರೆಗೆ, ಈ ವೆಸ್ಟ್‌ಬ್ಯಾಂಕ್ ಮೇಲೆ ಇಸ್ರೇಲ್ ಒಂದು ವರ್ಷಕ್ಕಿಂತಲೂ ಹೆಚ್ಚಿನ ಕಾಲ ನಡೆಸಿದ ಹಿಂಸಾಚಾರದಲ್ಲಿ 133 ಪ್ಯಾಲೆಸ್ಟೀನ್‌ರು ಹತ್ಯೆಯಾಗಿದ್ದಾರೆ. ಈ ಘೋರ ದಾಳಿಯು ಅಂತರ ರಾಷ್ಟ್ರೀಯ ಮಾನವೀಯ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ’ ಎಂದು ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕೆ. ಉಮಾ ತಿಳಿಸಿದ್ದಾರೆ.

ಪಳನಿಯಪ್ಪನ್‌ಗೆ ಚಿತ್ರಕಲಾ ಪರಿಷತ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೂರದೃಷ್ಟಿ, ನಿರ್ದಿಷ್ಟ ಗುರಿ, ನಿಸ್ವಾರ್ಥವಾಗಿ ಕೈಗೊಳ್ಳುವ ಕೆಲಸದಿಂದ ಯಾವುದೇ ಒಂದು ಸಂಸ್ಥೆ ಯಶಸ್ವಿಯಾಗುತ್ತದೆ ಎಂಬುದಕ್ಕೆ ಚಿತ್ರಕಲಾ ಪರಿಷತ್ ಸಾಕ್ಷಿ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅಭಿಪ್ರಾಯಪಟ್ಟರು.

ಚಿತ್ರಕಲಾ ಪರಿಷತ್ತಿನ ಸಂಸ್ಥಾಪಕ ಕಾರ್ಯದರ್ಶಿ ಪ್ರೊ. ಎನ್.ಎಸ್ .ನಂಜುಂಡರಾವ್ ಅವರ 91ನೇ ಜನ್ಮ ದಿನಾಚರಣೆ ಮತ್ತು ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಚೆನ್ನೈನ ಕಲಾವಿದ ಆರ್.ಎಂ. ಪಳನಿಯಪ್ಪನ್ ಅವರಿಗೆ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

‘ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯಮಟ್ಟದಲ್ಲಿ ಚಿತ್ರಕಲಾ ಪರಿಷತ್ ಉಜ್ವಲವಾಗಿ ಬೆಳೆಯಲು ನಂಜುಂಡರಾವ್ ಅವರ ಕನಸು, ಅವರು ಹಾಕಿದ ಭದ್ರ ಬುನಾದಿಯೇ ಕಾರಣ. ನಂಜುಂಡ ರಾವ್ ಅವರ ಪರಿಶ್ರಮದ ಫಲವೇ ಇಂದು ಚಿತ್ರಕಲಾ ಪರಿಷತ್ ಚಿತ್ರಕಲೆಗಳ ಮಹಾವಿದ್ಯಾಲಯವನ್ನು ಒಳಗೊಂಡು, ಪ್ರತಿವರ್ಷ ನೂರಾರು ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ರಾಷ್ಟ್ರೀಯಮಟ್ಟದಲ್ಲಿ ಗಮನಸೆಳೆಯುವಂತಾಗಿದೆ’ ಎಂದರು.

ಕಾರ್ಯಕ್ರಮದಲ್ಲಿ ವಿಟಿಯು ಮಾಜಿ ಕುಲಪತಿ ಬಲವೀರ ರೆಡ್ಡಿ, ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಕಾರ್ಯದರ್ಶಿ ಶಶಿಧರ್ ಇದ್ದರು.



ಚಿತ್ರಕಲಾ ಪರಿಷತ್ತಿನ ರಾಷ್ಟ್ರೀಯ ಪ್ರಶಸ್ತಿಯನ್ನು ಚೆನ್ನೈನ ಕಲಾವಿದ ಆರ್.ಎಂ. ಪಳನಿಯಪ್ಪನ್ ಅವರಿಗೆ ನೀಡಿ ಗೌರವಿಸಲಾಯಿತು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಬಲವೀರ ರೆಡ್ಡಿ, ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಕಾರ್ಯದರ್ಶಿ ಶಶಿಧರ್ ಇದ್ದರು

ಹೊಸ ಗ್ರಾಮಗಳ ರಚನೆ ಇಲ್ಲ: ಪ್ರಿಯಾಂಕ್ ಖರ್ಗೆ

ಬೆಂಗಳೂರು: ರಾಜ್ಯದಲ್ಲಿ ಹೊಸ ಗ್ರಾಮಗಳ ರಚನೆ ಸದ್ಯಕ್ಕಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ವಿಧಾನಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ದುರ್ಯೋಧನ ಐಹೊಳೆ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಕೇಂದ್ರ ಸರ್ಕಾರ ಮತ್ತು ರಾಜ್ಯ ಹಣಕಾಸು ಇಲಾಖೆಯ ಶಿಫಾರಸಿನ ಅನ್ವಯ ಹೊಸ ಗ್ರಾಮಗಳ ರಚನೆ ಮಾಡುವಂತಿಲ್ಲ. ಜನಗಣತಿಯ ಹೊಸ ಮಾಹಿತಿಯೂ ಇಲ್ಲವಾಗಿದೆ. ಹೊಸ ಗಣತಿ ಬಳಿಕ ಪರಿಶೀಲಿಸಬಹುದು ಎಂದರು.

‘ವಿದ್ಯುತ್ ತಿದ್ದುಪಡಿ ಮಸೂದೆ ತಿರಸ್ಕರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ‘ವಿದ್ಯುತ್ ತಿದ್ದುಪಡಿ ಮಸೂದೆ 2022’ ಅನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು ಎಂದು ವಿದ್ಯುತ್ ಸುಧಾರಣೆಗಳ ಕುರಿತ ಸಿಪಿಎಂ ಸಮಾವೇಶದಲ್ಲಿ ಒತ್ತಾಯಿಸಲಾಯಿತು.

‘ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಅನುಸರಿಸುತ್ತಿರುವ ವಿದ್ಯುತ್ ನೀತಿ ಅತ್ಯಂತ ಜನವಿರೋಧಿಯಾಗಿದೆ. ಈ ವಿದ್ಯುತ್ ತಿದ್ದುಪಡಿ ಮಸೂದೆ ಖಾಸಗಿ ಬಂಡವಾಳದಾರರ ಕೈಯಲ್ಲಿ ದೇಶದ ಭವಿಷ್ಯವನ್ನು ಇಡುತ್ತದೆ. ವಿದ್ಯುತ್ ದರಗಳನ್ನು ವಿಪರೀತವಾಗಿ ಹೆಚ್ಚುಸುವ ಈ ನೀತಿಗಳನ್ನು ಸೋಲಿಸಬೇಕು’ ಎಂದು ನಿರ್ಣಯ ಕೈಗೊಳ್ಳಲಾಯಿತು.

‘ಉಚಿತ ವಿದ್ಯುತ್ ನೀತಿ ಪ್ರಕಟಿಸಿರುವ ರಾಜ್ಯದ ಸರ್ಕಾರ, ಅದರ ನೆಪದಲ್ಲಿ ವಿದ್ಯುತ್ ರಂಗದ ಖಾಸಗೀಕರಣಕ್ಕೆ ಪ್ರಯತ್ನ ಮಾಡಬಾರದು. ಕೇರಳ, ತಮಿಳುನಾಡು, ತೆಲಂಗಾಣ ರಾಜ್ಯಗಳು ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಜಾರಿಗೊಳಿಸುವುದಿಲ್ಲ ಎಂದು ನಿರ್ಣಯ ಕೈಗೊಂಡಿವೆ. ಅದೇ ರೀತಿ ರಾಜ್ಯದಲ್ಲೂ ಜಾರಿ ಮಾಡುವುದಿಲ್ಲ ಎಂಬ ನಿರ್ಣಯ ಕೈಗೊಳ್ಳಬೇಕು’ ಎಂದು ಒತ್ತಾಯಿಸಲಾಯಿತು. ‘ವಿದ್ಯುತ್ ರಂಗದ ನಷ್ಟವನ್ನು ಕಡಿಮೆ ಮಾಡಲು ಘಟಕಗಳ ಸ್ಥಾಪನಾ ವೆಚ್ಚ, ವಿದ್ಯುತ್ ಉತ್ಪಾದನೆಯಲ್ಲಿ ಕಲ್ಲಿದ್ದಲು ಇತ್ಯಾದಿಗಳ ವೆಚ್ಚ, ವಿದೇಶ ವಿನಿಮಯದ ಹೊರಹರಿವು, ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳನ್ನು ಕಡಿಮೆ ಮಾಡಬೇಕು. ಲಭ್ಯವಿರುವ ತಾಂತ್ರಿಕ ಮತ್ತು ಆರ್ಥಿಕ ಅನುಕೂಲಗಳನ್ನು ಪಡೆಯಬೇಕು. ಭ್ರಷ್ಟಾಚಾರವನ್ನು ಪೂರ್ಣವಾಗಿ ತಡೆಗಟ್ಟಬೇಕು’ ಎಂದು ಸಮಾವೇಶದಲ್ಲಿ ಆಗ್ರಹಿಸಲಾಯಿತು.

ಆಲ್ ಇಂಡಿಯಾ ಫೆಡರೇಷನ್ ಆಫ್ ಎಲೆಕ್ಟ್ರಿಸಿಟಿ ಎಂಪ್ಲಾಯಿಸ್‌ನ ಮುಖಂಡರಾದ ಮಹಮ್ಮದ್ ಸಮೀವುಲ್ಲಾ ಸಮಾವೇಶ ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೋಪಾಲಕೃಷ್ಣ ಅರಳಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ. ಪ್ರಕಾಶ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿಗಳಾದ ಬಿ.ಎನ್.ಮಂಜುನಾಥ್, ಪ್ರತಾಪ್ ಸಿಂಹ, ವೆಂಕಟಾಚಲಯ್ಯ, ಚಂದ್ರತೇಜಸ್ವಿ ಇದ್ದರು.

ಬಾಳೆಹೊನ್ನೂರು ರಂಭಾಪುರಿ ಶ್ರೀ ಅಭಿಮತ

ಅಧಿಕಾರ ಇಲ್ಲದಾಗಲೂ ಜನ ಸೆಳೆಯುವವನೇ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರ ಇದ್ದಾಗ ಪಕ್ಕದಲ್ಲಿ ಜನರು ಇರುತ್ತಾರೆ. ಅಧಿಕಾರ ಇಲ್ಲದಾಗಲೂ ಜನರನ್ನು ತನ್ನತ್ತ ಸೆಳೆಯುವವನೇ ನಿಜವಾದ ನಾಯಕ’ ಎಂದು ಬಾಳೆಹೊನ್ನೂರು ರಂಭಾಪುರಿ ವೀರಸೋಮೇಶ್ವರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ರವೀಂದ್ರ ಕಲಾ ಕ್ಷೇತ್ರದಲ್ಲಿ ಬುಧವಾರ ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಹಮ್ಮಿಕೊಂಡಿದ್ದ ವೀರಶೈವ ಲಿಂಗಾಯತ ಸಮುದಾಯದ ಸಚಿವರು, ಶಾಸಕರನ್ನು ಅಭಿನಂದನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಜಾತಿ ಸಂಘರ್ಷಕ್ಕೆ ಅವಕಾಶ ಕೊಡದೇ ಧರ್ಮ ಸಂಸ್ಕೃತಿ, ಆದರ್ಶಗಳನ್ನು ಎತ್ತಿ ಹಿಡಿಯಬೇಕು. ಸಕಲರ ಶ್ರೇಯಸ್ಸನ್ನು ಬಯಸುವ ವೀರಶೈವ ಧರ್ಮವನ್ನು ಪುನರುತ್ಥಾನಗೊಳಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ, ಸ್ವಾಮೀಜಿಗಳು, ವೀರಶೈವ ಲಿಂಗಾಯತ ಸಮುದಾಯದ ಸಚಿವರು ಹಾಗೂ ಶಾಸಕರು ಇದ್ದರು.

ವೀರಶೈವ ಲಿಂಗಾಯತ ಸಮುದಾಯಕ್ಕೆ ಸವಾಲುಗಳನ್ನು ಎದುರಿಸುವ ಶಕ್ತಿ ಇದೆ. ನಮಗೆ ಚರಿತ್ರೆ ಇದೆ, ಚಾರಿತ್ರ್ಯ ಬೇಕಿದೆ. ಆಚಾರ್ಯರಿದ್ದಾರೆ, ಆಚರಣೆ ಬೇಕಿದೆ.
ಬಸವರಾಜ ಬೊಮ್ಮಾಯಿ, ಶಾಸಕ

ವೀರಶೈವರು, ಲಿಂಗಾಯತರು ಕೂಡಿ ಹೋರಾಟ ಮಾಡಿ ಯುವ ಪೀಳಿಗೆಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಹೆಚ್ಚಿನ ಪ್ರಾತಿನಿಧ್ಯ ಸಿಗುವಂತೆ ಮಾಡಬೇಕಾಗಿದೆ.
ಎಂ.ಬಿ. ಪಾಟೀಲ
ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ



ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ವೀರಶೈವ ಲಿಂಗಾಯತ ನೂತನ ಸಚಿವರು, ಶಾಸಕರ ಅಭಿನಂದನಾ ಸಮಾರಂಭದಲ್ಲಿ ಶಾಸಕ ಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಅವರಿಗೆ ವಂದಿಸಿದರು. ಜಗದೀಶ್ ಶೆಟ್ಟರ್, ಬಸವರಾಜ್ ರಾಯರೆಡ್ಡಿ ಇತರರು ಇದ್ದರು. –ಪ್ರಜಾವಾಣಿ ಚಿತ್ರ



ಮಂಗಳೂರಿನಲ್ಲಿ ಬುಧವಾರ ಸುರಿದ ಮಳೆಗೆ ಕೊಟ್ಟಾರ ಚೌಕಿಯಲ್ಲಿರುವ ಪ್ರಶಾಂತ್ ಶೆಟ್ಟಿ ಅವರ ಮನೆಯೊಳಗೆ ನೀರು ನುಗ್ಗಿತ್ತು –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್



ಕೊಡಗು ಜಿಲ್ಲೆಯ ಸೋಮವಾರಪೇಟೆ ಸಮೀಪದ ಐಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಜ್ಯ ಹೆದ್ದಾರಿಯಲ್ಲಿ ಬುಧವಾರ ಬೃಹತ್ ಮರವೊಂದು ಉರುಳಿ ಬಿದ್ದಿದ್ದರಿಂದ ಬ್ರೇಕ್ ಜಾಮ್ ಉಂಟಾಗಿತ್ತು

ಮಲೆನಾಡಿನಲ್ಲಿ ವರ್ಷಧಾರೆ ಬಿರುಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಲೆನಾಡು ಭಾಗ ಹಾಗೂ ಕರಾವಳಿಯಲ್ಲಿ ಬುಧವಾರ ಬಿರುಸಾದ ಮಳೆಯಾಗಿದ್ದು, ತುಂಗಾ, ಭದ್ರಾ, ಲಿಂಗನಮಕ್ಕಿ, ಮಾಣಿ ಸೇರಿದಂತೆ ಪ್ರಮುಖ ಜಲಾಶಯಗಳಿಗೆ ಒಳಹರಿವಿನ ಪ್ರಮಾಣ ಹೆಚ್ಚಿದೆ.

ಶಿವಮೊಗ್ಗ ತಾಲ್ಲೂಕು ಗಾಜನೂರಿನ ತುಂಗಾ ಜಲಾಶಯ ಸಂಪೂರ್ಣ ಭರ್ತಿಯಾಗಿದೆ. ಒಟ್ಟು 3.24 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯದಿಂದ 1,500 ಕ್ಯುಸೆಕ್ ನೀರನ್ನು ಬುಧವಾರ ಸಂಜೆಯಿಂದ ವಿದ್ಯುತ್ ಉತ್ಪಾದನೆಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. 'ಯಾವುದೇ ಕ್ಷಣದಲ್ಲಿ ಕ್ರೆಸ್ಟ್‌ಗೇಟ್ ಮೂಲಕ ನದಿಗೆ ನೀರು ಹರಿಸಲಾಗುವುದು. ತುಂಗೆಯ ದಡದ ಆಸುಪಾಸಿನ ಜನರು ಎಚ್ಚರದಿಂದ ಇರುವಂತೆ, ಜನ-ಜಾನುವಾರು ನದಿಗೆ ಇಳಿಯದಂತೆ ಮನವಿ ಮಾಡಿದ್ದೇವೆ' ಎಂದು ಕರ್ನಾಟಕ ನೀರಾವರಿ ನಿಗಮ ತುಂಗಾ ಜಲಾಶಯ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಶಿವಾನಾಯ್ಕ 'ಪ್ರಜಾವಾಣಿ'ಗೆ ತಿಳಿಸಿದರು.

ಮಳೆಯಿಂದ ತೀರ್ಥಹಳ್ಳಿಯಲ್ಲಿ ಎರಡು ಮನೆಗಳಿಗೆ ಹಾನಿಯಾಗಿದೆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ.

ಮಹಾರಾಷ್ಟ್ರ ಹಾಗೂ ಕೃಷ್ಣಾ ನದಿ ಮೇಲ್ಭಾಗದಲ್ಲಿ ಮಳೆಯಾಗುತ್ತಿರುವ ಕಾರಣ ಬಾಗಲಕೋಟೆ ಜಿಲ್ಲೆಯ ಹಿಪ್ಪರಗಿ ಬ್ಯಾರೇಜಿಗೆ 12,400 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಬ್ಯಾರೇಜಿನಿಂದ 3,500 ಕ್ಯುಸೆಕ್ ನೀರು ಹೊರಬಿಡಲಾಗುತ್ತಿದೆ.

ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶದಲ್ಲಿ ಮಳೆ ಮುಂದುವರಿದಿದ್ದು, ಘಟಪ್ರಭಾ ನದಿಗೆ ಹರಿದುಬರುವ ನೀರಿನ ಪ್ರಮಾಣ ತುಸು ಹೆಚ್ಚಿದ್ದು, ಹಿಡಕಲ್ ಜಲಾಶಯದಲ್ಲಿ ಬುಧವಾರ 154 ಕ್ಯುಸೆಕ್‌ಗೆ ಏರಿಕೆಯಾಗಿದೆ.

(ಮಂಗಳೂರು ವರದಿ): ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮಳೆ ಮುಂದುವರಿದಿದ್ದು, ಸಮುದ್ರದಲ್ಲಿ ಅಲೆಗಳ ಅಬ್ಬರ ಜೋರಾಗಿ ಕಡಲ್ಕೊರೆತ ಹೆಚ್ಚಿದೆ.

ಮಂಗಳೂರು ಹಾಗೂ ಉಡುಪಿಯ ಹಲವು ಬಡಾವಣೆಗಳಲ್ಲಿ ನೆರೆ ಸೃಷ್ಟಿಯಾಗಿ, ನಿವಾಸಿಗಳು ತೊಂದರೆ ಅನುಭವಿಸಿದರು. ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಕಟ್ಟಡದ ಮೇಲೆ ಅಳವಡಿಸಿದ್ದ ಜಾಹೀರಾತು ಫಲಕ ಉರುಳಿ ಬಿದ್ದು, 12 ದ್ವಿಚಕ್ರ ವಾಹನಗಳು ಜಖಂಗೊಂಡಿವೆ. ಉಡುಪಿಯ ಕೃಷ್ಣಮಠದ ಪಾರ್ಕಿಂಗ್ ಪ್ರದೇಶ ಜಲಾವೃತಗೊಂಡಿದೆ.

ಉಳ್ಳಾಲ ಬಳಿಯ ಪಾವೂರು ಹರೇಕಳ- ಅಡ್ಯಾರ್ ಸೇತುವೆಯ ಕೆಳಭಾಗದ ನೇತ್ರಾವತಿ ನದಿಯಲ್ಲಿ ಮೀನುಗಾರಿಕೆಗೆ ತೆರಳಿದ್ದ ದೋಣಿ ಮುಗುಚಿತ್ತು. ಸ್ಥಳದಲ್ಲಿದ್ದ ಯುವಕರ ತಂಡ, ಸೇತುವೆ ಮೇಲಿನಿಂದ ನದಿಗೆ ಹಗ್ಗವನ್ನು ಇಳಿಸಿ ನೀರಿಗೆ ಬಿದ್ದ ಯುವಕನನ್ನು ಮೇಲಕ್ಕೆತ್ತಿದ್ದಾರೆ. ದೋಣಿ ನೀರುಪಾಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲೂ ಮಳೆಯಾಗುತ್ತಿದ್ದು, ತುಂಗಾ ಮತ್ತು ಭದ್ರಾ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

(ಬೀದರ್ ವರದಿ): ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ 7, ಹುಮನಾಬಾದ್ ತಾಲ್ಲೂಕಿನಲ್ಲಿ ಒಂದು ಮನೆಯ ಗೋಡೆ ಭಾಗಶಃ ಕುಸಿದು ಬಿದ್ದಿವೆ. ಯಾದಗಿರಿ ಜಿಲ್ಲೆ, ರಾಯಚೂರು ನಗರ ಹಾಗೂ ಕಲಬುರಗಿಯಲ್ಲಿ ಮಳೆಯಾಗಿದೆ.

(ಹುಬ್ಬಳ್ಳಿ ವರದಿ): ನಿರಂತರ ಮಳೆಗೆ ಕಾರವಾರದ ಸಾಗರ ಘಟಕದ ಆವರಣದಲ್ಲಿ ನೀರು ನಿಂತಿತ್ತು. ಘಟಕದ ಶಿಥಿಲ ಕಟ್ಟಡದಲ್ಲಿ ಮಳೆ ನೀರು ಸೋರಿಕೆಯಾಗಿ, ಕಡತಗಳು ನೀರು ಪಾಲಾದವು. ಹೊನ್ನಾವರ ತಾಲ್ಲೂಕಿನ ಅಪ್ಸರಕೊಂಡ ಗ್ರಾಮದಲ್ಲಿ ಭೂಕುಸಿತ ಆಗಿದೆ.

ಭಟ್ಕಳದಲ್ಲಿ ಮಳೆ ಮುಂದುವರಿದಿದ್ದು, ರಾಷ್ಟ್ರೀಯ ಹೆದ್ದಾರಿಯ ರಂಗಿನಕಟ್ಟೆ, ಶಂಶುದ್ದೀನ್ ವೃತ್ತ ಜಲಾವೃತಗೊಂಡಿದೆ. ಬನವಾಸಿಯಲ್ಲಿ ರಭಸದ ಮಳೆಗೆ ಮನೆಯೊಂದರ ಛಾವಣಿ ಸಂಪೂರ್ಣ ಹಾನಿಯಾಗಿದ್ದು, ಗೋಡೆಗಳು ಬಿರುಕು ಬಿಟ್ಟಿವೆ.

(ಮಡಿಕೇರಿ ವರದಿ): ಮಳೆಯಿಂದ ಕೊಯನಾಡು ಸಮೀಪ ಮಡಿಕೇರಿ- ಮಂಗಳೂರು ರಸ್ತೆ ಕುಸಿಯುವ ಭೀತಿ ಉಂಟಾಗಿದ್ದು, ಸಂಚಾರ ನಿಷೇಧಿಸಲಾಗಿದೆ. ಜಿಲ್ಲೆಯ ಹಲವೆಡೆ ಮಳೆಗೆ ಬಿರುಗಾಳಿಯೂ ಜೊತೆಯಾಗಿದ್ದು, ಕಾಫಿ ತೋಟಗಳಲ್ಲಿ ಮರಗಳು ಬುಡಮೇಲಾಗುತ್ತಿವೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಬುಧವಾರ ಸುರಿದ ಮಳೆಯಿಂದ, ಹೆತ್ತೂರು ಹೋಬಳಿಯ ಬನ್ನಹಳ್ಳಿಯ ಸೋಮಶೇಖರ್ ಅವರ ಮನೆ ತಡೆಗೋಡೆ ಕುಸಿದಿದೆ.

ಇಂದು ಶಾಲೆ–ಕಾಲೇಜಿಗೆ ರಜೆ

ಮಂಗಳೂರು: ಹೆಚ್ಚಿನ ಮಳೆ ಕಾರಣ ಗುರುವಾರ (ಜುಲೈ 6ರಂದು) ಸಹ ದಕ್ಷಿಣ ಕನ್ನಡ ಜಿಲ್ಲೆಯ ಶಾಲೆಗಳು ಹಾಗೂ ಎಲ್ಲ ಕಾಲೇಜುಗಳಿಗೆ, ಉಡುಪಿ ಜಿಲ್ಲೆಯಲ್ಲಿ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಉಡುಪಿ ಜಿಲ್ಲೆಯ ಪಡುಬಿದ್ರಿಯಲ್ಲಿ 22.1 ಸೆಂ.ಮೀ. ಮಳೆಯಾಗಿದೆ.

ತುಂಗಾ ಜಲಾಶಯ ಭರ್ತಿ

ಒಂದನೇ ಪುಟದಿಂದ...

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮಲ್ಲಾಡಿಯಲ್ಲಿ ಮಂಗಳವಾರ ತಡರಾತ್ರಿ ಮಳೆಯಲ್ಲಿ ಬೈಕ್‌ನಲ್ಲಿ ಮನೆಗೆ ಹೋಗುವಾಗ ನಿಯಂತ್ರಣ ತಪ್ಪಿ ಕೆರೆಗೆ ಬಿದ್ದು ದಿವಾಕರ ಶೆಟ್ಟಿ (53) ಮೃತಪಟ್ಟಿದ್ದಾರೆ. ಬುಧವಾರ ಅವರ ಶವ ಪತ್ತೆಯಾಗಿದೆ. ಕುಂದಾಪುರ ತಾಲ್ಲೂಕಿನ ಯಡಮೊಗೆ ಗ್ರಾಮದ ಕೆಂಜಾಡ್ರಿ ಐತಾಳ್ (73) ಕುಬ್ಜಾ ನದಿಯ ಕಾಲುಸಂಕ ದಾಟುವಾಗ ಆಕಸ್ಮಿಕವಾಗಿ ನದಿಗೆ ಬಿದ್ದು ಮೃತಪಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಅರ್ಗಾ ಗ್ರಾಮದಲ್ಲಿ ಮಳೆನೀರು ತುಂಬಿದ್ದ ಮನೆಯಂಗಳದಲ್ಲಿ ಕಾಲುಜಾರಿ ಬಿದ್ದು ತಾರಾಬಾಯಿ (81) ಮೃತಪಟ್ಟಿದ್ದಾರೆ.

ಹೊಲದಲ್ಲಿ ಉಳುಮೆ ಮಾಡುವಾಗ ಎತ್ತುಗಳ ಕೊಂಬಿಗೆ ಸಿಲುಕಿದ್ದ ವಿದ್ಯುತ್ ತಂತಿ ತೆಗೆಯಲು ಹೋಗಿ ಎರಡು ಎತ್ತುಗಳ ಜೊತೆಗೆ ರೈತ ಸಂತೋಷ ಹೊಂಬರಡಿ (22) ಸಾವಿಗೀಡಾದ ಘಟನೆ ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಮಲ್ಲೂರು ಗ್ರಾಮದಲ್ಲಿ ಬುಧವಾರ ನಡೆದಿದೆ.

ಯಾದಗಿರಿಯಲ್ಲಿ ಸಿಡಿಲು ಬಡಿದು ಒಂದು ಎತ್ತು ಮೃತಪಟ್ಟಿದೆ.

ಇನ್ನೆರಡು ದಿನ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲೆಡೆ ಇನ್ನೆರಡು ದಿನ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾರಿ ಮಳೆಯಾಗಲಿದೆ. ಈ ಮೂರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಬೆಳಗಾವಿ, ಧಾರವಾಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗಿನ ಹಲವೆಡೆ ಭಾರಿ ಮಳೆ ಬೀಳಲಿದೆ. ಈ ಜಿಲ್ಲೆಗಳನ್ನು 'ಯಲ್ಲೋ ಅಲರ್ಟ್' ಎಂದು ಘೋಷಿಸಲಾಗಿದೆ. ಇಲ್ಲದೇ ರಾಜ್ಯದ ಉಳಿದ ಜಿಲ್ಲೆಗಳಲ್ಲಿಯೂ ಮಳೆಯಾಗುವ ಸಾಧ್ಯತೆ ಇದೆ.

ಬಿರುಗಾಳಿ: ಒಳನಾಡಿನಲ್ಲಿ ಗಂಟೆಗೆ 30-40 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸಲಿದೆ. ಕರಾವಳಿಯಲ್ಲಿ ಗಂಟೆಗೆ 55-65 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರುತ್ತದೆ. ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಉಳ್ಳಾಲ: ನೀರಿಗಿಳಿದು ವಿದ್ಯುತ್ ಮಾರ್ಗ ದುರಸ್ತಿ

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಮೆಸ್ಕಾಂನ ಉಳ್ಳಾಲ-2 ಘಟಕದ ಪವರ್ ಮೆನ್ ವಸಂತ್ ಹಾಗೂ ಸುರೇಶ್ ಗದ್ದೆಯೊಂದರಲ್ಲಿ ಸೃಷ್ಟಿಯಾಗಿದ್ದ ನೆರೆಯಲ್ಲಿ ಸಾಗಿ ವಿದ್ಯುತ್ ಮಾರ್ಗ ರಿಪೇರಿ ಮಾಡಿ 40 ಮನೆಗಳಿಗೆ ವಿದ್ಯುತ್ ಪೂರೈಸಿದ್ದಾರೆ.

ಈ ಕುರಿತ ವಿಡಿಯೊವನ್ನು ಮೆಸ್ಕಾಂ ಜೆ.ಇ. ನಿತೇಶ್ ಹೊಸಗದ್ದೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ಸಿಬ್ಬಂದಿಯ ಈ ಕಾರ್ಯಕ್ಕೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬೆಳ್ಮ ಗ್ರಾಮದ ಬೆರಿಕೆ ಎಂಬಲ್ಲಿ ಬಿರುಗಾಳಿ, ಮಳೆಗೆ ವಿದ್ಯುತ್ ಕಂಬದ ತಂತಿಗಳು ಪರಸ್ಪರ ಸ್ಪರ್ಶಿಸಿ, ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಈ ಬಗ್ಗೆ ಸ್ಥಳೀಯರು ಮೆಸ್ಕಾಂಗೆ ದೂರು ನೀಡಿದ್ದರು. ಸ್ಥಳಕ್ಕೆ ಮೆಸ್ಕಾಂನ ಪವರ್ ಮೆನ್ ವಸಂತ್ ಹಾಗೂ ಸುರೇಶ್ ಭೇಟಿ ನೀಡಿದರು. ಆದರೆ, ವಿದ್ಯುತ್ ಕಂಬವು ನೆರೆ ನೀರಿನಿಂದ ಆವೃತಗೊಂಡಿತ್ತು. ಸ್ಥಳೀಯರೊಬ್ಬರ ಮಾರ್ಗದರ್ಶನದಲ್ಲಿ ನೀರಿಗೆ ಇಳಿದ ಸಿಬ್ಬಂದಿ, ಕಂಬವನ್ನೇರಿ ತುರ್ತು ದುರಸ್ತಿ ಕಾರ್ಯ ಕೈಗೊಂಡರು.



ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ಬಳಿಯ ಬೆಳ್ಮ ಗ್ರಾಮದ ಬೆರಿಕೆಯಲ್ಲಿ ನೀರು ತುಂಬಿದ್ದ ಜಮೀನಿನಲ್ಲಿಯ ವಿದ್ಯುತ್ ಕಂಬವನ್ನೇರಿ ವಿದ್ಯುತ್ ಮಾರ್ಗ ದುರಸ್ತಿ ಮಾಡಿದ ಮೆಸ್ಕಾಂ ಸಿಬ್ಬಂದಿ

ಖಾರದಪುಡಿ ಮಹೇಶ್ ಪ್ರಕರಣ: ₹ 17.24 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿ ಸರ್ಕಾರದ ಬೊಕ್ಕಸಕ್ಕೆ ₹ 103.85 ಕೋಟಿ ನಷ್ಟವುಂಟುಮಾಡಿರುವ ಆರೋಪ ಎದುರಿಸುತ್ತಿರುವ ಹೊಸಪೇಟೆಯ ಖಾರದಪುಡಿ ಮಹೇಶ್ ಮತ್ತು ಸಹಚರರಿಗೆ ಸೇರಿದ ₹ 17.24 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಖಾರದಪುಡಿ ಮಹೇಶ್, ಸಹೋದರರಾದ ಕೆ.ಗೋವಿಂದರಾಜ್. ಕೆ.ಸದಾಶಿವ, ಕೆ.ಕುಮಾರ್ ಮತ್ತು ಸಹಚರರಿಗೆ ಸೇರಿದ ₹ 54.18 ಕೋಟಿ ಮೌಲ್ಯದ ಆಸ್ತಿಗಳನ್ನು ಈ ಹಿಂದೆ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಈಗ ಒಟ್ಟು ₹ 71.42 ಕೋಟಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳ ಲಾಗಿದೆ ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

ಮಹೇಶ್, ಸಹೋದರರು ಮತ್ತು ಸಹಚರರು ಪರವಾನಗಿ ಇಲ್ಲದೆ ಹಾಗೂ ನಕಲಿ ಪರವಾನಗಿ ಬಳಸಿ ₹ 62.92 ಕೋಟಿ ಮೌಲ್ಯದ ಕಬ್ಬಿಣದ ಅದಿರನ್ನು ಸಾಗಣೆ ಮಾಡಿರುವ ಆರೋಪವಿದೆ. ಇದೇ ವ್ಯಕ್ತಿಗಳು ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದವರಿಂದ ₹ 40.93 ಕೋಟಿ ಹಫ್ತಾ ಪಡೆದು ಅದಿರು ಕಳ್ಳಸಾಗಣೆಗೆ ಅವಕಾಶ ಕಲ್ಪಿಸಿದ ಆರೋಪವೂ ಇದೆ. ಈ ಪ್ರಕರಣ ಕುರಿತು ಲೋಕಾಯುಕ್ತ ಎಸ್‌ಐಟಿ ತನಿಖೆ ನಡೆಸಿತ್ತು.

ವಿಎಚ್‌ಪಿ ಪ್ರಮುಖ ಕೇಶವ ಹೆಗಡೆ ನಿಧನ

ಶಿರಸಿ: ವಿಶ್ವ ಹಿಂದೂ ಪರಿಷತ್ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಕೇಶವ ಹೆಗಡೆ ಮಣ್ಣಿಮನೆ (63) ಬುಧವಾರ ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾದರು.



ಕೇಶವ ಹೆಗಡೆ ಮಣ್ಣಿಮನೆ

ಮೂಲತಃ ಶಿರಸಿಯ ತಟ್ಟಿಸರ ಮಣ್ಣಿಮನೆಯ ಕೇಶವ ಹೆಗಡೆ ವಿದ್ಯಾರ್ಥಿ ದೆಸೆಯಿಂದಲೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿದ್ದರು. ಪೂರ್ಣಾವಧಿ ಪ್ರಚಾರಕರಾಗಿ ತಮ್ಮನ್ನು ತೊಡಗಿಸಿಕೊಂಡ ಬಳಿಕ ವಿಶ್ವ ಹಿಂದೂ ಪರಿಷತ್‌ಗೆ ನಿಯೋಜನೆ ಮಾಡಲಾಗಿತ್ತು. ರಾಮಮಂದಿರ ಹೋರಾಟ ಸೇರಿದಂತೆ ವಿಹಿಂಪದ ಎಲ್ಲ ಹೋರಾಟ, ಚಟುವಟಿಕೆ ಗಳಲ್ಲಿ ತೊಡಗಿಸಿ ಕೊಂಡಿದ್ದರು.

'ನೆಮ್ಮದಿ'ಯಲ್ಲಿ ಅಂತ್ಯಕ್ರಿಯೆ: ಕೇಶವ ಹೆಗಡೆ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ನಗರದ ಸಾಮ್ರಾಟ ಹೋಟೆಲ್ ಎದುರಿನ ನೆಮ್ಮದಿ ರುದ್ರಭೂಮಿ 'ಸದ್ಗತಿ'ಯಲ್ಲಿ ಅವಕಾಶ ಮಾಡಲಾಗಿದೆ.

ಗುರುವಾರ ಬೆಳಿಗ್ಗೆ 6ರಿಂದ11ರ ತನಕ ಸಾರ್ವಜನಿಕ ದರ್ಶನ, ಬಳಿಕ ಶ್ರದ್ಧಾಂಜಲಿ ಸಭೆ, ಅಂತ್ಯಕ್ರಿಯೆ ನಡೆಯಲಿದೆ. ವಿಶ್ವ ಹಿಂದೂ ಪರಿಷತ್ ರಾಷ್ಟ್ರ ಪ್ರಮುಖರು, ಆರ್‌ಎಸ್‌ಎಸ್ ಪ್ರಮುಖರೂ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

2.82 ಲಕ್ಷ ಎಕರೆ ಕಂದಾಯ ಭೂಮಿ ಒತ್ತುವರಿ; ಕೃಷ್ಣ ಬೈರೇಗೌಡ

ಬೆಂಗಳೂರು: 'ರಾಜ್ಯದಲ್ಲಿ 2.82 ಲಕ್ಷ ಎಕರೆ ಕಂದಾಯ ಭೂಮಿ ಒತ್ತುವರಿಯಾಗಿದೆ. ಅಧಿಕಾರಿಗಳ ಸಹಕಾರ ಇಲ್ಲದೆಯೇ ಇಂತಹ ಅಕ್ರಮಗಳು ನಡೆಯಲು ಸಾಧ್ಯವಿಲ್ಲ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಟಿ.ಎ.ಶರವಣ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಸ್ಪರ್ಧಾ ವಾಣಿ



ದೇಶದಾದ್ಯಂತ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿಯಿರುವ 4545 ಕ್ಲರ್ಕ್ ಹುದ್ದೆಗಳ ಭರ್ತಿಗಾಗಿ ಐಬಿಪಿಎಸ್ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆ, ಅಭ್ಯರ್ಥಿಗಳ ಆಯ್ಕೆ ಹಾಗೂ ನೇಮಕಾತಿ ಸ್ವರೂಪ ಕುರಿತ ಮಾಹಿತಿ ಇಲ್ಲಿದೆ.

ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ 4545 ಗುಮಾಸ್ತ ಹುದ್ದೆಗಳು

ಆರ್.ಕೆ.ಬಾಲಚಂದ್ರ

ಬ್ಯಾಂಕ್‌ಗಳಲ್ಲಿ ಗುಮಾಸ್ತ (ಕ್ಲರ್ಕ್) ಹುದ್ದೆಗೆ ಸೇರಬೇಕು ಎಂಬ ಕನಸು ಹೊತ್ತವರಿಗೆ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ಸಿಹಿ ಸುದ್ದಿಯೊಂದನ್ನು ನೀಡಿದೆ. ದೇಶದ 11 ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿ ಇರುವ 4,545ಕ್ಕೂ ಹೆಚ್ಚು ಕ್ಲರಿಕಲ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಕರ್ನಾಟಕದಲ್ಲಿ 253 ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಿದೆ.

ರಾಜ್ಯದ ಯಾವ ಬ್ಯಾಂಕಿನಲ್ಲಿ ಎಷ್ಟು ಹುದ್ದೆಗಳು?

ಕ್ರಮ ಸಂಖ್ಯೆ	ಬ್ಯಾಂಕ್‌ಗಳು	ಹುದ್ದೆಗಳು
1	ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್	9
2	ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ	61
3	ಬ್ಯಾಂಕ್ ಆಫ್ ಇಂಡಿಯಾ	3
4	ಪಂಜಾಬ್ ನ್ಯಾಷನಲ್ ಬ್ಯಾಂಕ್	15
5	ಕೆನರಾ ಬ್ಯಾಂಕ್	165
	ಒಟ್ಟು	253

ಅರ್ಜಿ ಸಲ್ಲಿಕೆ ಪ್ರಕ್ರಿಯೆ

ಆನ್‌ಲೈನ್ ಮೂಲಕ (https://www.ibps.in)ಅರ್ಜಿ ಸಲ್ಲಿಸಬೇಕು. ಜುಲೈ 1 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಜುಲೈ 21 ಅರ್ಜಿ ಸಲ್ಲಿಸಲು ಕೊನೆ ದಿನ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಬ್ಯಾಂಕಿನ ಆದ್ಯತೆ ಆದೇಶವನ್ನು ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಅಳವಡಿಸಲಾಗಿದೆ. ಅಭ್ಯರ್ಥಿಗಳು ತಮ್ಮ ಆಯ್ಕೆಯ ಬ್ಯಾಂಕ್‌ಗಳ ಆದ್ಯತೆ ಕ್ರಮವನ್ನು ಸೂಚಿಸಬೇಕು.

ವಯೋಮಿತಿ: ಕನಿಷ್ಠ 20 ವರ್ಷಗಳು ಗರಿಷ್ಠ 28 ವರ್ಷಗಳು. ಸರ್ಕಾರದ ನಿಯಮದಂತೆ ಎಸ್‌ಸಿ/ ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಅಂಗವಿಕಲರಿಗೆ 10 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ₹850 ಹಾಗೂ ಎಸ್‌ಸಿ/ಎಸ್‌ಟಿ/ಅಂಕವಿಕಲರು/ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹175 ಶುಲ್ಕ ನಿಗದಿಪಡಿಸಲಾಗಿದೆ. ಬ್ಯಾಂಕ್ ಸೇವಾ ಶುಲ್ಕ ಮತ್ತು ಇಂಟಿಮೇಷನ್ ಫೀ ಪ್ರತ್ಯೇಕವಾಗಿ ಪಾವತಿಸಬೇಕಾಗುತ್ತದೆ. ಆನ್ ಲೈನ್ ಮೂಲಕ ಮಾತ್ರ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿದೆ.

ಶೈಕ್ಷಣಿಕ ಅರ್ಹತೆ: ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ಜೊತೆಗೆ ಕಂಪ್ಯೂಟರ್ ಜ್ಞಾನ ಹೊಂದಿರುವುದು ಕಡ್ಡಾಯ. ಹೀಗಾಗಿ ಕಂಪ್ಯೂಟರ್ ಕಲಿಕೆಯ ಬಗ್ಗೆ ದೃಢೀಕರಣ ಪತ್ರವನ್ನೂ ಹೊಂದಿರಬೇಕು (ಕಂಪ್ಯೂಟರ್‌ಗೆ ಸಂಬಂಧಿಸಿದ ವಿಷಯದಲ್ಲಿ ಸರ್ಟಿಫಿಕೇಟ್/ ಡಿಪ್ಲೊಮಾ ಅಥವಾ ಡಿಗ್ರಿ ಪಡೆದಿರುವುದು ಅಥವಾ ಶಾಲೆ ಅಥವಾ ಕಾಲೇಜಿನಲ್ಲಿ ಕಂಪ್ಯೂಟರ್ ಅಥವಾ ಐಟಿ (InformationTechnology)ಯನ್ನು ಒಂದು ವಿಷಯವಾಗಿ ಓದಿರಬೇಕು). ಅಲ್ಲದೆ, ರಾಜ್ಯದ ಅಧಿಕೃತ ಭಾಷೆಯಲ್ಲಿ ಮಾತನಾಡುವ, ಬರೆಯುವ ಸಾಮರ್ಥ್ಯ ಹೊಂದಿರಬೇಕು.

ಪದವಿ ಪೂರ್ಣಗೊಳಿಸಿದವರು ಮಾತ್ರ ಅರ್ಜಿ ಸಲ್ಲಿಸಬಹುದು. ಪದವಿಯಲ್ಲಿ ಪಡೆದ ಶೇಕಡಾವಾರು ಅಂಕಗಳನ್ನು ಅರ್ಜಿಯಲ್ಲಿ ಭರ್ತಿ ಮಾಡಬೇಕಾಗಿರುತ್ತದೆ.

ಲಿಖಿತ ದೃಢೀಕರಣ

ಅರ್ಜಿ ಸಲ್ಲಿಕೆಯ ವೇಳೆ ಕೈಬರಹದ ಘೋಷಣೆಯ ಪತ್ರ ಈ ರೀತಿಯಲ್ಲಿ ಬರೆದು ಅಪ್ಲೋಡ್ ಮಾಡಬೇಕು,________ (ಅಭ್ಯರ್ಥಿಯ ಹೆಸರು),ಈ ಮೂಲಕ ಅರ್ಜಿಯಲ್ಲಿ ಸಲ್ಲಿಸಿದ ಎಲ್ಲಾ ಮಾಹಿತಿಯು ಸರಿಯಾಗಿದೆ.ನಿಜ ಮತ್ತು ಮಾನ್ಯವಾಗಿದೆ ಎಂದು ಘೋಷಿಸುತ್ತೇನೆ. ಅಗತ್ಯವಿದ್ದಾಗ ನಾನು ಪೂರಕ ದಾಖಲೆಗಳನ್ನು ಪ್ರಸ್ತುತಪಡಿಸುತ್ತೇನೆ'.

ಲಿಖಿತ ಘೋಷಣೆಯು ಇಂಗ್ಲಿಷ್‌ನಲ್ಲಿ ಮಾತ್ರ ಇರಬೇಕು. ಕ್ಯಾಪಿಟಲ್ ಲೆಟರ್ಸ್‌ನಲ್ಲಿ ಇರಬಾರದು. ಕ್ಯಾಪಿಟಲ್ ಲೆಟರ್‌ಗಳಲ್ಲಿ ಹಾಕಿದ ಸಹಿಯನ್ನು ಸ್ವೀಕರಿಸಲಾಗುವುದಿಲ್ಲ. ಎಡ ಹೆಬ್ಬೆರಳಿನ ಗುರುತು ಸರಿಯಾಗಿ ಸ್ಕ್ಯಾನ್ ಮಾಡಬೇಕು ಮತ್ತು ಮಸುಕಾಗಿರಬಾರದು.

ಆಯ್ಕೆ ಪ್ರಕ್ರಿಯೆಯ ಹಂತದಲ್ಲಿ ಅಥವಾ ಅಪಾಯಿಂಟ್‌ಮೆಂಟ್‌ನ ನಂತರ ನಿಮ್ಮ ಕೈಬರಹದ ಘೋಷಣೆ ಹಾಗೂ ನಿಮ್ಮ ಕೈಬರಹದಲ್ಲಿ ಭಿನ್ನವಾಗಿರುವುದು ತಜ್ಞರ ವಿಶ್ಲೇಷಣೆಯಲ್ಲಿ ಕಂಡುಬಂದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುವುದು. ಹೀಗಾಗಿ ಅರ್ಜಿ ಸಲ್ಲಿಸುವ ಹಂತದಲ್ಲಿಯೇ ಬಹಳ ಎಚ್ಚರಿಕೆಯಿಂದ ಅರ್ಜಿ ಸಲ್ಲಿಸುವುದು ಒಳಿತು.

ಯಾವ್ಯಾವ ಬ್ಯಾಂಕ್‌ಗಳಲ್ಲಿ ಎಷ್ಟೆಷ್ಟು ಹುದ್ದೆಗಳಿವೆ ಹಾಗೂ ನಮ್ಮ ರಾಜ್ಯದಲ್ಲಿ ಆ ಬ್ಯಾಂಕ್‌ಗಳ ಶಾಖೆಗಳಿವೆ ಎಂಬುದರ ಮೇಲೆ ನಿಮ್ಮ ಆದ್ಯತೆಯ ಆಯ್ಕೆ ಇರಲಿ. ಒಮ್ಮೆ ನೀವು ಆಯ್ಕೆಯಾದರೆ ಬ್ಯಾಂಕ್ ಬದಲಾವಣೆಗೆ/ಸ್ಥಳ ಬದಲಾವಣೆ ವಿನಂತಿಯನ್ನು ನಂತರದ ದಿನಗಳಲ್ಲಿ ಪರಿಗಣಿಸಲಾಗುವುದಿಲ್ಲ.

ರಾಜ್ಯದಲ್ಲಿ ಪರೀಕ್ಷಾ ಕೇಂದ್ರಗಳೆಲ್ಲಿ?: ರಾಜ್ಯದ 11 ಜಿಲ್ಲಾ ಕೇಂದ್ರಗಳಲ್ಲಿ ಪೂರ್ವಭಾವಿ ಪರೀಕ್ಷೆ ಮತ್ತು ಮುಖ್ಯ ಪರೀಕ್ಷೆಗಳು ಆನ್‌ಲೈನ್‌ನಲ್ಲಿ ನಡೆಯಲಿದೆ.

ಪೂರ್ವಭಾವಿ ಪರೀಕ್ಷೆ: ಬೆಂಗಳೂರು, ಬೆಳಗಾವಿ, ಬೀದರ್, ಕಲಬುರಗಿ, ದಾವಣಗೆರೆ,ಹುಬ್ಬಳ್ಳಿ-ಧಾರವಾಡ, ಮೈಸೂರು, ಮಂಗಳೂರು, ಶಿವಮೊಗ್ಗ, ಉಡುಪಿ.


ಮುಖ್ಯ ಪರೀಕ್ಷೆ: ಬೆಂಗಳೂರು, ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರು.

ಇನ್ನೊಂದಿಷ್ಟು ಮಾಹಿತಿ...

ಕನ್ನಡದಲ್ಲಿ ಪರೀಕ್ಷೆ: ಕರ್ನಾಟಕದ ಅಭ್ಯರ್ಥಿಗಳು ಹಿಂದಿ ಅಥವಾ ಇಂಗ್ಲಿಷ್ ಜೊತೆಗೆ ಕನ್ನಡ ಮತ್ತು ಕೊಂಕಣಿ ಭಾಷೆಯಲ್ಲೂ ಪರೀಕ್ಷೆ ಬರೆಯುವ ಅವಕಾಶ ವಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಭಾಷೆ ನಮೂದಿಸಬೇಕು. (ಪರೀಕ್ಷಾ ಸಂದರ್ಭದಲ್ಲಿ ಬದಲಾವಣೆಗೆ ಅವಕಾಶವಿಲ್ಲ ಎಂಬುದನ್ನು ಮರೆಯದಿರಿ)

ಸಂದರ್ಶನವಿಲ್ಲ: ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹತೆ ಪಡೆಯುವ ಮತ್ತು ಶಾರ್ಟ್‌ಲಿಸ್ಟ್ ಮಾಡಿದ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ. ಮುಖ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳು ಆಧಾರದ ಮೇಲೆ ಆಯ್ಕೆಯಾದವರಿಗೆ ತಾತ್ಕಾಲಿಕವಾಗಿ ನೇಮಕಾತಿ ಪತ್ರ ವಿತರಿಸಲಾಗುತ್ತದೆ.

ಪರೀಕ್ಷೆಗಳು: ಇದೇ ಸೆಪ್ಟೆಂಬರ್‌ನಲ್ಲಿ ಪೂರ್ವಭಾವಿ ಪರೀಕ್ಷೆ, ಸೆಪ್ಟೆಂಬರ್ –ಅಕ್ಟೋಬರ್ ತಿಂಗಳ ನಡುವೆ ಮುಖ್ಯ ಪರೀಕ್ಷೆ ನಡೆಯುವ ಸಾಧ್ಯತೆ ಇದೆ. ಮುಂದಿನ ವರ್ಷ (2024) ಏಪ್ರಿಲ್ ವೇಳೆಗೆ ಪ್ರಾತಿನಿಧಿಕ ಹಂಚಿಕೆ ನಡೆಯುವ ಸಾಧ್ಯತೆ ಇದೆ.



ಸಾಂದರ್ಭಿಕ ಚಿತ್ರ

ಪರೀಕ್ಷಾ ಪೂರ್ವ ತರಬೇತಿ

ಐಬಿಪಿಎಸ್ ಎಸ್ ಸಿ/ಎಸ್ ಟಿ, ಅಲ್ಪಸಂಖ್ಯಾತ ಅಭ್ಯರ್ಥಿಗಳು ಮಾಜಿ ಸೈನಿಕರು, ಅಂಗವಿಕಲ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲಿವೆ. ತರಬೇತಿ ಪಡೆಯುವ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸುವಾಗಲೇ ತರಬೇತಿ ಪಡೆಯುವ ಬಗ್ಗೆ ಅದಕ್ಕಾಗಿ ಮೀಸಲಿಟ್ಟ ಕಾಲಂನಲ್ಲಿ ನಮೂದಿಸಬೇಕು. ತರಬೇತಿ ಸ್ಥಳದ ಖರ್ಚು ವೆಚ್ಚಗಳನ್ನು ಹಾಗೂ ಪ್ರಯಾಣದ ಖರ್ಚು ವೆಚ್ಚವನ್ನು ಅಭ್ಯರ್ಥಿಗಳ ಭರಿಸ ಬೇಕಾಗುತ್ತದೆ. ರಾಜ್ಯದಲ್ಲಿ ಬೆಂಗಳೂರು, ಹುಬ್ಬಳ್ಳಿ, ಮೈಸೂರು ಹಾಗೂ ಮಂಗಳೂರಿನಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರಗಳಿವೆ.

ಅರ್ಜಿ ಸಲ್ಲಿಕೆ ಹಾಗೂ ಅಧಿಸೂಚನೆ, ಹೆಚ್ಚಿನ ಮಾಹಿತಿಗೆ ವೆಬ್: https://www.ibps.in/ ಜಾಲತಾಣಕ್ಕೆ ಭೇಟಿ ನೀಡಿ.

(ಲೇಖಕರು: ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಮಾದರಿ ಪ್ರಶ್ನೋತ್ತರಗಳು

ಆರ್‌ಆರ್‌ಬಿ ನೇಮಕಾತಿ ಪರೀಕ್ಷೆ

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (ಆರ್‌ಆರ್‌ಬಿ)ಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿಗಾಗಿ ಐಬಿಪಿಎಸ್ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮೂರು ಸಂಚಿಕೆಗಳಲ್ಲಿ ವಿವರವಾದ ಮಾಹಿತಿ ಪ್ರಕಟಿಸಲಾಗಿತ್ತು. ಈ ನೇಮಕಾತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗೆ ಇಪ್ಪತ್ತಕ್ಕೂ ಹೆಚ್ಚು ವಿಷಯಗಳನ್ನು ನಿಗದಿಪಡಿಸಲಾಗಿದೆ. ಕಳೆದ ಸಂಚಿಕೆಯಲ್ಲಿ ಪರೀಕ್ಷೆಯ ವಿಷಯಗಳಿಗೆ ಸಂಬಂಧಿಸಿದಂತೆ ಒಂದಷ್ಟು ವಿಷಯಗಳಿಗೆ ಪೂರಕವಾದ ಮಾದರಿ ಪ್ರಶ್ನೋತ್ತರಗಳನ್ನು ಕೊಡಲಾಗಿತ್ತು. ಈ ಸಂಚಿಕೆಯಲ್ಲಿ ಇನ್ನಷ್ಟು ವಿಷಯಗಳಿಗೆ ಸಂಬಂಧಿಸಿದ ಒಂದೊಂದು ಮಾದರಿ ಪ್ರಶ್ನೋತ್ತರವ ನೀಡಲಾಗಿದೆ. ಜೊತೆಗೆ, ಉತ್ತರಕ್ಕೆ ವಿವರಣೆಯನ್ನು ನೀಡಲಾಗಿದೆ.

ಆರ್‌ಕೆಬಿ

1) ಕೋಡಿಂಗ್ ಡಿಕೋಡಿಂಗ್ (Coding Decoding)

1) ಇಂಗ್ಲಿಷ್‌ನಲ್ಲಿರುವ NOIDA ಪದವನ್ನು OPJEB ಎಂದು ಕೋಡ್ ಮಾಡಿದರೆ, ಅದೇ ಭಾಷೆಯಲ್ಲಿ DELHI ಯನ್ನು ಹೇಗೆ ಕೋಡ್ ಮಾಡಲಾಗುತ್ತದೆ?

ಎ) CDKGH ಬಿ) EFMIJ
ಸಿ) FGNJK ಡಿ) IHLED

ಉತ್ತರ: ಬಿ

ವಿವರಣೆ: NOIDA ಪದವನ್ನು OPJEB ಎಂಬ ಕೋಡ್ ಆಗಿ ರೂಪಿಸಲು, ಮೂಲ ಪದದ ಪ್ರತಿ ಒಂದು ವರ್ಣ ಮಾಲೆಯ ಮುಂದಿನ ಅಕ್ಷರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಂದರೆ N ನಂತರ O, O ನಂತರ P ಅಕ್ಷರ, ಅದೇ ರೀತಿ I ನಂತರ J, ಮತ್ತೆ D ನಂತರ E ಹಾಗೂ ಕೊನೆಯ ಅಕ್ಷರ A, ಅದರ ಮುಂದಿನ ಅಕ್ಷರ B. ಹೀಗೆ,DELHI ಪದದಲ್ಲಿ, D ನಂತರ E, Eಗೆ ಬದಲಾಗಿ F, L ನಂತರವಿರುವ M, H ಮುಂದಿನ ಅಕ್ಷರ I, I ನಂತರದ ಅಕ್ಷರ J – ಎಂದು ಹೀಗೆ ಕೋಡ್ ಮಾಡಿದಾಗ EFMIJ ಪದ ಸಿಗುತ್ತದೆ. ಆದ್ದರಿಂದ ಮೇಲಿನ ಆಯ್ಕೆಗಳಲ್ಲಿ ಸರಿಯಾದ ಉತ್ತರ B.



2) ಸಮರ್ಥನೆ ಮತ್ತು ಕಾರಣ (Assertion and Reason)

ಸಮರ್ಥನೆ (A): ಜೇಮ್ಸ್ ವ್ಯಾಟ್ ಸ್ಟೀಮ್ ಎಂಜಿನ್ ಕಂಡುಹಿಡಿದರು.

ಕಾರಣ (R): ಪ್ರವಾಹಕ್ಕೆ ಒಳಗಾದ ಗಣಿಗಳಿಂದ ನೀರನ್ನು ಪಂಪ್ ಮಾಡಲು ಇದನ್ನು ಕಂಡುಹಿಡಿಯಲಾಯಿತು.

ಎ) A ಮತ್ತು R ಎರಡೂ ನಿಜ ಮತ್ತು R ಎಂಬುದು A ಯ ಸರಿಯಾದ ವಿವರಣೆಯಾಗಿದೆ.
ಬಿ) A ಮತ್ತು R ಎರಡೂ ನಿಜ, ಆದರೆ A ಗೆ ಸರಿಯಾದ ವಿವರಣೆ R ಅಲ್ಲ.
ಸಿ) A ನಿಜ, ಆದರೆ R ಸುಳ್ಳು.
ಡಿ) A ಸುಳ್ಳು, ಆದರೆ R ನಿಜ.
ಇ) A ಮತ್ತು R ಎರಡೂ ಸುಳ್ಳು.

ಉತ್ತರ: ಎ

ವಿವರಣೆ: ಮುಖ್ಯವಾಗಿ ಸಮರ್ಥನೆಗೆ ಇರುವ ಕಾರಣ ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ಕಂಡುಹಿಡಿಯಬೇಕು. ಪ್ರವಾಹಕ್ಕೆ ಒಳಗಾದ ಗಣಿಗಳಿಂದ ನೀರನ್ನು ಪಂಪ್ ಮಾಡಲು ಸ್ವಯಂ-ಕೆಲಸ ಮಾಡುವ ಎಂಜಿನ್ ಅಗತ್ಯವನ್ನು ಮನಗಂಡ ಜೇಮ್ಸ್ ವ್ಯಾಟ್ ಅವರಿಗೆ ಉಗಿ ಯಂತ್ರವನ್ನು ಆವಿಷ್ಕರಿಸಲು ಕಾರಣವಾಯಿತು.

3) ಅಗತ್ಯ ಭಾಗ (Essential Part)

ಉದಾಹರಣೆಗೆ : ಪುಸ್ತಕ

ಎ) ಶಿಕ್ಷಣ ಬಿ) ಚಿತ್ರಗಳು
ಸಿ) ಪುಟಗಳು ಡಿ) ಜ್ಞಾನ

ಉತ್ತರ: ಸಿ

ವಿವರಣೆ: ಪುಸ್ತಕದೊಳಗೆ ಚಿತ್ರಗಳಿರುತ್ತವೆ, ನಿಜ. ಹಾಗೆಯೇ, ಪುಸ್ತಕ ಓದುವುದರಿಂದ 'ಶಿಕ್ಷಣ', 'ಜ್ಞಾನ'ವೂ ಸಿಗುತ್ತದೆ. ಆದರೆ ಪುಟಗಳಿಲ್ಲದಿದ್ದರೆ ಪುಸ್ತಕ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ 'ಸಿ' ಸರಿಯಾದ ಉತ್ತರ

4) ತಾರ್ಕಿಕ ಸಮಸ್ಯೆಗಳು (Logical Problems)

I. ಪೂಜಾ(ಪಿ) ಮುಕೇಶ್(ಎಂ)ಗಿಂತ ಹಿರಿಯಳು.
II. ಸುರೇಶ್ (ಎಸ್) ಅವರು ಪೂಜಾ(ಪಿ) ಅವರಿಗಿಂತ ಹಿರಿಯರು.
III. ಮುಕೇಶ್ ಸುರೇಶ್ ಗಿಂತ ಹಿರಿಯರು.

ಈ ಹೇಳಿಕೆಗಳನ್ನು ಗಮನಿಸಿ. ಅದರಲ್ಲಿ ಮೊದಲ ಎರಡು ಹೇಳಿಕೆಗಳು ನಿಜವಾಗಿದ್ದರೆ, ಮೂರನೇ ಹೇಳಿಕೆ ಏನು ಎಂದು ಕೆಳಗಿನ ಆಯ್ಕೆಯಿಂದ ಗುರುತಿಸಿ ?

ಎ) ಸುಳ್ಳು ಬಿ) ನಿಜ ಸಿ) ಅನಿಶ್ಚಿತ

ಉತ್ತರ: ಎ

ವಿವರಣೆ: ಹೇಳಿಕೆ I) P > M, ಹೇಳಿಕೆ II) S > P, ಹೇಳಿಕೆ III) S > P > M ಹೇಳಿಕೆ IV) III ರ ಪ್ರಕಾರ M > S ಮೊದಲೆರಡು ಹೇಳಿಕೆಗಳಿಂದ ಮುಕೇಶ್ ಮೂವರಲ್ಲಿ ಕಿರಿಯ ವ್ಯಕ್ತಿ ಎಂಬುದು ಸ್ಪಷ್ಟವಾಗಿದೆ. ಆದ್ದರಿಂದ, ಮೂರನೇ ಹೇಳಿಕೆ ಸುಳ್ಳು. (ಮುಗಿಯಿತು)

ಇನ್ನಷ್ಟು ವಿಷಯಗಳ ಮಾದರಿ ಪ್ರಶ್ನೋತ್ತರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

ಪ್ರಚಲಿತ ವಿದ್ಯಮಾನಗಳು

1. ವೀರಾಂಗಣಾ ರಾಣಿ ದುರ್ಗಾವತಿ

ಇತ್ತೀಚೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ವೀರಾಂಗಣಾ ರಾಣಿ ದುರ್ಗಾವತಿ ಗೌರವ ಯಾತ್ರೆ'ಗೆ ಚಾಲನೆ ನೀಡಿದರು. ಮಧ್ಯಪ್ರದೇಶ ಸರ್ಕಾರ ವೀರಾಂಗಣಾ ರಾಣಿ ದುರ್ಗಾವತಿ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿ ಹಾಗೂ ಅವರ ಐತಿಹಾಸಿಕ ಸಾಧನೆಗಳನ್ನು ಮತ್ತೊಮ್ಮೆ ಮೆಲುಕು ಹಾಕಲು ಯಾತ್ರೆಯನ್ನು ಆಯೋಜಿಸಿದೆ.

ವೀರಾಂಗಣಾ ರಾಣಿ, ಚಂಡೇಲಾ ಸಾಮ್ರಾಜ್ಯದ ದೊರೆ ಕಿರತ್ ರಾಯ್ ಅವರ ಕುಟುಂಬದಲ್ಲಿ 1524ರಲ್ಲಿ ಜನಿಸಿದರು. 1942ರಲ್ಲಿ ಗರ್ಹ ಸಾಮ್ರಾಜ್ಯದ ರಾಜನಾಗಿದ್ದ ಸಂಗ್ರಾಮ್ ಷಾ ಪುತ್ರ ದಲ್ಪತ್ ಶಾ ಅವರನ್ನು ವಿವಾಹವಾದರು. 1945ರಲ್ಲಿ ವೀರನಾರಾಯಣ ಎಂಬ ಗಂಡು ಮಗುವಿಗೆ ಜನ್ಮ ನೀಡಿದರು. ಮಗು ಜನಿಸಿದ ಐದು ವರ್ಷಗಳಲ್ಲಿಯೇ ಪತಿ ದಲ್ಪತ್ ಶಾ ಮರಣ ಹೊಂದಿದರು. ಪತಿಯ ನಿಧನದ ನಂತರ, ತನ್ನ ಪುತ್ರನಿಗೆ ಸಾಮ್ರಾಜ್ಯ ನಿರ್ವಹಿಸಲು ಸಾಧ್ಯವಾಗದ ಕಾರಣ 1550ರಲ್ಲಿ ತಾನೇ ಆಡಳಿತದ ಚುಕ್ಕಾಣಿ ಹಿಡಿದರು. 1550–1564ರ ಅವಧಿಯಲ್ಲಿ (16 ನೇ ಶತಮಾನದಲ್ಲಿ) ಗಾಂಡ್ವನ (Gondwana) ಸಂಸ್ಥಾನದ ರಾಣಿಯಾಗಿ ಆಳ್ವಿಕೆ ನಡೆಸುತ್ತಿದ್ದರು.

ಸಿಂಹಾಸನವನ್ನು ಏರಿದ ನಂತರ ಇವರು ತಮ್ಮ ರಾಜಧಾನಿಯನ್ನು ಸಿಂಗರ್‌ಘರ್‌ದಿಂದ ಚೌರಘರ್ ಪ್ರದೇಶಕ್ಕೆ ಸ್ಥಳಾಂತರಿಸಿದರು. ಇದಾದ ನಂತರ ಇವರ ಸಂಸ್ಥಾನದ ಮೇಲೆ ಮೊಘಲರು ಹಲವಾರು ಬಾರಿ ದಾಳಿ ಮಾಡಿದರೂ ಅದನ್ನು ಸಮರ್ಥವಾಗಿ ಎದುರಿಸಿದರು.

ವಿಶೇಷ ಸೂಚನೆ : ವೀರಾಂಗಣಾ ರಾಣಿ ಆಳ್ವಿಕೆಯ ಸಂದರ್ಭದಲ್ಲಿ ಇಬ್ಬರು ಸಮರ್ಥ ಮಂತ್ರಿಗಳಾದ ಆಧಾರ್ ಕಾಯಸ್ಥ ಹಾಗೂ ಮಾನ್ ಠಾಕೂರ್ ರವರು ಕಾರ್ಯನಿರ್ವಹಿಸುತ್ತಿದ್ದರು.

2. ಕಳಸಾ ಬಂಡೂರಿ ಯೋಜನೆ

ಹಿಂದಿನ ಕರ್ನಾಟಕ ಸರ್ಕಾರ ಕಳಸಾ ಬಂಡೂರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿತ್ತು. ಆದರೆ ಯಾವುದೇ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮುನ್ನ ಅರಣ್ಯ ಇಲಾಖೆ ಮತ್ತು ಪರಿಸರ ಇಲಾಖೆಯ ಅನುಮೋದನೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಹಿಂದಿನ ಸರ್ಕಾರ ಯಾವುದೇ ಅನುಮೋದನೆ ಪಡೆಯದ ಕಾರಣದಿಂದ ಟೆಂಡರ್ ಪ್ರಕ್ರಿಯೆ ಸ್ಥಗಿತವಾಗುವ ಎಲ್ಲ ಗುಣಲಕ್ಷಣಗಳು ಕಂಡುಬರುತ್ತಿದೆ ಎಂದು ವಿಶ್ಲೇಷಕರು ವರದಿ ಮಾಡಿದ್ದಾರೆ.

ಮಹದಾಯಿ ಉಪ ನದಿಗಳಾದ ಕಳಸಾ ಮತ್ತು ಬಂಡೂರಿ ನದಿಗಳಿಗೆ ಅಡ್ಡಲಾಗಿ ಬ್ಯಾರೇಜ್‌ಗಳನ್ನು ನಿರ್ಮಿಸಲು ಕರ್ನಾಟಕ ಸರ್ಕಾರ ಕೈಗೊಂಡಿರುವ ಯೋಜನೆಯೇ 'ಕಳಸಾ–ಬಂಡೂರಿ ಯೋಜನೆ'.

ಎರಡು ಉಪನದಿಗಳಿಗೆ ಬ್ಯಾರೇಜ್ ನಿರ್ಮಿಸಿ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ ಮತ್ತು ಹುಬ್ಬಳ್ಳಿ ಜಿಲ್ಲೆಗಳಿಗೆ ಕುಡಿಯುವ ನೀರಿನ ಅಗತ್ಯವನ್ನು ಪೂರೈಸಲು ಈ ಯೋಜನೆ ರೂಪಿಸಲಾಗಿದೆ. ಇದನ್ನು ಮಹದಾಯಿ ನದಿಯ ನೀರಿನ ಪಥವನ್ನು ಬದಲಿಸುವ ಯೋಜನೆ ಎಂದು ಪರಿಗಣಿಸಬಹುದು.

ಕಳಸಾ ಬಂಡೂರಿ ಯೋಜನೆಯ ಮೂಲಕ ಕರ್ನಾಟಕ ಸರ್ಕಾರ ಮಾಂಡವಿ ನದಿ ನೀರನ್ನು ಕಳಸ ಮತ್ತು ಬಂಡೂರಿ ಕಾಲುವೆಗಳಿಂದ ರಾಜ್ಯದ ಮಲಪ್ರಭಾ ನದಿಯ ಕಡೆಗೆ ತಿರುಗಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯಡಿ ಒಟ್ಟು 11 ಅಣೆಕಟ್ಟುಗಳನ್ನು ನಿರ್ಮಾಣ ಮಾಡಲಾಗುತ್ತದೆ.

ವಿಶೇಷ ಸೂಚನೆ: ಮಹದಾಯಿ ನದಿ ನೀರಿನ ಹಂಚಿಕೆಗೆ ಸಂಬಂಧಪಟ್ಟಂತೆ 1980 ರಿಂದ ಗೋವಾ ಮತ್ತು ಕರ್ನಾಟಕ ರಾಜ್ಯಗಳ ನಡುವೆ ವಿವಾದ ಮುಂದುವರಿದಿದೆ.

ಮಹದಾಯಿ ಅಥವಾ ಮಾಂಡವಿ ನದಿ


ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿರುವ ಭೀಮಗಡ ವನ್ಯಜೀವಿ ಅಭಯಾರಣ್ಯದಲ್ಲಿ ಮಹದಾಯಿ ನದಿ ಉಗಮವಾಗುತ್ತದೆ. ನಂತರ ಅಲ್ಲಿಂದ ಪಶ್ಚಿಮಕ್ಕೆ ಹರಿಯುತ್ತದೆ. ಇದಾದ ನಂತರ ಮಹದಾಯಿ ನದಿಯು ಉತ್ತರ ಗೋವಾ ಜಿಲ್ಲೆಯ ಸತ್ತಾರಿ ತಾಲ್ಲೂಕಿನ ಬಳಿ ಗೋವಾ ರಾಜ್ಯವನ್ನು ಪ್ರವೇಶಿಸುತ್ತದೆ ಮತ್ತು ಗೋವಾದಲ್ಲಿ ಹರಿದ ನಂತರ ಪಣಜಿಯಲ್ಲಿ ಅರಬ್ಬಿ ಸಮುದ್ರವನ್ನು ಸೇರುತ್ತದೆ.



ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಕಣಕುಂಬಿ ಅರಣ್ಯದಲ್ಲಿ ಹರಿಯುವ ಮಹದಾಯಿ ನದಿ (ಸಂಗ್ರಹ ಚಿತ್ರ: ಪ್ರಜಾವಾಣಿ)

ಮಾಂಡವಿ ನದಿಯ ಜಲಾನಯನ ಪ್ರದೇಶವನ್ನು ಗೋವಾ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕಾಣಬಹುದು. ಮೂರು ರಾಜ್ಯಗಳಲ್ಲಿ ಹರಿಯುವುದರಿಂದ ಇದನ್ನು ಅಂತರರಾಜ್ಯ ನದಿ ಎಂದು ಪರಿಗಣಿಸಬಹುದು.

ಮಹದಾಯಿ ನದಿಯನ್ನು ಗೋವಾದ ಜೀವನಾಡಿ ಎಂದು ಕರೆಯಲಾಗುತ್ತದೆ. ಗೋವಾದಲ್ಲಿರುವ ಬಹುತೇಕ ನದಿಗಳಲ್ಲಿ ಉಪ್ಪಿನ ಪ್ರಮಾಣ ಹೆಚ್ಚಿರುವ ಕಾರಣದಿಂದ, ಅವುಗಳ ನೀರು ಬಳಕೆಗೆ ಹೆಚ್ಚು ಸೂಕ್ತವಾಗಿರುವುದಿಲ್ಲ. ಆದರೆ ಮಹದಾಯಿ ನದಿ ಸಿಹಿನೀರಿನ ನದಿಯಾಗಿರುವ ಕಾರಣ ಗೋವಾದ ಜನರಿಗೆ ಬೇಕಾದ ಕುಡಿಯುವ ನೀರಿನ ಭದ್ರತೆ ಹಾಗೂ ಮೀನುಗಾರಿಕೆಯೂ ಕೂಡ ಈ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.



ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿರುವ ಶಾಂತಿಪಾಲಕರ ಸ್ಮಾರಕಗಳಿಗೆ(Wall of Peace)' ಗೌರವ ಸಲ್ಲಿಸಿದ ಪ್ರಧಾನಿ ನರೇಂದ್ರ ಮೋದಿ – ಪಿಟಿಐ ಚಿತ್ರ

3. ವಿಶ್ವಸಂಸ್ಥೆಯ 'ವಾಲ್ ಆಫ್ ಪೀಸ್'

ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇತ್ತೀಚೆಗೆ ತಮ್ಮ ಅಮೆರಿಕದ ಪ್ರವಾಸದ ವೇಳೆ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಗೆ ಭೇಟಿ ನೀಡಿದ್ದರು. ಅವರು ಅಲ್ಲಿನ 'ವಿಶ್ವಸಂಸ್ಥೆ ಶಾಂತಿಪಾಲಕರ ಸ್ಮಾರಕಗಳಿಗೆ(Wall of Peace)' ಗೌರವ ಸಲ್ಲಿಸಿದರು.

ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ಕಾರ್ಯನಿರ್ವಹಿಸುವ ವೇಳೆ ಹುತಾತ್ಮರಾದ ವ್ಯಕ್ತಿಗಳಿಗೆ ಗೌರವ ಸೂಚಿಸುವುದಕ್ಕಾಗಿ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯ ಉತ್ತರ ಭಾಗದಲ್ಲಿ 'ಸ್ಮಾರಕ ಗೋಡೆ'ಯನ್ನು ನಿರ್ಮಿಸಲಾಗಿದೆ.

ಶಾಂತಿಪಾಲನಾ ಪ್ರಕ್ರಿಯೆ: ವಿಶ್ವಸಂಸ್ಥೆಯ ಶಾಂತಿಪಾಲನಾ ಪ್ರಕ್ರಿಯೆ ವಿಶ್ವ ಸಂಸ್ಥೆಯ ಸ್ಥಾಪನೆಯ ಹಂತದಿಂದಲೂ ಅವ್ಯಾಹತವಾಗಿ ಮುಂದುವರಿಯುತ್ತಿದೆ. ಯುದ್ಧಪೀಡಿತ ಪ್ರದೇಶಗಳಲ್ಲಿ, ಭಯೋತ್ಪಾದನೆ ಪೀಡಿತ ಪ್ರದೇಶಗಳಲ್ಲಿ ಹಾಗೂ ಶಾಂತಿ ಮತ್ತು ಸುವ್ಯವಸ್ಥೆ ಇಲ್ಲದ ಪ್ರದೇಶಗಳಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಶಾಂತಿಪಾಲನಾ ಪ್ರಕ್ರಿಯೆಯಲ್ಲಿ ವಿಶ್ವಸಂಸ್ಥೆಯ ಸ್ವಾಭಾವಿಕವಾಗಿ ತೊಡಗಿಕೊಳ್ಳುತ್ತದೆ.

ವಿಶ್ವಸಂಸ್ಥೆಯ ಶಾಂತಿಪಾಲನಾ ಪ್ರಕ್ರಿಯೆಯ ಮೂರು ಪ್ರಮುಖ ತತ್ವಗಳು : ನಿಷ್ಪಕ್ಷಪಾತ, ಪರಸ್ಪರ ಪಕ್ಷಗಳ ಸಮಾಲೋಚನೆ ಮತ್ತು ಒಪ್ಪಿಗೆಯ ಮೂಲಕ ಕಾರ್ಯನಿರ್ವಹಣೆ ಹಾಗೂ ಶಾಂತಿಪಾಲನಾ ಪ್ರಕ್ರಿಯೆಯಲ್ಲಿ ಆತ್ಮರಕ್ಷಣೆಗಾಗಿ ಮಾತ್ರ ಶಸ್ತ್ರಾಸ್ತ್ರಗಳನ್ನು ಬಳಸುವುದು.

ಪ್ಯಾಲೇಸ್ತೀನ್‌ನಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು 1948 ರಲ್ಲಿ ವಿಶ್ವಸಂಸ್ಥೆ ಶಾಂತಿಪಾಲನಾ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ಈ ದಿನದ ನೆನಪಿಗಾಗಿ ವಿಶ್ವಸಂಸ್ಥೆ ಪ್ರತಿವರ್ಷ ಮಾರ್ಚ್ 29 ರಂದು ಶಾಂತಿ ಪಾಲಕರ ದಿನಾಚರಣೆಯನ್ನು ಆಯೋಜಿಸಲಾಗುತ್ತದೆ.

ಗ್ಯಾರಂಟಿ: ಕೈ–ಕಮಲ ಏಟು ಎದಿರೇಟು

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳ ಬಗ್ಗೆ ನಿಲುವಳಿ ಸೂಚನೆಯಡಿ ಚರ್ಚೆಗೆ ಪಟ್ಟು ಹಿಡಿದು ಮಂಗಳವಾರ ವಿಧಾನಸಭೆಯಲ್ಲಿ ಧರಣಿ ನಡೆಸಿದ್ದ ಬಿಜೆಪಿ ಸದಸ್ಯರಿಗೆ ಈ ಕುರಿತು ಆರಂಭಿಕ ವಿಷಯ ಮಂಡಿಸಲು ಸಭಾಧ್ಯಕ್ಷ ಯು.ಟಿ.ಖಾದರ್ ಬುಧವಾರ ಅವಕಾಶ ನೀಡಿದರು. ಆದ್ದರಿಂದ ಬಿಜೆಪಿ ಸದಸ್ಯರು ಧರಣಿ ಕೈಬಿಟ್ಟರು. ಆರ್.ಅಶೋಕ ವಿಷಯ ಪ್ರಸ್ತಾಪಿಸಿದರು. ಈ ಸಂದರ್ಭದಲ್ಲಿ ಸದಸ್ಯರ ಸ್ವಾರಸ್ಯಕರ ಮಾತುಗಳು ಹೀಗಿದ್ದವು–

‘ಮೂರು ದಿನವಾದರೂ ವಿಪಕ್ಷ ನಾಯಕನಿಲ್ಲ’

- ಮೂರು ದಿನ ಆಯ್ತು ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲು ಆಗದೇ ಈಗ ಬುರುಡೆ ಹೊಡೆಯುತ್ತಿದ್ದೀರಿ. ಅವರಿಗೆ ಆರಂಭಿಕ ಮಾತುಗಳಿಗೂ ಅವಕಾಶ ಕೊಡಬಾರದಾಗಿತ್ತು. ಹೆಣ್ಣು ಮಕ್ಕಳಿಗೆ ಉಚಿತ ಕೊಡುವುದನ್ನು ವಿರೋಧ ಮಾಡುತ್ತೀರಾ?
- ಅಶೋಕ ಮಾತನಾಡುವಾಗ ಉಳಿದವರು ಏಕೆ ಎದ್ದು ನಿಂತು ಮಾತನಾಡುತ್ತೀರಿ? ಅವರಿಗೆ ಸಾಮರ್ಥ್ಯ ಇದೆ. ಎಲ್ಲ ಎದ್ದು ನಿಂತರೂ ನಾನು ಹೆದರೊಲ್ಲ. ಜನ ನಿಮ್ಮ ವಿರುದ್ಧ ತೀರ್ಪು ನೀಡಿದ್ದರೂ ನಿಮಗೆ ಬುದ್ಧಿ ಬಂದಿಲ್ಲ.
- ಸರ್ಕಾರಿ ಎಕ್ಸ್‌ಪ್ರೆಸ್ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತವಾಗಿ ಓಡಾಡಲು ಅವಕಾಶ ಕೊಟ್ಟಿದ್ದೇವೆ. 2018 ರ ನಿಮ್ಮ ಪ್ರಣಾಳಿಕೆ ನೀಡಿದ್ದ ಭರವಸೆಯಲ್ಲಿ ಎಷ್ಟು ಈಡೇರಿಸಿದ್ದೀರಿ?
- ನೀವು ಏನೇ ಹೇಳಿದರೂ ಎಷ್ಟೇ ಗದ್ದಲ ಮಾಡಿದರೂ ನಾವು ನೂರಕ್ಕೆ ನೂರು ಪ್ರತಿಶತ ಇದೇ ಆರ್ಥಿಕ ವರ್ಷದಲ್ಲಿ ಐದು ಗ್ಯಾರಂಟಿಗಳನ್ನು ಜಾರಿ ಮಾಡುತ್ತೇವೆ.

‘ಗ್ಯಾರಂಟಿ ಕಾರ್ಡಿನಲ್ಲಿ ಹೇಳಿದ್ದನ್ನು ಮಾಡಿ’

- ಉಚಿತ ಗ್ಯಾರಂಟಿಗಳಿಗೆ ಈಗೇಕೆ ಷರತ್ತುಗಳನ್ನು ಒಡ್ಡುತ್ತಿದ್ದೀರಿ. ಉಚಿತ ಕೊಡುವುದಕ್ಕೆ ವಿರೋಧ ಇಲ್ಲ. ಗ್ಯಾರಂಟಿ ಕಾರ್ಡ್‌ನಲ್ಲಿ ಏನು ಹೇಳಿದ್ದೀರೋ ಅದನ್ನು ಪಾಲನೆ ಮಾಡಿ.
- ಎಲ್ಲ ಮಹಿಳೆಯರು ಬಸ್ಸುಗಳಲ್ಲಿ ಉಚಿತ ಓಡಾಡುತ್ತಾರೆ ಎಂದು ಬೇಕೆಂದೇ ಬಸ್‌ಗಳ ಸಂಖ್ಯೆ ಕಡಿಮೆ ಮಾಡಲಾಗಿದೆ. ನಿಮ್ಮ ಮೂಲ ಭರವಸೆಯಂತೆ ರಾಜಹಂಸ, ಎಸಿ, ಐರಾವತ ಬಸ್ಸುಗಳಲ್ಲೂ ಉಚಿತಕ್ಕೆ ಅವಕಾಶ ನೀಡಿ.
- ರಾಹುಲ್‌ಗಾಂಧಿ ಅವರನ್ನು ಕರೆಯಿಸಿ ಯುವನಿಧಿಗೆ ಚಾಲನೆ ನೀಡಿ ಎಲ್ಲ ನಿರುದ್ಯೋಗಿಗಳಿಗೂ ಭತ್ಯೆ ನೀಡುವುದಾಗಿ ಹೇಳಿ ಈಗ 2022–23 ನೇ ಸಾಲಿನಲ್ಲಿ ಪದವಿ ಪೂರ್ಣಗೊಳಿಸಿ ಆರು ತಿಂಗಳು ಕೆಲಸ ಸಿಗದವರಿಗೆ ಮಾತ್ರ ನೀಡುತ್ತೇವೆ ಎನ್ನುತ್ತೀರಿ, ಇದು ಮೋಸ ಅಲ್ಲವೇ?
- ಬಸ್‌ಗಳಲ್ಲಿ ಕಿಟಕಿಗಳ ಮೂಲಕ ತೂರಿಕೊಂಡು ಹೋಗುವ ಸ್ಥಿತಿ ಸೃಷ್ಟಿ ಮಾಡಿದಿರಿ. ಆಟೊ ಚಾಲಕರು ಸಿ.ಎಂಗೆ ಶಾಪ ಹಾಕುತ್ತಿದ್ದಾರೆ.



ವಿಧಾನ ಪರಿಷತ್‌ನ ಬುಧವಾರದ ಕಲಾಪದಲ್ಲಿ ಬಿಜೆಪಿ ಸದಸ್ಯರು ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ

ಸುಮಾರು 60 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡುತ್ತಿದ್ದಾರೆ. ಆ ಮಹಿಳೆಯರ ಆಶೀರ್ವಾದ ಸಿದ್ದರಾಮಯ್ಯ ಮೇಲಿದೆ
ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಬಿಜೆಪಿಯವರದು ಪಶ್ಚಾತ್ತಾಪದ ಪ್ರತಿಭಟನೆ. ಅಗತ್ಯ ವಸ್ತುಗಳ ವಿರುದ್ಧ ಯಡಿಯೂರಪ್ಪ ಅವರು ದೆಹಲಿಗೆ ಹೋಗಿ ಮೋದಿ ವಿರುದ್ಧ ಪ್ರತಿಭಟನೆ ಮಾಡಲಿ
ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಪರಿಷತ್‌ನಲ್ಲಿ ಬಿಜೆಪಿ ಧರಣಿ ವಾಪಸ್

ಕಾಂಗ್ರೆಸ್ ಸರ್ಕಾರದ ‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನದ ಕುರಿತು ಬುಧವಾರವೂ ವಿಧಾನ ಪರಿಷತ್‌ನಲ್ಲಿ ಧರಣಿ ನಡೆಸಿದ ಬಿಜೆಪಿ ಸದಸ್ಯರು, ಸಭಾಪತಿ ಭರವಸೆ ಮೇರೆಗೆ ವಾಪಸ್ ಪಡೆದರು.

ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ‘ಗ್ಯಾರಂಟಿ’ಗಳ ಅನುಷ್ಠಾನದ ಮೇಲೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಸದಸ್ಯರು ಪಟ್ಟು ಹಿಡಿದು ಸಭಾಪತಿ ಪೀಠದ ಮುಂದೆ ಧರಣಿ ನಡೆಸಿ ಘೋಷಣೆಗಳನ್ನು ಹಾಕಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಿಕೊಳ್ಳಲು ಅಸಮರ್ಥರಾಗಿರುವ ಬಿಜೆಪಿ ಸದಸ್ಯರು, ವಿನಾಕಾರಣ ಧರಣಿ ನಡೆಸುತ್ತಿದ್ದಾರೆ. ಇದು ಶೋಭೆ ತರುವುದಿಲ್ಲ’ ಎಂದು ಕಿಡಿಕಾರಿದರು.

ಬಿಜೆಪಿ ಸದಸ್ಯರು ಧರಣಿ ಮುಂದುವರಿಸಿದ್ದರಿಂದ ಕಲಾಪವನ್ನು 10 ನಿಮಿಷ ಮುಂದೂಡಲಾಯಿತು. ಮತ್ತೆ ಕಲಾಪ ಸೇರಿದಾಗಲೂ ಧರಣಿ ಮುಂದುವರಿಯಿತು.

‘ಈ ವಿಷಯದ ಕುರಿತು ಗುರುವಾರ ಮತ್ತೊಮ್ಮೆ ನಿಲುವಳಿ ಸೂಚನೆ ಸಲ್ಲಿಸುತ್ತೇವೆ. ಚರ್ಚೆಗೆ ಅವಕಾಶ ನೀಡಬೇಕು’ ಎಂದು ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರ ಸಭಾಪತಿ ಅವರನ್ನು ಕೋರಿದರು. ಈ ಬಗ್ಗೆ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಹೇಳಿದ ಬಳಿಕ ಬಿಜೆಪಿ ಸದಸ್ಯರು ಧರಣಿ ವಾಪಸ್ ಪಡೆದರು.

‘ಗೋಹತ್ಯೆ ನಿಷೇಧ ಕಾಯ್ದೆ ರದ್ದು ಇಲ್ಲ’

ಬೆಂಗಳೂರು: ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಮತ್ತು ಸಂರಕ್ಷಣಾ ಅಧಿನಿಯಮ–2020 (ಗೋಹತ್ಯೆ ನಿಷೇಧ) ರದ್ದುಪಡಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಎನ್. ರವಿಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಗೋಹತ್ಯೆ ನಿಷೇಧ ಕಾಯ್ದೆಯ ಸಾಧಕ ಬಾಧಕಗಳ ಕುರಿತು ಚರ್ಚೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

ಸಚಿವರ ಉತ್ತರದಿಂದ ತೃಪ್ತರಾಗದ ರವಿಕುಮಾರ್, ‘ಮೈಸೂರಿನಲ್ಲಿ ಪಶುಸಂಗೋಪನಾ ಸಚಿವರೇ ಎಮ್ಮೆ, ಕೋಣಗಳನ್ನು ಕಡಿಯುವುದಾದರೆ ಗೋವುಗಳನ್ನು ಯಾಕೆ ಕಡಿಯಬಾರದು ಎಂದು ಹೇಳಿಕೆ ನೀಡಿದ್ದಾರೆ. ಆದರೆ, ಈಗ ಸದನದಲ್ಲಿ ವ್ಯತಿರಿಕ್ತ ಹೇಳಿಕೆ ನೀಡುತ್ತಿದ್ದಾರೆ’ ಎಂದರು.

‘ರಾಜ್ಯದಲ್ಲಿ ಸಾವಿರಾರು ಗೋವುಗಳ ಹತ್ಯೆ ನಡೆಯುತ್ತಿದೆ ಮತ್ತು ಅಕ್ರಮವಾಗಿ ಸಾಗಿಸಲಾಗುತ್ತಿದೆ. ಆದರೂ, ಸರ್ಕಾರ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಹಿಂದಿನ ಬಿಜೆಪಿ ಸರ್ಕಾರ ರೂಪಿಸಿದ್ದ ಕಾಯ್ದೆ ಕುರಿತು ದ್ವಂದ್ವ ಹೇಳಿಕೆಗಳನ್ನು ನೀಡುತ್ತಿರುವ ಸರ್ಕಾರ ತಕ್ಷಣವೇ ನಿಲುವು ಸ್ಪಷ್ಟಪಡಿಸಲೇಬೇಕು’ ಎಂದು ಒತ್ತಾಯಿಸಿ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು. ರವಿಕುಮಾರ್ ಅವರಿಗೆ ಬಿಜೆಪಿಯ ಇತರ ಸದಸ್ಯರು ಜತೆಗೂಡಿದರು.

ಬಿಜೆಪಿ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಹಾಕಿ ಗದ್ದಲ ಆರಂಭಿಸಿದ್ದರಿಂದ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಲಾಪವನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಿದರು.

ಮಧ್ಯಾಹ್ನದ ನಂತರವೂ ಧರಣಿ ಮುಂದುವರಿಸಿದಾಗ, ಈ ವಿಷಯದ ಬಗ್ಗೆ ಪ್ರತ್ಯೇಕ ಚರ್ಚೆಗೆ ಅವಕಾಶ ನೀಡುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. ಹೀಗಾಗಿ, ಬಿಜೆಪಿ ಸದಸ್ಯರು ಧರಣಿ ಅಂತ್ಯಗೊಳಿಸಿದರು.

ಎಪಿಎಂಸಿ: ಹೊಸ ಮಸೂದೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಪಿಎಂಸಿಗಳಲ್ಲಿ ಕೃಷಿ ಉತ್ಪನ್ನಗಳ ಖರೀದಿ ಮತ್ತು ಮಾರಾಟದ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದ್ದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ಕಾಯ್ದೆಯನ್ನು ಕೈಬಿಡುವ ಉದ್ದೇಶದ ಹೊಸ ಮಸೂದೆಯನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ಮಸೂದೆ ಮಂಡಿಸಿದರು. ಇದರಿಂದಾಗಿ ಈ ಹಿಂದೆ ಇದ್ದ ವ್ಯವಸ್ಥೆಯೇ ಮತ್ತೆ ಅನುಷ್ಠಾನಕ್ಕೆ ಬರಲಿದೆ. ಅದರ ಪ್ರಕಾರ, ಮಾರುಕಟ್ಟೆ ಪ್ರಾಂಗಣ, ಮಾರುಕಟ್ಟೆ ಉಪಪ್ರಾಂಗಣ, ಉಪ ಮಾರುಕಟ್ಟೆ ಪ್ರಾಂಗಣ, ಖಾಸಗಿ ಮಾರುಕಟ್ಟೆ ಪ್ರಾಂಗಣ ಅಥವಾ ಸಂದರ್ಭಾನುಸಾರ ರೈತ–ಗ್ರಾಹಕ ಮಾರುಕಟ್ಟೆ ಪ್ರಾಂಗಣವನ್ನು ಬಿಟ್ಟು, ಬೇರೆ ಕಡೆ ಅಂದರೆ ರೈತ ಹೊಲ, ಮನೆಗಳ ಆವರಣದಲ್ಲಿ ಕೃಷಿ ಉತ್ಪನ್ನಗಳ ಖರೀದಿ ಮತ್ತು ಮಾರಾಟ ಮಾಡುವಂತಿಲ್ಲ.

ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸ್ಥಳ ಉಪಯೋಗಿಸಲು ಪರವಾನಗಿ ಪಡೆಯಬೇಕು. ಅಲ್ಲದೆ, ವ್ಯಾಪಾರ, ದಲ್ಲಾಳಿ, ಸಂಸ್ಕರಣಗಾರ, ದಾಸ್ತಾನುಗಾರ ಪರವಾನಗಿ ಪಡೆಯುವುದು ಕಡ್ಡಾಯ. ಇದರ ಉಲ್ಲಂಘನೆಯಾದರೆ ಶಿಕ್ಷೆಗೆ ಒಳಪಡಬೇಕಾಗುತ್ತದೆ. ಅಪರಾಧ ಸಾಬೀತಾದರೆ ದಂಡ ಮತ್ತು ಆರು ತಿಂಗಳವರೆಗೆ ಕಾರಾಗೃಹವಾಸಕ್ಕೆ ಒಳಬೇಕಾಗುತ್ತದೆ.

ಕಾಮಗಾರಿ ಮೊತ್ತ ಮಿತಿ ಏರಿಕೆ: ಎಸ್‌ಸಿ ಮತ್ತು ಎಸ್‌ಟಿ ಗುತ್ತಿಗೆದಾರರು ನಿರ್ಮಾಣ ಕಾಮಗಾರಿಗಳ ಮೊತ್ತದ ಮಿತಿಯನ್ನು ₹50 ಲಕ್ಷದಿಂದ ₹1 ಕೋಟಿಗೆ ಹೆಚ್ಚಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ಮಸೂದೆ 2023 ಅನ್ನು ಮಂಡಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಮಸೂದೆ ಮಂಡಿಸಿದರು.

ಅನರ್ಹತಾ ನಿವಾರಣಾ ಮಸೂದೆ: ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರಿಗಾಗಿ ಕಚೇರಿಯನ್ನು ಸೃಜಿಸುವ ಉದ್ದೇಶದಿಂದ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) ಅಧಿನಿಯಮ 1956 ಅನ್ನು ತಿದ್ದುಪಡಿ ಮಾಡಲು ಮಸೂದೆಯನ್ನು ಸಚಿವ ಎಚ್.ಕೆ.ಪಾಟೀಲ ಮಂಡಿಸಿದರು.

ರಸ್ತೆ ಸುರಕ್ಷತಾ ಪ್ರಾಧಿಕಾರ: ಬೃಹತ್ ಬೆಂಗಳೂರು ಮಹಾನಗರಪಾಲಿಕೆಯನ್ನು ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರದ ಅಧಿನಿಯಮದ ವ್ಯಾಪ್ತಿಗೆ ತರಲು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆಯನ್ನು ಸಚಿವ ಪ್ರಿಯಾಂಕ್ ಖರ್ಗೆ ಮಂಡಿಸಿದರು.

ರುದ್ರಪ್ಪ ಲಮಾಣಿ ನಾಮಪತ್ರ

ಬೆಂಗಳೂರು: ವಿಧಾನಸಭೆ ಉಪಸಭಾಧ್ಯಕ್ಷ ಸ್ಥಾನಕ್ಕೆ ಗುರುವಾರ ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್‌ನ ರುದ್ರಪ್ಪ ಲಮಾಣಿ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ಬುಧವಾರ ನಾಮಪತ್ರ ಸಲ್ಲಿಸಿದರು.

ಸಂಕ್ಷಿಪ್ತ ಸುದ್ದಿ

ನ್ಯಾಯಾಂಗ ತನಿಖೆ: ಹೊರಬೀಳದ ಆದೇಶ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಗುತ್ತಿಗೆದಾರರಿಂದ ಶೇಕಡ 40ರಷ್ಟು ಕಮಿಷನ್ ಪಡೆಯುತ್ತಿದ್ದ ಆರೋಪದ ಕುರಿತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸುವ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದಾರೆ. ಆದರೆ, ತನಿಖೆಯ ಆದೇಶ ಇನ್ನೂ ಹೊರಬಿದ್ದಿಲ್ಲ.

ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಯಿಂದ ಇತ್ತೀಚೆಗಷ್ಟೇ ನಿವೃತ್ತರಾಗಿರುವ ಬಿ. ವೀರಪ್ಪ ಅವರಿಗೆ ತನಿಖೆಯ ನೇತೃತ್ವ ವಹಿಸುವ ಪ್ರಸ್ತಾವ ಸರ್ಕಾರದ ಮುಂದಿದೆ. ಗುತ್ತಿಗೆದಾರರ ಸಂಘ ಹಿಂದಿನ ಸರ್ಕಾರದ ಸಚಿವರು, ಶಾಸಕರು ಮತ್ತು ಅಧಿಕಾರಿಗಳ ವಿರುದ್ಧ ಶೇ 40ರಷ್ಟು ಲಂಚದ ಆರೋಪ ಮಾಡಿ ಪ್ರಧಾನಿ ನರೇಂದ್ರ ಮೋದಿ, ಹಿಂದಿನ ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರಿಗೆ ಬರೆದಿದ್ದ ಪತ್ರವನ್ನು ಆಧರಿಸಿ ತನಿಖೆ ನಡೆಸುವ ಪ್ರಸ್ತಾವವಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿನ ಶೇ 40ರಷ್ಟು ಲಂಚದ ಆರೋಪದ ಕುರಿತು ‘ಪ್ರಜಾವಾಣಿ’ ನಿರಂತರವಾಗಿ ವರದಿಗಳನ್ನು ಪ್ರಕಟಿಸಿತ್ತು. ಈ ಕುರಿತು ತನಿಖೆಗೆ ಆದೇಶಿಸುವುದಾಗಿ ಭರವಸೆ ನೀಡಿದ್ದ ಕಾಂಗ್ರೆಸ್, ಅಧಿಕಾರಕ್ಕೆ ಬಂದ ಬಳಿಕ ಯಾವುದೇ ಕ್ರಮ ಕೈಗೊಳ್ಳದ ಬಗ್ಗೆ ಜೂನ್ 28ರಂದು ವಿಶೇಷ ವರದಿ ಪ್ರಕಟಿಸಲಾಗಿತ್ತು.

‘ಪಿಎಸ್‌ಐ ನೇಮಕಾತಿ ಮರು ಪರೀಕ್ಷೆ ಅಸಾಧ್ಯ’

ಬೆಂಗಳೂರು: ‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷಾ ಅಕ್ರಮದ ದೋಷಾರೋಪ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ ಆಯ್ಕೆ ಪಟ್ಟಿಯಲ್ಲಿರುವ ಉಳಿದ ಅಭ್ಯರ್ಥಿಗಳಿಗಷ್ಟೇ ಮರು ಪರೀಕ್ಷೆ ನಡೆಸಲು ಸಾಧ್ಯವಿಲ್ಲ‘ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

‘ಕಳಂಕಿತ ಮತ್ತು ಕಳಂಕರಹಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸಿ, ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ನಿರ್ದೇಶಿಸಬೇಕು‘ ಎಂದು ಕೋರಿ ಆಯ್ಕೆಯಾಗಿದ್ದ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಜಿ. ನರೇಂದರ್ ಹಾಗೂ ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

‘ಎಲ್ಲ ಪಕ್ಷಗಾರರ ಪರ ವಕೀಲರು ಲಿಖಿತ ವಾದಾಂಶ ಸಲ್ಲಿಸಿ. ಅರ್ಜಿಗಳನ್ನು ಮೆರಿಟ್ ಆಧಾರದಲ್ಲಿ ಇದೇ 10ರಂದು ವಿಚಾರಣೆ ನಡೆಸಲಾಗುವುದು’ ಎಂದು ಸೂಚಿಸಿ ವಿಚಾರಣೆ ಮುಂದೂಡಿತು.

ಬಿಜೆಪಿ ವಿರುದ್ಧ ಯುವ ಕಾಂಗ್ರೆಸ್ ಆಕ್ರೋಶ



ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿಯ ಮುಂಭಾಗ ಯುವ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟಿಸಿದರು

ಬೆಂಗಳೂರು: ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ‘ಅನ್ನಭಾಗ್ಯ’ ಯೋಜನೆಗೆ ಅಕ್ಕಿ ಪೂರೈಸದೆ ತಾರತಮ್ಯ ಧೋರಣೆ ತಾಳಿದೆ ಎಂದು ಆರೋಪಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಮೈಸೂರು, ಬೆಳಗಾವಿ, ಶಿವಮೊಗ್ಗ ಚಾಮರಾಜನಗರ, ಚಿಕ್ಕಮಗಳೂರು, ಕಲಬುರಗಿ ಸೇರಿದಂತೆ ರಾಜ್ಯದ ವಿವಿಧೆಡೆ ಬಿಜೆಪಿ ಸಂಸದರ ಮನೆ ಮತ್ತು ಕಚೇರಿಗಳಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ‘ಚುನಾವಣೆಗೂ ಮೊದಲು ಕಾಂಗ್ರೆಸ್ ನೀಡಿದ್ದ ಪಂಚ ‘ಗ್ಯಾರಂಟಿ’ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದೆ ಜನರನ್ನು ವಂಚಿಸಲಾಗುತ್ತಿದೆ. ಷರತ್ತುಗಳನ್ನು ವಿಧಿಸಲಾಗುತ್ತಿದೆ’ ಎಂದು ಆರೋಪಿಸಿ ಬಿಜೆಪಿ ಮಂಗಳವಾರ ಪ್ರತಿಭಟನೆ ನಡೆಸಿತ್ತು. ಅದಕ್ಕೆ ತಿರುಗೇಟು ನೀಡಲು ಯುವ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟನೆ ಹಮ್ಮಿಕೊಂಡಿದ್ದರು.

ಪಾವತಿಯಾಗದ ಬಿಲ್: ಪ್ರತಿಭಟನೆ ಎಚ್ಚರಿಕೆ

ಬೆಂಗಳೂರು: ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ ಮೊತ್ತವನ್ನು ಜುಲೈ 15ರೊಳಗೆ ಪಾವತಿಸದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಎಚ್ಚರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು ಜುಲೈ 5ರಂದು ಪತ್ರ ಬರೆದಿದ್ದು, ‘ತಡೆ ಹಿಡಿಯಲಾಗಿದ್ದ ಬಿಲ್‌ಗಳ ಮೊತ್ತವನ್ನು ಬಿಡುಗಡೆ ಮಾಡಲು ತಾವು ಸುತ್ತೋಲೆ ಹೊರಡಿಸಿದ್ದರೂ ಅದು ಕಾರ್ಯರೂಪಕ್ಕೆ ಬಂದಿಲ್ಲ. ಸಂಬಂಧಪಟ್ಟ ಇಲಾಖೆ ಸಚಿವರು ಮತ್ತು ಅಧಿಕಾರಿಗಳಿಗೆ ಮತ್ತೊಮ್ಮೆ ಸೂಚನೆ ನೀಡಬೇಕು’ ಎಂದು ಮನವಿ ಮಾಡಿದ್ದಾರೆ.

‘ರಾಜ್ಯವನ್ನು ಬರಪೀಡಿತ ಎಂದು ಘೋಷಿಸಿ’

ಪ್ರಜಾವಾಣಿ ವಾರ್ತೆ



ದಾವಣಗೆರೆ: ಜುಲೈ ಮೊದಲ ವಾರ ಬಂದರೂ ಸಮರ್ಪಕ ಮಳೆ ಸುರಿಯದ್ದರಿಂದ ರಾಜ್ಯವನ್ನು ಬರಪೀಡಿತವೆಂದು ಘೋಷಿಸುವಂತೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಒತ್ತಾಯಿಸಿದರು.

ದಾವಣಗೆರೆ ಸಂಸದ ಜಿ.ಎಂ.ಸಿದ್ದೇಶ್ವರ ಅವರ 71ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮುನ್ನ ಬುಧವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸಮರ್ಪಕ ಮಳೆ ಸುರಿದಿಲ್ಲ. ಯಾವ ಭಾಗದಲ್ಲೂ ಶೇಕಡ 10ರಷ್ಟು ಬಿತ್ತನೆಯಾಗಿಲ್ಲ. ಜಲಾಶಯಗಳ ಒಡಲೂ ಬರಿದಾಗಿದೆ. ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದ್ದು, ಸರ್ಕಾರ ರಾಜ್ಯವನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಮೀನ–ಮೇಷ ಎಣಿಸುತ್ತಿದೆ' ಎಂದು ಅವರು ದೂರಿದರು.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿರುವುದಾಗಿ ಕಾಂಗ್ರೆಸ್ ಪಕ್ಷದವರು ಆರೋಪಿಸುತ್ತಿದ್ದಾರೆ. ನ್ಯಾಯಾಂಗ ತನಿಖೆಗೆ ಒಪ್ಪಿಸುವುದಾಗಿ ಹೇಳುತ್ತಿದ್ದಾರೆ. ಅವರ ನಿಲುವನ್ನು ಸ್ವಾಗತಿಸುತ್ತೇವೆ’ ಎಂದರು.

‘ಸರ್ಕಾರವು ಚುನಾವಣೆ ಪೂರ್ವದಲ್ಲಿ ನೀಡಿದ್ದ ಐದು ಗ್ಯಾರಂಟಿಗಳನ್ನು ಷರತ್ತುರಹಿತವಾಗಿ ಜಾರಿಗೊಳಿಸುವವರೆಗೂ ನಿರಂತರ ಹೋರಾಟ ನಡೆಸುತ್ತೇವೆ’ ಎಂದು ಅವರು ಪುನರುಚ್ಚರಿಸಿದರು.

‘ನೋಟಿಸ್‌ಗೆ ಉತ್ತರ ನೀಡಲ್ಲ’

ದಾವಣಗೆರೆ: ‘ಪಕ್ಷದಿಂದ ನೀಡಲಾಗಿರುವ ನೋಟಿಸ್‌ಗೆ ಉತ್ತರಿಸುವುದಿಲ್ಲ. ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷ ಯಾರೆಂಬುದೇ ಗೊತ್ತಿಲ್ಲ. ಒಂದೊಮ್ಮೆ ಪಕ್ಷದಿಂದ ಉಚ್ಚಾಟಿಸಿದರೆ ನನಗೇನೂ ನಷ್ಟವಿಲ್ಲ. ನನ್ನ ಬಾಯಿಗೆ ಬೀಗ ಹಾಕುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ’ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದರು.

‘ನಾನೇನು ಸಣ್ಣ ಮಗುವಲ್ಲ. ಪಕ್ಷದ ಕಾರ್ಯಕರ್ತನಾಗಿರುವ ನನಗೆ ಈ ನಾಡಿನ ಮತದಾರರ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಮುಕ್ತ ಸ್ವಾತಂತ್ರ್ಯ ಇದೆ. ನಾನು ಬಿಜೆಪಿ ವಿರುದ್ಧವಾಗಲೀ, ಪಕ್ಷ ಕಟ್ಟಿದವರ ವಿರುದ್ಧವಾಗಲೀ ಮಾತನಾಡಿಲ್ಲ’ ಎಂದು ಅವರು ಇಲ್ಲಿ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಹುದ್ದೆಗೆ ₹ 10 ಕೋಟಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಇಂಧನ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳ ವರ್ಗಾವಣೆಗೆ ಪ್ರತಿ ಹುದ್ದೆಗೆ ₹ 10 ಕೋಟಿ ನಿಗದಿಪಡಿಸಲಾಗಿದೆ. ಇತ್ತೀಚೆಗೆ ಇಬ್ಬರು ಅಧಿಕಾರಿಗಳ ವರ್ಗಾವಣೆಯಲ್ಲಿ ₹ 20 ಕೋಟಿ ಸಂಗ್ರಹಿಸಲಾಗಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಈ ಸರ್ಕಾರ ಸಂಪೂರ್ಣವಾಗಿ ಭ್ರಷ್ಟಾಚಾರ, ವರ್ಗಾವಣೆ ದಂಧೆಯಲ್ಲಿ ಮುಳುಗಿದೆ. ಕಾಸಿಗಾಗಿ ಹುದ್ದೆ ದಂಧೆ ಜೋರಾಗಿ ನಡೆಯುತ್ತಿದೆ. ಇಂಧನ ಇಲಾಖೆಯಲ್ಲಿ ವರ್ಗಾವಣೆ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಆ ಬಗ್ಗೆ ನನ್ನ ಬಳಿ ದಾಖಲೆಗಳಿವೆ’ ಎಂದು ಪೆನ್ ಡ್ರೈವ್ ಒಂದನ್ನು ಪ್ರದರ್ಶಿಸಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯ ಮುಖ್ಯ ಎಂಜಿನಿಯರ್ ಡಿ. ಪದ್ಮಾವತಿ ಅವರನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಿರುವುದು ಹಾಗೂ ದಕ್ಷಿಣ ವಲಯದ ಹೆಚ್ಚುವರಿ ಮುಖ್ಯ ವಿದ್ಯುತ್ ಪರಿವೀಕ್ಷಕ ತಿತೀರಾ ಎನ್. ಅಪ್ಪಚ್ಚು ಅವರಿಗೆ ಮುಖ್ಯ ವಿದ್ಯುತ್ ಪರಿವೀಕ್ಷಕರ ಹುದ್ದೆಗೆ ಬಡ್ತಿ ನೀಡಿ ಹೊರಡಿಸಿರುವ ಆದೇಶದ ಪ್ರತಿಗಳನ್ನು ಹಂಚಿಕೊಂಡರು.

‘ನಗದು ಅಭಿವೃದ್ಧಿ ಇಲಾಖೆ’: ‘ಈ ಸರ್ಕಾರದಲ್ಲಿ ‘ನಗದು ಅಭಿವೃದ್ಧಿ ಇಲಾಖೆ’ ಎಂಬ ಇಲಾಖೆಯೊಂದು ಇದೆ ಎಂದು ಯಾರೋ ಹೇಳಿದರು. ಆ ಇಲಾಖೆಯನ್ನು ಏಕೆ ಹಾಗೆ ಕರೆಯಬಹುದು ಎಂಬುದನ್ನೂ ವಿವರಿಸಿದರು. ಅದು ನಿಜವಾಗುವ ರೀತಿ ಯಲ್ಲೇ ನಗರ ಅಭಿವೃದ್ಧಿ ಮಾದರಿ ಸಿದ್ಧವಾಗಿಟ್ಟುಕೊಂಡಿದ್ದಾರೆ. ಬೆಂಗಳೂರಿಗೆ ಇಬ್ಬರು, ಬೆಂಗಳೂರಿನ ಹೊರಗೆ ಒಬ್ಬರು ‘ನಗದು ಅಭಿವೃದ್ಧಿ’ ಮಾಡಿಕೊಳ್ಳುತ್ತಿದ್ದಾರೆ’ ಎಂದು ಆರೋಪಿಸಿದರು.

‘ನಾನು ನೀಲಿಚಿತ್ರ ತೋರಿಸಿದವನಲ್ಲ’

‘ನಾನು ಕೆಲವರಂತೆ ಟೆಂಟಿನಲ್ಲಿ ನೀಲಿಚಿತ್ರ ತೋರಿಸಿ ದುಡ್ಡು ಮಾಡಿದವನಲ್ಲ. ರೌಡಿಗಳಿಗೆ ಮದ್ಯ ಸರಬರಾಜು ಮಾಡಿಕೊಂಡು ಬಂದಿದ್ದೀನಾ?’ ಎಂದು ಎಚ್.ಡಿ. ಕುಮಾರಸ್ವಾಮಿ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಅಧಿಕೃತ ಟ್ವಿಟರ್ ಖಾತೆಯಲ್ಲಿ ತಮ್ಮ ವಿರುದ್ಧ ಟೀಕಿಸಿದ್ದಕ್ಕೆ ಪ್ರತಿಕ್ರಿಯಿಸಿದ ಅವರು, ‘ನಾನು ಮುಖ್ಯಮಂತ್ರಿಯಾಗಿ ಬೀದಿಯಲ್ಲಿ ಇರಬೇಕಿತ್ತಾ? ಸ್ವಲ್ಪ ಹಣ ಖರ್ಚು ಮಾಡುವ ಯೋಗ್ಯತೆ ನನಗೂ ಇದೆ. ಈಗಲೂ ವೆಸ್ಟೆಂಡ್ ಹೋಟೆಲ್‌ನಲ್ಲಿ ಕೊಠಡಿ ಇದೆ. ಬಾಕಿ ಬಿಲ್ ಅನ್ನು ಕಾಂಗ್ರೆಸ್ ಕಚೇರಿಗೆ ಕಳಿಸಿದ್ದಾರಾ ಎಂಬ ಅನುಮಾನ ಇದೆ’ ಎಂದರು.

ಕಾಂಗ್ರೆಸ್ ಮಾಡಿದ್ದ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಜೆಡಿಎಸ್, ‘ಲುಲುಕುಮಾರ್’ ಎಂಬ ಹ್ಯಾಷ್ ಟ್ಯಾಗ್‌ನೊಂದಿಗೆ ಶಿವಕುಮಾರ್ ಅವರನ್ನು ಟೀಕಿಸಿದೆ.

‘ಮೌಲ್ಯ’ ಹೆಚ್ಚಿಸಿಕೊಂಡ ಟೊಮೆಟೊದ್ದೇ ಪಾರುಪತ್ಯ!

₹1,700 ತಲುಪಿದ 15 ಕೆ.ಜಿ ಬಾಕ್ಸ್ ದರ • 13 ರಾಜ್ಯಗಳಿಗೆ ಸರಬರಾಜು

ಹೊರರಾಜ್ಯದಿಂದಲೂ ಭಾರಿ ಬೇಡಿಕೆ

• ಕೆ.ಓಂಕಾರ ಮೂರ್ತಿ

ಕೋಲಾರ: ಹೊರ ರಾಜ್ಯಗಳಿಂದ ಬೇಡಿಕೆ ಹೆಚ್ಚಾದ ಹಿನ್ನೆಲೆಯಲ್ಲಿ ಕೋಲಾರ ಎಪಿಎಂಸಿಯಿಂದ ಒಂದೇ ದಿನ 13 ರಾಜ್ಯಗಳಿಗೆ 41 ಲಾರಿ ಟೊಮೆಟೊ ಸರಬರಾಜು ಆಗಿದೆ.

ಹೊರ ರಾಜ್ಯಗಳಿಂದ ಹೆಚ್ಚುತ್ತಿರುವ ಬೇಡಿಕೆ ಹಿನ್ನೆಲೆಯಲ್ಲಿ ದಿನೇ ದಿನೇ ಟೊಮೆಟೊ ಧಾರಣೆ ಏರುತ್ತಲೇ ಇದೆ. ಆದರೆ, ಇಳುವರಿ ಕೊರತೆ ಕಾರಣ ಬೇಡಿಕೆಗೆ ತಕ್ಕಂತೆ ಟೊಮೆಟೊ ಪೂರೈಕೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ತಿಂಗಳ ಅಂತ್ಯಕ್ಕೆ ಟೊಮೆಟೊ ಬೆಲೆ ಇನ್ನೂ ದುಬಾರಿ ಆಗುವ ಸಾಧ್ಯತೆ ಇದೆ.

ಬುಧವಾರ ನಡೆದ ಹರಾಜಿನಲ್ಲಿ 15 ಕೆ.ಜಿಯ ಟೊಮೆಟೊ ಬಾಕ್ಸ್ ₹1,700 ವರೆಗೆ ಮಾರಾಟವಾಗಿದೆ. ಎಪಿಎಂಸಿಗೆ 11,925 ಕ್ವಿಂಟಲ್ ಅಂದರೆ 79,500 ಬಾಕ್ಸ್ ಟೊಮೆಟೊ ಆವಕವಾಗಿತ್ತು. ಇದೇ ಋತುವಿನಲ್ಲಿ ಕಳೆದ ವರ್ಷ ಈ ಪ್ರಮಾಣ ಎರಡರಷ್ಟಿತ್ತು.

ಬೇರೆ ರಾಜ್ಯಗಳಲ್ಲಿ ದರ ಏರಿಕೆ ಬದಿಗಿರಲಿ ಟೊಮೆಟೊ ಸಿಗುವುದೇ ಕಷ್ಟವಾಗಿದೆ. ಪ್ರತಿದಿನ ಉತ್ತರ ಭಾರತ ಸೇರಿದಂತೆ ಹೊರ ರಾಜ್ಯಗಳ ನೂರಾರು ವರ್ತಕರು, ದಲ್ಲಾಳಿಗಳು ಹರಾಜಿನಲ್ಲಿ ಭಾಗವಹಿಸಲು ಏಷ್ಯಾದ ಎರಡನೇ ಅತಿ ದೊಡ್ಡ ಟೊಮೆಟೊ ಮಾರುಕಟ್ಟೆಯಾದ ಕೋಲಾರಕ್ಕೆ ಬರುತ್ತಿದ್ದಾರೆ.

ತಿಂಗಳ ಅಂತ್ಯಕ್ಕೆ ಇನ್ನೂ ದುಬಾರಿ

ಛತ್ತೀಸಗಢಕ್ಕೆ ಎಂಟು ಲಾರಿ, ತಮಿಳುನಾಡಿಗೆ ಏಳು ಲಾರಿ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಗುಜರಾತ್ ತಲಾ ನಾಲ್ಕು ಲಾರಿ, ಒಡಿಶಾ, ಆಂಧ್ರಪ್ರದೇಶ, ಉತ್ತರ ಪ್ರದೇಶ ಹಾಗೂ ರಾಜಸ್ಥಾನಕ್ಕೆ ಎರಡು ಲಾರಿ ಲೋಡ್ ಟೊಮೆಟೊ ಸರಬರಾಜು ಮಾಡಲಾಗಿದೆ.

‘ಬೇರೆ ರಾಜ್ಯಗಳಲ್ಲಿ ಟೊಮೆಟೊ ಸಂಗ್ರಹ ಇಲ್ಲ. ಹೀಗಾಗಿ, ಈ ಪರಿ ಬೇಡಿಕೆ ನಿರ್ಮಾಣವಾಗಿದೆ. ನಮ್ಮ ಮಾರುಕಟ್ಟೆಗೆ ಬಂದ ಎಲ್ಲಾ ಟೊಮೆಟೊವನ್ನು ಸರಬರಾಜು ಮಾಡಲಾಗುತ್ತಿದೆ. ಇದು ಟೊಮೆಟೊ ಋತುವಾಗಿದ್ದರೂ ಜಿಲ್ಲೆಯಲ್ಲಿ ಫಸಲು ಕಡಿಮೆ ಆಗಿದೆ. ಜೊತೆಗೆ ಗುಣಮಟ್ಟವೂ ತಗ್ಗಿದೆ’ ಎಂದು ಕೋಲಾರ ಎಪಿಎಂಸಿ ಕಾರ್ಯದರ್ಶಿ ವಿಜಯಲಕ್ಷ್ಮಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ತಿಂಗಳಾಂತ್ಯದಲ್ಲಿ ಇನ್ನೂ ದರ ಏರಿಕೆ ಆಗಲಿದೆ. ಜಿಲ್ಲೆಯ ಹಲವಾರು ರೈತರು ಟೊಮೆಟೊ ನಾಟಿ ಮಾಡಿದ್ದು, ಇನ್ನು 15ರಿಂದ 20 ದಿನಗಳಲ್ಲಿ ಫಸಲು ಬರಲಿದೆ. ಇನ್ನೂ ಕೆಲವರು ಏರುತ್ತಿರುವ ದರ ನೋಡಿ ಈಗ ಟೊಮೆಟೊ ಬೆಳೆಯಲು ಮುಂದಾಗುತ್ತಿದ್ದಾರೆ’ ಎಂದು ಅವರು ಮಾಹಿತಿ ನೀಡಿದರು.

ರಾಜ್ಯದಲ್ಲಿ ಅತಿ ಹೆಚ್ಚು ಟೊಮೆಟೊ ಬೆಳೆಯುವ ಜಿಲ್ಲೆಯಲ್ಲೇ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ ಟೊಮೆಟೊ ಬೆಲೆ ₹100 ದಾಟಿದೆ. ಬೆಂಗಳೂರಿನಲ್ಲಿ ₹125 ತಲುಪಿದೆ.



ಕೋಲಾರ ಎಪಿಎಂಸಿಯಲ್ಲಿ ಟೊಮೆಟೊ ದರ ಏರಿಕೆ (15 ಕೆ.ಜಿ ಬಾಕ್ಸ್)

ಜೂನ್ ಮೊದಲ ವಾರ	₹200
ಜೂನ್ 2ನೇ ವಾರ	₹450
ಜೂನ್ 3ನೇ ವಾರ	₹1,000
ಜೂನ್ 4ನೇ ವಾರ	₹1,400
ಜುಲೈ ಮೊದಲ ವಾರ	₹1,700

ಕಳೆದ 2–3 ವರ್ಷಗಳಿಗೆ ಹೋಲಿಸಿದರೆ ಶೇ 30ರಷ್ಟೂ ಟೊಮೆಟೊ ಮಾರುಕಟ್ಟೆಗೆ ಬರುತ್ತಿಲ್ಲ. ಜೊತೆಗೆ ರೋಗದ ಕಾಟ. ಬೇಡಿಕೆ ಹೆಚ್ಚಿದ್ದು, ಅದಕ್ಕೆ ತಕ್ಕಂತೆ ಸ್ಪಂದಿಸಲು ಆಗುತ್ತಿಲ್ಲ
ವಿಜಯಲಕ್ಷ್ಮಿ, ಕಾರ್ಯದರ್ಶಿ, ಎಪಿಎಂಸಿ, ಕೋಲಾರ

ಜಮೀನಿನಿಂದಲೇ ಟೊಮೆಟೊ ಕಳವು


ಪ್ರಜಾವಾಣಿ ವಾರ್ತೆ

ಹಳೇಬೀಡು (ಹಾಸನ): ಸಮೀಪದ ಗಣಿಸೋಮನಹಳ್ಳಿಯ ರೈತ ಸೋಮಶೇಖರ್ ಅವರ ಜಮೀನಿಗೆ ಮಂಗಳವಾರ ರಾತ್ರಿ ನುಗ್ಗಿದ ದುಷ್ಕರ್ಮಿಗಳು ಟೊಮೆಟೊ ಬೆಳೆಯನ್ನು ಕಟಾವು ಮಾಡಿಕೊಂಡು ಕದ್ದೊಯ್ದಿದ್ದಾರೆ.

ದರ ಹೆಚ್ಚಾಗಿರುವ ಸಂದರ್ಭದಲ್ಲೆ ಕಳವಾಗಿರುವುದರಿಂದ ಸೋಮಶೇಖರ್ ಚಿಂತೆಗೆ ಬಿದ್ದಿದ್ದಾರೆ.

ಪಾರ್ಶ್ವವಾಯುಪೀಡಿತರಾಗಿರುವ ಸೋಮಶೇಖರ್ ಅನಾರೋಗ್ಯದ ನಡುವೆಯೇ ಟೊಮೆಟೊ ಬೆಳೆದಿದ್ದಾರೆ. ಮೂರು ದಿನದಿಂದ ಕಟಾವು ಮಾಡಿ ಮಾರುತ್ತಿದ್ದರು. ಬುಧವಾರ ಬೆಳಿಗ್ಗೆ ಸೋಮಶೇಖರ್ ಅವರ ಪುತ್ರ ಧರಣಿ ಜಮೀನಿಗೆ ಬಂದಾಗ ಟೊಮೆಟೊ ಕಳವು ಪ್ರಕರಣ ಬೆಳಕಿಗೆ ಬಂದಿದೆ.

‘ಮೂರು ವರ್ಷಗಳಿಂದ ಯಾವ ಬೆಳೆಯೂ ಕೈಹಿಡಿದಿರಲಿಲ್ಲ. ಈ ಬಾರಿ ಎರಡು ಎಕರೆ ಜಮೀನಿನಲ್ಲಿ ಬೆಳೆದಿದ್ದ ಟೊಮೆಟೊ ಬೆಳೆಯ ಅರ್ಧದಷ್ಟು ಕಳ್ಳರ ಪಾಲಾಗಿದೆ. ಕಳ್ಳರು ಗಿಡಗಳನ್ನೂ ಮುರಿದಿದ್ದು, ಮುಂದೆ ಇಳುವರಿಯೂ ಸಿಗದಂತಾಗಿದೆ’ ಎಂದು ಸೋಮಶೇಖರ್ ಪತ್ನಿ ಪಾರ್ವತಮ್ಮ ‘ಪ್ರಜಾವಾಣಿ’ ಎದುರು ಅಳಲುತೋಡಿಕೊಂಡರು. ಸ್ಥಳಕ್ಕೆ ಭೇಟಿ ನೀಡಿರುವ ಹಳೇಬೀಡು ಪೊಲೀಸರು ತನಿಖೆ ಆರಂಭಿಸಿದ್ದಾರೆ.



‘ಕೋಲಾರ ಮಾದರಿ’ ಬಂಪರ್ ಫಸಲು

• ಪ್ರಮೋದ

ಕೊಪ್ಪಳ: ಹಲವು ದಿನಗಳಿಂದ ಟೊಮೆಟೊ ಬೆಲೆ ಏರಿಕೆಯಿಂದಾಗಿ ಗ್ರಾಹಕರು ಪರದಾಡುತ್ತಿದ್ದರೆ; ರೈತರಿಗೆ ಸಮೃದ್ಧ ಆದಾಯ ಸಿಗುತ್ತಿದೆ. ಒಂದು ಹೆಜ್ಜೆ ಮುಂದಿರುವ ಕೊಪ್ಪಳ ಜಿಲ್ಲೆಯ ಬೆಳೆಗಾರರು ‘ಕೋಲಾರ ಮಾದರಿ’ಯಲ್ಲಿ ಟೊಮೆಟೊ ಕೃಷಿ ಮಾಡಿ ಭರಪೂರ ಫಸಲು ಹಾಗೂ ಬಂಪರ್ ಆದಾಯ ಗಳಿಸಿದ್ದಾರೆ.

ಜಿಲ್ಲೆಯಲ್ಲಿ ಸದ್ಯ ಒಂದು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಟೊಮೆಟೊ ಬೆಳೆಯಲಾಗುತ್ತಿದೆ. ಮೊದಲಿನ ಸಾಮಾನ್ಯ ಕೃಷಿ ಪದ್ಧತಿಯಿಂದಾಗಿ ಪ್ರತಿ ಎಕರೆಗೆ 600ರಿಂದ 700 ಕ್ರೇಟ್‌ನಷ್ಟು ಫಸಲು ಬರುತ್ತಿತ್ತು. ಪ್ರತಿ ಕ್ರೇಟ್‌ನಲ್ಲಿ 25 ಕೆ.ಜಿ. ಟೊಮೆಟೊ ಇರುತ್ತಿತ್ತು. ನಾಲ್ಕು ತಿಂಗಳ ಹಿಂದೆ ಆರಂಭಿಸಿದ ತಂತ್ರಜ್ಞಾನ ಆಧಾರಿತ ಕೋಲಾರ ಮಾದರಿಯಿಂದಾಗಿ ಈಗ ಪ್ರತಿ ಎಕರೆಗೆ 1,800ರಿಂದ 1,900 ಕ್ರೇಟ್‌ನಷ್ಟು ಫಸಲು ಬರುತ್ತಿದೆ.

ಕೊಪ್ಪಳ ತಾಲ್ಲೂಕಿನ ಚಿಲವಾಡಗಿ ಗ್ರಾಮದ ರೈತ ಅಶೋಕ ಹಿಂದಿನಮನಿ ಒಂದು ಎಕರೆಯಲ್ಲಿ ಕೋಲಾರ ಮಾದರಿ ಟೊಮೆಟೊ ಕೃಷಿ ಮಾಡಿದ್ದಾರೆ. ಅವರ ಅದೃಷ್ಟಕ್ಕೆ ಈಗ ಟೊಮೆಟೊ ಬೆಲೆ ಪ್ರತಿ ಕೆ.ಜಿ.ಗೆ ₹100 ರಿಂದ ₹120 ಆಗಿದೆ. ಹೀಗಾಗಿ ಮೂರು ತಿಂಗಳಲ್ಲಿ ಅವರು ಒಂದು ಎಕರೆಗೆ ಖರ್ಚು ಮಾಡಿದ ₹1 ಲಕ್ಷಕ್ಕೆ ಪ್ರತಿಯಾಗಿ ಈಗ ಮೂರುಪಟ್ಟು ಹೆಚ್ಚು ಹಣ ಸಂಪಾದಿಸಿದ್ದಾರೆ. ಈಗಾಗಲೇ 1,500 ಕ್ರೇಟ್ ಟೊಮೆಟೊ ಮಾರಾಟ ಮಾಡಿದ್ದಾರೆ. ಅವರ ತೋಟದಲ್ಲಿ ಇನ್ನೂ 400 ಕ್ರೇಟ್‌ನಷ್ಟು ಫಸಲು ಇದ್ದು, ಲಾಭದ ಪ್ರಮಾಣ ಇನ್ನಷ್ಟು ಹೆಚ್ಚಾಗಲಿದೆ. ಜಿಲ್ಲೆಯಲ್ಲಿ 30ಕ್ಕೂ ಹೆಚ್ಚು ರೈತರು ಇಂಥ ಪ್ರಯೋಗ ಮಾಡಿದ್ದಾರೆ.

ಏನಿದು ಕೋಲಾರ ಮಾದರಿ?: ಬೆಳೆದ ಟೊಮೆಟೊ ನೆಲದ ಸಂಪರ್ಕಕ್ಕೆ ಬಂದರೆ ಬೇಗನೆ ಹಾಳಾಗುತ್ತದೆ. ಅದನ್ನು ತಪ್ಪಿಸಲು ಟೊಮೆಟೊ ಸಸಿಯನ್ನು ನೆಲದ ಮೇಲೆ ಬೆಳೆಯಲು ಬಿಡದೆ ಎತ್ತರದಲ್ಲಿ ಕಟ್ಟಿಗೆ ಕಟ್ಟಿ ದಾರದ ಮೂಲಕ ಸಸಿ ಜೋಡಿಸಲಾಗುತ್ತಿದೆ. ಮಣ್ಣಿನಲ್ಲಿ ತೇವಾಂಶ ಉಳಿಸಲು ಪ್ಲಾಸ್ಟಿಕ್ ಹೊದಿಕೆ ಹಾಗೂ ತುಂತುರು ನೀರಾವರಿ ವ್ಯವಸ್ಥೆ ಮಾಡಲಾಗಿದೆ. ಸತತವಾಗಿ ಫಸಲು ಬರುತ್ತಿದ್ದರೂ ಯಾವುದೇ ಕಾರಣಕ್ಕೂ ಟೊಮೆಟೊ ಹಾಳಾಗದಂತೆ ರಕ್ಷಣೆ ಮಾಡುವ ತಂತ್ರ ಇದಾಗಿದೆ. ಮೊದಲು ಟೊಮೆಟೊ ಗಿಡವನ್ನು ನೆಲದ ಮೇಲೆಯೇ ಬಿಡುತ್ತಿದ್ದರಿಂದ ಸಣ್ಣ ಮಳೆಯಾದರೂ ದೊಡ್ಡ ಪ್ರಮಾಣದಲ್ಲಿ ಹಾನಿಯಾಗುತ್ತಿತ್ತು. ಈಗ ಹೊಸ ಮಾದರಿಯಿಂದ ದೊಡ್ಡ ಮಳೆಯಾಗಿ ಮಡಿಯಲ್ಲಿ ನೀರು ನಿಂತರೂ ಫಸಲು ಹಾಳಾಗುವುದಿಲ್ಲ ಎನ್ನುತ್ತಾರೆ ಜಿಲ್ಲೆಯ ಟೊಮೆಟೊ ಬೆಳೆಗಾರರು.

ಟೊಮೆಟೊ ಹಣ್ಣುಗಳಿಗೆ ಹುಳ ತಗುಲದಂತೆ ಬಲೆಗಾಗಿ ಡಬ್ಬಿಗಳನ್ನು ಗಿಡಗಳ ಮೇಲ್ಭಾಗದಲ್ಲಿ ಕಟ್ಟಲಾಗುತ್ತಿದೆ. ಆ ಬಲೆಯಲ್ಲಿ ಹೆಣ್ಣು ಹುಳದ ವಾಸನೆ ಹೊಂದಿರುವ ‘ಲ್ಯೂರ್ ಬಿಸ್ಕಟ್’ಗಳನ್ನು ಹಾಕಲಾಗುತ್ತದೆ. ಡಬ್ಬಿಯಲ್ಲಿರುವ ಲ್ಯೂರ್ ಬಯಸಿ ಬರುವ ಹುಳು ಅಲ್ಲಿಯೇ ಸೆರೆಯಾಗಿ ಸಾಯುತ್ತದೆ. ಇದರಿಂದ ಫಸಲಿಗೆ ಹುಳುವಿನ ಕಾಟ ಇರುವುದಿಲ್ಲ. ಇದು ಪರಿಸರ ಸ್ನೇಹಿ ಕೀಟ ನಿಯಂತ್ರಣ ವಿಧಾನವೂ ಹೌದು. ತೋಟಗಾರಿಕಾ ಇಲಾಖೆಯು ಕಿಸಾನ್ ಕೇರ್ ಕೇಂದ್ರಗಳ ಮೂಲಕ ರೈತರಿಗೆ ಈ ಕುರಿತು ಜಾಗೃತಿ ಮೂಡಿಸುತ್ತಿದೆ.




ಅಶೋಕ ಹಿಂದಿನಮನಿ ಅವರು ಟೊಮೆಟೊ ಗಿಡಗಳಿಗೆ ದಾರ ಕಟ್ಟಿ ಬೆಳೆಸಿರುವುದು. ಚಿತ್ರ/ಭರತ್ ಕಂದಕೂರ

ಮೊದಲು ಮೆಕ್ಕೆಜೋಳ ಬೆಳೆದು ಸಾಲದ ಸುಳಿಗೆ ಸಿಲುಕಿಕೊಂಡಿದ್ದೆ. ಈಗ ಒಂದು ಎಕರೆಯಲ್ಲಿ ಕೋಲಾರ ಮಾದರಿಯಲ್ಲಿ ಟೊಮೆಟೊ ಬೆಳೆದು ಸಮೃದ್ಧ ಆದಾಯ, ಒಳ್ಳೆಯ ಫಸಲು ಪಡೆದುಕೊಂಡಿದ್ದೇನೆ
ಅಶೋಕ ಹಿಂದಿನಮನಿ, ಕೊಪ್ಪಳದ ರೈತ

ಕೋಲಾರದಂತೆ ಕೊಪ್ಪಳದಲ್ಲೂ ಟೊಮೆಟೊ ಬೆಳೆಯುತ್ತಿರುವುದರಿಂದ ಎರಡು ಅವಧಿಯಲ್ಲಿ ರೈತ ಪಡೆಯುತ್ತಿದ್ದ ಫಸಲು ಈಗ ಒಂದೇ ಅವಧಿಯಲ್ಲಿ ಬರುತ್ತಿದೆ. ಪರಿಕರ ಖರೀದಿಗೆ ಸರ್ಕಾರ ಸಬ್ಸಿಡಿ ನೀಡುತ್ತದೆ
ಕೃಷ್ಣ ಉಕ್ಕುಂದ
ತೋಟಗಾರಿಕಾ ಇಲಾಖೆ ಉಪನಿರ್ದೇಶಕ, ಕೊಪ್ಪಳ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ವಿದ್ಯಾರ್ಥಿ ಎನ್ನುವುದು ನೀವು ತುಂಬಿಸಲು ಇರುವ ಪಾತ್ರೆಯಲ್ಲ. ಬದಲಾಗಿ, ನೀವು ಬೆಳಗಿಸುವ ಸಲುವಾಗಿ ಇರುವ ದೀಪ.

–ಆಲ್ಬರ್ಟ್ ಐನ್‌ಸ್ಟೀನ್

ಭಾರತದ ಮುಡಿಗೆ ಸ್ಯಾಫ್ ಗರಿ ಫುಟ್‌ಬಾಲ್ ಆಟಕ್ಕೆ ನವಶಕ್ತಿ

ಕ್ರಿಕೆಟ್ ಆಟ ವಿಜೃಂಭಿಸುವ ಭಾರತದಲ್ಲಿ, ಬೇರೆ ಕ್ರೀಡೆಗಳಲ್ಲಿ ದಾಖಲಾಗುವ ಪ್ರತಿಯೊಂದು ಸಾಧನೆಯೂ ಅಮೂಲ್ಯ. ಈ ದಿಸೆಯಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಭಾರತ ಫುಟ್‌ಬಾಲ್ ತಂಡವು ಮಹತ್ವದ ಹೆಜ್ಜೆಗುರುತುಗಳನ್ನು ಮೂಡಿಸುತ್ತಿದೆ. ಇದೀಗ ದಕ್ಷಿಣ ಏಷ್ಯಾ ಫುಟ್‌ಬಾಲ್ ಫೆಡರೇಷನ್ (ಸ್ಯಾಫ್) ಚಾಂಪಿಯನ್‌ಷಿಪ್‌ನಲ್ಲಿ ಒಂಬತ್ತನೇ ಬಾರಿ ಪ್ರಶಸ್ತಿ ಗೆದ್ದಿರುವುದೂ ಮಹತ್ವದ ಸಾಧನೆಯಾಗಿದೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಕುವೈತ್ ವಿರುದ್ಧ ನಡೆದ ಫೈನಲ್‌ನಲ್ಲಿ ಚೆಟ್ರಿ ಬಳಗವು ಪೆನಾಲ್ಟಿ ಶೂಟೌಟ್‌ನಲ್ಲಿ ರೋಚಕ ಜಯ ಸಾಧಿಸಿತು. ಮಳೆ, ಚಳಿಯನ್ನೂ ಲೆಕ್ಕಿಸದೆ ಕ್ರೀಡಾಂಗಣದಲ್ಲಿ ಸೇರಿದ್ದ 20 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಸಂಭ್ರಮಿಸಿದರು. ಇದು ಬೆಂಗಳೂರಿನ ಫುಟ್‌ಬಾಲ್ ಪ್ರೀತಿಗೆ ಹಿಡಿದ ಕನ್ನಡಿಯಾಗಿತ್ತು. ಹಲವಾರು ಅಂತರರಾಷ್ಟ್ರೀಯ ಫುಟ್‌ಬಾಲ್ ಆಟಗಾರರನ್ನು ದೇಶಕ್ಕೆ ನೀಡಿದ ಹೆಗ್ಗಳಿಕೆ ಉದ್ಯಾನನಗರಿಯದ್ದು. ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ ನಾಯಕರಾಗಿರುವ ಚೆಟ್ರಿ ಈಗ ಸ್ಥಳೀಯ ಅಭಿಮಾನಿಗಳ ಕಣ್ಮಣಿಯಾಗಿದ್ದಾರೆ. ಕಳೆದ ಒಂದು ವರ್ಷದಲ್ಲಿ ಅವರ ನಾಯಕತ್ವದ ತಂಡವು ತ್ರಿರಾಷ್ಟ್ರ ಸರಣಿ,



ವೃತ್ತಿಪರತೆಗೆ ಒತ್ತು ನೀಡುತ್ತಿರುವುದು ಭಾರತದಲ್ಲಿ ಫುಟ್‌ಬಾಲ್ ಬೆಳವಣಿಗೆಗೆ ಶಕ್ತಿ ತುಂಬುತ್ತಿದೆ

ಇಂಟರ್ ಕಾಂಟಿನೆಂಟಲ್ ಕಪ್ ಹಾಗೂ ಸ್ಯಾಫ್ ಕಪ್ ಗೆದ್ದುಕೊಂಡಿರುವುದು ಸಣ್ಣ ಸಾಧನೆಯೇನಲ್ಲ. ಇದರೊಂದಿಗೆ ಫಿಫಾ ರ‍್ಯಾಂಕಿಂಗ್‌ನಲ್ಲಿ ನೂರನೇ ಸ್ಥಾನಕ್ಕೂ ಏರಿದೆ. 27 ವರ್ಷಗಳ ಹಿಂದೆ 94ನೇ ರ‍್ಯಾಂಕ್ ಗಳಿಸಿದ್ದು ಭಾರತದ ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ. ಆದರೆ ಫಿಫಾ ವಿಶ್ವಕಪ್ ಮತ್ತು ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಳಿಸಲು ತಂಡವು ಕ್ರಮಿಸಬೇಕಾದ ಹಾದಿ ಇನ್ನೂ ದೂರವಿದೆ. ಆದರೂ ಈಗ ಮೂಡಿಬರುತ್ತಿರುವ ಯಶಸ್ಸುಗಳು ತಂಡದ ಆತ್ಮವಿಶ್ವಾಸ ವೃದ್ಧಿಸುವ ಮೆಟ್ಟಿಲುಗಳಾಗಲಿವೆ.

ಈ ಸಲದ ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಎಂಟು ತಂಡಗಳು ಸ್ಪರ್ಧಿಸಿದ್ದವು. ಎ ಗುಂಪಿನಲ್ಲಿದ್ದ ಭಾರತಕ್ಕೆ ಪಾಕಿಸ್ತಾನವು ಮೊದಲ ಎದುರಾಳಿಯಾಗಿತ್ತು. ಉಭಯ ದೇಶಗಳ ನಡುವೆ ಇರುವ ರಾಜತಾಂತ್ರಿಕ ಬಿಕ್ಕಟ್ಟಿನಿಂದಾಗಿ ವೀಸಾ ಪಡೆಯುವಲ್ಲಿ ವಿಳಂಬವಾದರೂ ಪಾಕಿಸ್ತಾನ ತಂಡವು ಭಾರತಕ್ಕೆ ಆಗಮಿಸಿತು. ಉಭಯ ತಂಡಗಳ ನಡುವಣ ಪಂದ್ಯವು ಆಕರ್ಷಣೆಯ ಕೇಂದ್ರಬಿಂದುವೂ ಆಗಿತ್ತು. ಅದರಲ್ಲಿ ಆತಿಥೇಯ ಭಾರತ ಜಯಿಸಿತು. ಉಳಿದಂತೆ ನೇಪಾಳ ಮತ್ತು ಕುವೈತ್ ತಂಡಗಳು ನೀಡಿದ ಕಠಿಣ ಪೈಪೋಟಿಯನ್ನು ಮೀರಿ ನಿಲ್ಲುವಲ್ಲಿ ಚೆಟ್ರಿ ಬಳಗವು ಯಶಸ್ವಿಯಾಯಿತು. ನಾಕೌಟ್ ಹಂತದಲ್ಲಿ ಲೆಬನಾನ್ ಸವಾಲನ್ನೂ ಗೆದ್ದಿತು. ಈ ಎಲ್ಲ ಪಂದ್ಯಗಳಲ್ಲಿಯೂ ಚೆಟ್ರಿ ನಾಯಕತ್ವ ಮತ್ತು ಗೋಲು ಗಳಿಕೆಯ ಕೌಶಲಗಳು ಮೇಲುಗೈ ಸಾಧಿಸಿದವು. ಅವರೊಂದಿಗೆ ತಂಡದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರ ಶ್ರೇಷ್ಠ ಆಟವೂ ಪ್ರಮುಖ ಪಾತ್ರ ವಹಿಸಿತು. ಸಂದೇಶ್ ಜಿಂಗನ್, ಲಾಲಿಯಂಜುವಾಲಾ ಚಾಂಗ್ಟೆ, ನವೋರೆಮ್ ಮಹೇಶ್ ಸಿಂಗ್, ಉದಾಂತ ಸಿಂಗ್, ಸಹಲ್ ಅಬ್ದುಲ್ ಸಮದ್ ಮತ್ತು ಅನ್ವರ್ ಅಲಿ ಅವರ ಕಾಣಿಕೆಯೂ ಮಹತ್ವದ್ದಾಗಿದೆ. ಒಟ್ಟಾರೆ ತಂಡವಾಗಿ ಭಾರತವು ಮಿಂಚಿದೆ. ಆದರೆ ತಂಡದ ಮುಖ್ಯ ಕೋಚ್ ಇಗೋರ್ ಸ್ಟಿಮ್ಯಾಚ್ ಅವರು ಅತಿರೇಕದ ವರ್ತನೆಯಿಂದಾಗಿ ಎರಡು ಕೆಂಪು ಕಾರ್ಡ್ ಪಡೆದರು. ಫೈನಲ್ ಸೇರಿದಂತೆ ಮೂರು ಪಂದ್ಯಗಳಲ್ಲಿ ಅವರು ಹೊರಗುಳಿಯಬೇಕಾಯಿತು. ಸಹಾಯಕ ಕೋಚ್ ಮಹೇಶ್ ಗಾವ್ಳಿ ತಮ್ಮ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸಿದರು. ಈ ಟೂರ್ನಿಯಲ್ಲಿ ಒಟ್ಟು ಐದು ಗೋಲುಗಳನ್ನು ಗಳಿಸಿದ 38 ವರ್ಷದ ಚೆಟ್ರಿಯವರದ್ದು ಗಣನೀಯ ಸಾಧನೆ. ಅಂತರರಾಷ್ಟ್ರೀಯ ಮಟ್ಟದಲ್ಲಿ 142 ಪಂದ್ಯಗಳಿಂದ 92 ಗೋಲು ಗಳಿಸಿದ್ದಾರೆ. ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಮತ್ತು ಪೋರ್ಚುಗಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಅವರ ನಂತರದ ಸ್ಥಾನದಲ್ಲಿ ಚೆಟ್ರಿ ಇರುವುದು ದೇಶದ ಗೌರವ ಹೆಚ್ಚಿಸಿದೆ. ಪ್ರತಿವರ್ಷ ನಡೆಯುವ ಐಎಸ್‌ಎಲ್‌ನಂತಹ ಫ್ರ್ಯಾಂಚೈಸಿ ಲೀಗ್ ಟೂರ್ನಿಯು ದೇಶದ ಫುಟ್‌ಬಾಲ್ ಕ್ರೀಡೆಯಲ್ಲಿ ಉತ್ತಮ ಬದಲಾವಣೆಗೆ ಪೂರಕವಾಗಿದೆ. ವಿದೇಶಿ ಆಟಗಾರರೊಂದಿಗೆ ಬೆರೆಯುತ್ತಿರುವ ಇಲ್ಲಿಯ ಪ್ರತಿಭೆಗಳು ಹೊಸಕಾಲದ ಕೌಶಲಗಳಿಗೆ ತೆರೆದುಕೊಳ್ಳುತ್ತಿದ್ದಾರೆ. ಯುರೋಪ್ ದೇಶದ ತರಬೇತಿ ಅಕಾಡೆಮಿಗಳು ಕೂಡ ಈಗ ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ವೃತ್ತಿಪರತೆಗೆ ಒತ್ತು ನೀಡುತ್ತಿರುವುದು ಭಾರತದಲ್ಲಿ ಫುಟ್‌ಬಾಲ್ ಬೆಳವಣಿಗೆಗೆ ಶಕ್ತಿ ತುಂಬುತ್ತಿದೆ.

ದಿನದ ಟ್ವೀಟ್

ಹಣ ವ್ಯಯಿಸುವ ಮುನ್ನ...




ಸಾವಿರಾರು ಕಾರುಗಳನ್ನು ಮುಂದಿನ ಸಿಗ್ನಲ್ ದೀಪದತ್ತ ಕೊಂಡೊಯ್ಯುವುದನ್ನು ಬಿಟ್ಟರೆ ಸುರಂಗಗಳು ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಆದರೆ ಅದೇ ಹಣವನ್ನು ಬಸ್ಸುಗಳು, ಪಾದಚಾರಿ ಮೂಲಸೌಕರ್ಯ, ಮೆಟ್ರೊ, ಉಪನಗರ ರೈಲು, ರಸ್ತೆ ನಿರ್ವಹಣೆಯಂಥ ಕಾರ್ಯಗಳಿಗೆ ವಿನಿಯೋಗಿಸಿದರೆ ಲಕ್ಷಾಂತರ ಜನರಿಗೆ ಸಹಾಯವಾಗುತ್ತದೆ ಮತ್ತು ನಗರದಾದ್ಯಂತ ದಟ್ಟಣೆಯೂ ಸುಧಾರಿಸುತ್ತದೆ. ಸುರಂಗದಂತಹ ಯೋಜನೆಗಳಿಗೆ ಹಣ ವ್ಯಯಿಸದಿರಿ.

(ಬೆಂಗಳೂರಿನಲ್ಲಿ ವಾಹನ ದಟ್ಟಣೆ ತಗ್ಗಿಸಲು ಸುರಂಗ ರಸ್ತೆ ನಿರ್ಮಿಸುವ ಸರ್ಕಾರದ ಚಿಂತನೆಗೆ ಪ್ರತಿಕ್ರಿಯೆ)

ಆನಂದ ಗುಂಡೂರಾವ್, ಬಿ-ಪ್ಯಾಕ್ ಸದಸ್ಯ

ಕಿಡಿನುಡಿ



ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಪತನಗೊಳ್ಳುವ ಕಾಲ ಸಮೀಪಿಸಿದೆ. ಮಹಾರಾಷ್ಟ್ರದ ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರು ತಮ್ಮ ಬೆಂಬಲಿಗ ಶಾಸಕರೊಂದಿಗೆ ಬಿಜೆಪಿಗೆ ಬೆಂಬಲ ಸೂಚಿಸಿದ್ದಾರೆ. ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 6-7-1998

• ಕೋಮಾ ಸ್ಥಿತಿ ತಲುಪಿದ ದಳದ ಅನಾರೋಗ್ಯ: ಬಿಜೆಪಿ ಟೀಕೆ

ಬೆಂಗಳೂರು, ಜುಲೈ 5– ‘ದಳದ ಅನಾರೋಗ್ಯ ಉಲ್ಬಣಗೊಂಡು ಕೋಮಾ ಸ್ಥಿತಿ ತಲುಪಿದೆ’ ಎಂದು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಇಂದು ವ್ಯಂಗ್ಯವಾಡಿದರು.

‘ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಕಳೆದ ಒಂದು ತಿಂಗಳಿಂದ ಜನತಾ ದಳ ಮುಖಂಡರಲ್ಲಿ ನಡೆಯುತ್ತಿರುವ ಯಾದವೀ ಕಲಹ ಉಲ್ಬಣದ ಸ್ಥಿತಿ ತಲುಪಿದೆ. ಕುರ್ಚಿಯನ್ನು ಉಳಿಸಿಕೊಳ್ಳಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು ನಡೆಸುತ್ತಿರುವ ಕಚ್ಚಾಟದಿಂದ ಸರ್ಕಾರವು ಆಡಳಿತ ನಡೆಸುವಲ್ಲಿ ವಿಫಲವಾಗಿದೆ’ ಎಂಬುದು ಬಯಲಿಗೆ ಬಂದಿದೆ ಎಂದು ಅವರು ನುಡಿದರು.

ರಾಜ್ಯದಲ್ಲಿ ರಾಜಕೀಯ ಅಸ್ಥಿರತೆಯಿದೆ. ಜನತೆಯ ಸಂಕಷ್ಟದ ಅರಿವಿಲ್ಲದೆ ಮುಖ್ಯಮಂತ್ರಿ ಹಾಗೂ ಸಚಿವರು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ ಎಂದು ದೂಷಿಸಿದ ಅವರು, ಗ್ರಾನೈಟ್ ಹಾಗೂ ಅಬಕಾರಿ ಕುಳಗಳಿಗೆ ಜನತಾದಳ ತನ್ನನ್ನೇ ಮಾರಿಕೊಂಡಿದೆ ಎಂದು ಆರೋಪಿಸಿದರು.

• ಮಲೆನಾಡಿನಲ್ಲಿ ಧಾರಾಕಾರ ಮಳೆ ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆ

ಬೆಂಗಳೂರು, ಜುಲೈ 5– ರಾಜ್ಯದ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಇಂದೂ ಉತ್ತಮವಾಗಿ ಮಳೆಯಾಗಿದೆ. ಸತತವಾಗಿ ಬೀಳುತ್ತಿರುವ ಮಳೆಯಿಂದಾಗಿ ಪ್ರಮುಖ ನದಿಗಳು ತುಂಬಿ ಹರಿಯುತ್ತಿದ್ದು, ಜಲಾಶಯಗಳಲ್ಲಿ ನೀರಿನ ಮಟ್ಟ ಏರುತ್ತಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 6-7-1973

• ಬೆಲೆಗಳ ಯದ್ವಾತದ್ವಾ ಏರಿಕೆಗೆ ಖೋತಾ ಆಯವ್ಯಯ ಕಾರಣ

ನವದೆಹಲಿ, ಜುಲೈ 5– ಇತ್ತೀಚಿನ ವರ್ಷಗಳಲ್ಲಿನ ಭಾರಿ ಖೋತಾ ಆಯವ್ಯಯ ಹಾಗೂ ಸರ್ಕಾರದ ಹತೋಟಿ ವ್ಯವಸ್ಥೆಯ ವೈಫಲ್ಯವೇ ರಾಷ್ಟ್ರದಲ್ಲಿ ಈಗ ಬೆಲೆಗಳು ಯದ್ವಾತದ್ವಾ ಏರಿರುವುದಕ್ಕೆ ಕಾರಣ ಎಂದು ಐದು ಮಂದಿ ಪ್ರಮುಖ ಆರ್ಥಿಕ ತಜ್ಞರು ಆರೋಪಿಸಿದ್ದಾರೆ.

ಬಳಕೆದಾರರ ಸಾಮಗ್ರಿಗಳನ್ನು ಉತ್ಪಾದನೆಯ ಮೂಲದಲ್ಲೇ ಸರ್ಕಾರ ಸಂಗ್ರಹಿಸಬೇಕು. ಹೀಗೆ ಸಂಗ್ರಹಿಸಿದ್ದನ್ನು, ಬೆಲೆಗಳ ಏರಿಕೆಯನ್ನು ತಡೆಗಟ್ಟುವುದಕ್ಕಾಗಿ ನ್ಯಾಯಬೆಲೆ ಅಂಗಡಿಗಳ ಜಾಲದ ಮೂಲಕ ಮಾರಾಟ ಮಾಡಬೇಕು ಎಂದೂ ಅವರು ಸಲಹೆ ಮಾಡಿದ್ದಾರೆ.

ಬಿಗಿಯಾದ ಆರ್ಥಿಕ ನೀತಿ, ಅಗತ್ಯ ಜೀವನಾವಶ್ಯಕ ವಸ್ತುಗಳ ಉತ್ಪಾದನೆ ಏರಿಕೆ, ಕಟ್ಟುನಿಟ್ಟಾದ ವಿತರಣೆ ವ್ಯವಸ್ಥೆ ಮುಂತಾದ ದೀರ್ಘಾವಧಿ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಅವರು ಸೂಚಿಸಿದ್ದಾರೆ.

• ಬೆಂಗಳೂರು ವಿಮಾನ ನಿಲ್ದಾಣ ಅಭಿವೃದ್ಧಿಗೆ ಶೀಘ್ರ ಕ್ರಮ

ಪುಣೆ, ಜುಲೈ 5– ಪ್ರಯಾಣಿಕರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಬೆಂಗಳೂರು, ಪುಣೆ, ಆಗ್ರಾ ಮತ್ತು ಗೋವಾ ವಿಮಾನ ನಿಲ್ದಾಣಗಳನ್ನು ಶೀಘ್ರವಾಗಿ ಅಭಿವೃದ್ಧಿಪಡಿಸಲಾಗುವುದೆಂದು ಕೇಂದ್ರ ಪ್ರವಾಸೋದ್ಯಮ ಖಾತೆ ಸ್ಟೇಟ್ ಸಚಿವೆ ಡಾ. ಸರೋಜಿನಿ ಮಹಿಷಿ ಅವರು ನಿನ್ನೆ ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಈ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕಾರ್ಯಕ್ರಮ ಮುಖ್ಯವಾಗಿ ರನ್‌ವೇಗಳ ಉದ್ದವನ್ನು ಹೆಚ್ಚಿಸುವುದು, ಕಟ್ಟಡಗಳ ರಚನೆ ಮತ್ತು ಉತ್ತಮ ಕ್ಯಾಂಟೀನ್ ಸೌಲಭ್ಯಕ್ಕೆ ಸಂಬಂಧಿಸಿದುದೆಂದು ಅವರು ತಿಳಿಸಿದರು.

ಪ್ರಶ್ನಿಸುವ ಗುಣವೊಂದೇ ನಮ್ಮ ಮುಂದೆ ಹಲವಾರು ಸಾಧ್ಯತೆಗಳನ್ನು ತೆರೆದಿಡುತ್ತದೆ

ಪ್ರಶ್ನಿಸಲು ಕಲಿಸದ್ದು ಶಿಕ್ಷಣವೇ?



ವಿಶ್ಲೇಷಣೆ

ಡಾ. ಜ್ಯೋತಿ

ಶಿಕ್ಷಣ ಇರುವುದು ಏತಕ್ಕಾಗಿ? ಜೀವನ ನಿರ್ವಹಣೆಗೆ ಅಗತ್ಯವಾದ ಉದ್ಯೋಗ ಪಡೆಯಲು ಬೇಕಾದ ಪದವಿ ಪಡೆಯಲೆಂದೋ, ಅರ್ಥಪೂರ್ಣ ಬದುಕು ಕಟ್ಟಿಕೊಡುವ ಮೆಟ್ಟಿಲಾಗಿಯೋ? ನಾವು ಶಿಕ್ಷಣವನ್ನು ಒಂದು ವ್ಯವಸ್ಥೆ ಎನ್ನುತ್ತೇವೆ. ಯಾವುದೇ ವ್ಯವಸ್ಥೆ ತನ್ನದೇ ಆದ ವ್ಯಾಪ್ತಿಯನ್ನು ಗುರುತಿಸಿಕೊಂಡ ಹಾಗೆ ಇತಿಮಿತಿಯನ್ನೂ ಹೊಂದಿರುತ್ತದೆ. ಆದರೆ, ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಬಯಸುವವರು, ಅದರ ಲೋಪದೋಷಗಳು ಜನರಿಗೆ ಕಾಣಿಸದಂತೆ ಅದಕ್ಕೊಂದು ಉನ್ನತ ಸ್ಥಾನಮಾನ ಕೊಟ್ಟು ಜೋಪಾನವಾಗಿ ಮುಂದುವರಿಸಲು ಬಯಸುತ್ತಾರೆ.

ಇದಕ್ಕಿರುವ ಸುಲಭ ಮಾರ್ಗವೆಂದರೆ, ವ್ಯವಸ್ಥೆಯನ್ನು ಯಾರೂ ಪ್ರಶ್ನಿಸದಂತೆ ನೋಡಿಕೊಳ್ಳುವುದು. ಆದ್ದರಿಂದಲೇ, ವ್ಯವಸ್ಥೆಯ ನಿರೂಪಕರು, ತಾವು ನಿರ್ಮಿಸಿರುವ ಭದ್ರ ತಡೆಗೋಡೆಗಳನ್ನು ಮೀರಿಯೂ ಅದನ್ನು ಪ್ರಶ್ನಿಸಿದವರಿಗೆ ಸಮಾಜಘಾತುಕರು ಎನ್ನುವ ಹಣೆಪಟ್ಟಿ ಹಚ್ಚಿ, ಆಯಾ ಕಾಲದಲ್ಲಿ ಶಿಕ್ಷೆಗೆ ಗುರಿಪಡಿಸಿರುವುದನ್ನು ನೋಡಬಹುದು. ಇಷ್ಟಾಗಿಯೂ, ಸಮಾಜದಲ್ಲಿ ಬಹಳಷ್ಟು ಪಲ್ಲಟಗಳು ನಡೆದಿರುವುದನ್ನು ನಾವು ಗುರುತಿಸಬಹುದು ಮತ್ತು ಅವುಗಳನ್ನು ಸಾಧ್ಯವಾಗಿಸುವ ಶಕ್ತಿ ಯಾವುದು ಎನ್ನುವುದು ಕುತೂಹಲಕಾರಿ. ಅದ್ಯಾವುದೆಂದರೆ, ತಾವು ಎದುರಿಸುವ ಸಾಮಾಜಿಕ ವ್ಯವಸ್ಥೆಗಳ ಕಟ್ಟುಪಾಡುಗಳಿಗೆ ಸಡ್ಡು ಹೊಡೆದು ಪ್ರಶ್ನಿಸುವ ಎದೆಗಾರಿಕೆ ಹೊಂದಿದ ಅದಮ್ಯ ಚೇತನಗಳು.

ವಿಸ್ಮಯವೆಂದರೆ, ಮಗುವೊಂದು ನಿರಂತರವಾಗಿ ಪ್ರಶ್ನಿಸುವುದರ ಮೂಲಕವೇ ತನ್ನ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಅವುಗಳೆಲ್ಲಾ ನಾವು ಬದುಕಿನುದ್ದಕ್ಕೂ ಸ್ವವಿಮರ್ಶೆ ಮಾಡಿಕೊಳ್ಳಲು ಅಗತ್ಯವಾದ ಪ್ರಶ್ನೆಗಳು. ಆದರೆ, ಮಕ್ಕಳ ಪ್ರಶ್ನೆಗಳನ್ನು ‘ಬಾಲಿಶ’ ಎಂದು ಹೆಸರಿಸಿ, ನಾವು ಮಹಾನ್ ಮೇಧಾವಿಗಳಂತೆ, ವ್ಯವಸ್ಥೆಯನ್ನು ಮುಂದುವರಿಸಲು ಪೂರಕವಾಗುವಂತಹ ಉತ್ತರಗಳನ್ನು ಕೊಡುತ್ತೇವೆ. ಮಕ್ಕಳಲ್ಲಿ, ತಮಗೆ ಅನಿಸಿದ್ದನ್ನು ಫಿಲ್ಟರ್ ಮಾಡದೇ ಮುಗ್ಧವಾಗಿ ಪ್ರಶ್ನಿಸುವ ಪ್ರವೃತ್ತಿ ಅವರನ್ನು ಶಾಲೆಗೆ ದಾಖಲಿಸುವವರೆಗೆ ಕಾಣಿಸುತ್ತದೆ. ಅನಂತರ, ‘ವ್ಯವಸ್ಥೆಯ ಕಾರ್ಯಾಗಾರ’ವಾದ ಶಾಲೆಗಳಲ್ಲಿ ನಡೆಯುವುದು, ಅವರನ್ನು ನಮ್ಮ ಶ್ರೇಷ್ಠ ಪರಂಪರೆಗೆ ಅನುಗುಣವಾಗಿ ಹದಗೊಳಿಸುವುದು ಮಾತ್ರ. ಆರಂಭದಲ್ಲಿ ಮಕ್ಕಳು ಅದನ್ನು ಪ್ರತಿಭಟಿಸಿದರೂ ಕಾಲಕ್ರಮೇಣ, ವ್ಯವಸ್ಥೆಯಲ್ಲಿ ಸಿಗುವ ಕೆಲವು ಲಾಭ ಮತ್ತು ಗೌರವಕ್ಕಾಗಿ, ಅಲ್ಲಿರುವ ಯಶಸ್ಸಿನ ಮಾನದಂಡಗಳನ್ನು ತಲುಪುವ ನಿರಂತರ ಪ್ರಯತ್ನಗಳನ್ನು ಮಾಡುತ್ತಾ, ಅತೃಪ್ತಿಯಿಂದಲೇ ಬಾಳುತ್ತಾ, ಜೀವನ ಪಯಣದ ಅಂತ್ಯಗಾಣುತ್ತಾರೆ.

ಬಹುಪಾಲು ಮಂದಿ ‘ಗುಂಪಿನೊಳಗೆ ಗೋವಿಂದ’ ಎನ್ನುವ ಚೌಕಟ್ಟಿನೊಳಗೆ ಬದುಕಿದರೆ, ಕೆಲವರಷ್ಟೇ ಧೈರ್ಯವಾಗಿ ವಿಭಿನ್ನವಾದ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಈ ಅಲ್ಪಸಂಖ್ಯಾತರೇ ಇತಿಹಾಸದ ಮೈಲಿಗಲ್ಲುಗಳಿಗೆ ಕಾರಣೀಭೂತರಾಗಿ, ಕಾಲ ಮತ್ತು ಪ್ರಾದೇಶಿಕ ಗಡಿಗಳನ್ನು ಮೀರಿ ಪ್ರಸ್ತುತವೆನಿಸುತ್ತಾರೆ. ಸಾಂದರ್ಭಿಕವಾಗಿ, ರಷ್ಯಾದ ಸಾಹಿತಿ ಲಿಯೊ ಟಾಲ್‌ಸ್ಟಾಯ್ ಅವರು ಬರೆದ ಪ್ರಸಿದ್ಧ ಕಥೆ ‘ಇವಾನ್ ಇಲಿಚ್‌ನ ಸಾವು’ ನೆನಪಾಗುತ್ತದೆ. ಇಲ್ಲಿ, ಇವಾನ್ ಇಲಿಚ್, ಏರಿಳಿತಗಳಿಲ್ಲದ ಸರಳ ಬದುಕನ್ನು ನಡೆಸುತ್ತಾನೆ. ಅಂದರೆ, ಸಾಮಾಜಿಕ ನಿರೀಕ್ಷೆಗಳಿಗೆ ಅನುಗುಣವಾಗಿ ಎಲ್ಲರೂ ಮೆಚ್ಚಬಹುದಾದಂತಹ, ಕೆಲವರು ಅಸೂಯೆ ಪಡಬಹುದಾದಂತಹ ಜೀವನವನ್ನು ನಡೆಸುತ್ತಾನೆ. ಈ ನಡುವೆ ಆಕಸ್ಮಿಕವಾಗಿ ಕಾಯಿಲೆಯಿಂದ ಹಾಸಿಗೆ ಹಿಡಿದಾಗ, ಇಲ್ಲಿಯವರೆಗಿನ ಅವನ ಸರಳರೇಖೆಯ ಜೀವನಶೈಲಿಗೆ ಬ್ರೇಕ್ ಬಿದ್ದಂತಾಗಿ, ಮಲಗಿದ್ದಲ್ಲಿಯೇ ಆತ್ಮವಿಮರ್ಶೆ ಮಾಡಿಕೊಳ್ಳುತ್ತಾನೆ. ಈ ಸಿಂಹಾವಲೋಕನದಲ್ಲಿ ಬಹಳಷ್ಟು ಹತಾಶೆ, ಅಸಹನೆ, ಕೋಪ ಅನುಭವಿಸಿ, ಪ್ರತಿಕ್ರಿಯೆಯಾಗಿ ತನ್ನ ಸುತ್ತಲಿನ ಜನರ ಮೇಲೆ ಎಗರಾಡತೊಡಗುತ್ತಾನೆ.

ಇವಾನ್‌ನ ಸಾವಿನ ನಂತರ, ಬಂಧುಮಿತ್ರರು ಅವನ ಸಾವಿನಿಂದ ತಮಗಾದ ಲಾಭ, ನಷ್ಟಕ್ಕೆ ಅನುಗುಣವಾಗಿ ಪ್ರತಿಕ್ರಿಯಿಸುವ ಬಗೆ ಮತ್ತು ಅವನ ಮಾನಸಿಕ ತುಮುಲಗಳನ್ನು ಟಾಲ್‌ಸ್ಟಾಯ್ ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಇವಾನ್ ಬದುಕಿದ ಬಗೆಯನ್ನು ಟಾಲ್‌ಸ್ಟಾಯ್ ಒಂದೇ ಸಾಲಿನಲ್ಲಿ ಬಹಳ ನಿರ್ಲಿಪ್ತವಾಗಿ ಹೇಳುತ್ತಾನೆ- ‘ಇವಾನ್ ಇಲಿಚ್‌ನ ಬದುಕು ತೀರಾ ಸರಳವಾಗಿತ್ತು, ಸಾಮಾನ್ಯವಾಗಿತ್ತು, ಆದ್ದರಿಂದಲೇ ಭಯಂಕರವಾಗಿತ್ತು’. ಈ ಸಾಲು, ಸೂಕ್ಷ್ಮ ಮನಸ್ಸಿನಿಂದ ಕಥೆಯನ್ನು ಓದುವವರಿಗೆ ವೈಯಕ್ತಿಕ ಬದುಕನ್ನೊಮ್ಮೆ ಪುನರ್ವಿಮರ್ಶೆಗೆ ಒಡ್ಡಿಕೊಳ್ಳುವಂತೆ ಒತ್ತಾಯಿಸಿ ವಿಚಲಿತಗೊಳಿಸುತ್ತದೆ. ಬಹುಶಃ, ಟಾಲ್‌ಸ್ಟಾಯ್ ಪ್ರಸ್ತಾಪಿಸಿರುವ ಭಯಂಕರವಾದ ಸರಳ, ಸಾಮಾನ್ಯ ಬದುಕು, ಜೀವನ ಹೇಗಿರಬಾರದು ಎನ್ನುವುದಕ್ಕೆ ಕೊಡುವ ಸೂಚ್ಯ ಸಂದೇಶ ಎನ್ನಬಹುದು. ವಿಷಾದವೆಂದರೆ, ನಮಗೆ ಈ ಸತ್ಯದರ್ಶನ ಆಗುವುದು ಜೀವನದ ಅಂತಿಮ ಕ್ಷಣಗಳಲ್ಲಿ. ಆಗ, ಇಚ್ಛೆಯಿದ್ದರೂ ಸರಿಪಡಿಸಿಕೊಳ್ಳಲು ದೈಹಿಕ ಮತ್ತು ಮಾನಸಿಕ ಸ್ಥೈರ್ಯ ಉಳಿದಿರುವುದಿಲ್ಲ.

ಹಾಗಾದರೆ, ನಮ್ಮ ಬದುಕನ್ನು ಅಸಾಮಾನ್ಯಗೊಳಿಸುವುದು ಹೇಗೆ? ಜಗತ್ತು, ಎಳೆಯ ಮನಸ್ಸುಗಳಿಗೆ ಹೇಳುವ ಕಿವಿಮಾತೆಂದರೆ- ವ್ಯವಸ್ಥೆಗಳನ್ನು ಹಾಗೆಯೇ ಸ್ವೀಕರಿಸಿ, ಯಶಸ್ಸನ್ನು ಗಳಿಸಿಕೊಳ್ಳುವುದು. ನಮ್ಮ ಶಿಕ್ಷಣ ವ್ಯವಸ್ಥೆ ಮಾಡುವುದು ಇದನ್ನೇ. ಇಂತಹ ಬಾಹ್ಯ ನಿಯಂತ್ರಿತ



ಬದುಕಿನಲ್ಲಿ ಕೊನೆಗೆ ಉಳಿಯುವುದು ನಿಟ್ಟುಸಿರು, ಖಾಲಿತನ ಮತ್ತು ಅತೃಪ್ತಿ. ಉದಾಹರಣೆಗೆ, ವ್ಯವಸ್ಥೆಯನ್ನು ಪ್ರಶ್ನಿಸುವ ಹೆಣ್ಣುಮಗಳೊಬ್ಬಳು- ನಾನ್ಯಾಕೆ ಹೀಗೆ ಬದುಕಬೇಕು, ಇದನ್ನೆಲ್ಲಾ ನಿರ್ಧರಿಸಲು ನೀವ್ಯಾರು ಎನ್ನುವ ಪ್ರಶ್ನೆಗಳನ್ನು ಕೇಳಲಾರಂಭಿಸಿದರೆ ಉತ್ತರಿಸುವ ಎದೆಗಾರಿಕೆ ವ್ಯವಸ್ಥೆಯ ನಿರೂಪಕರಿಗಿದೆಯೇ? ಇಂತಹ ಪ್ರಶ್ನೆಗಳು ಮೂಡಬಾರದೆಂದೇ ವ್ಯವಸ್ಥೆಗಳು ದೇವರು, ಧರ್ಮದ ಹೆಸರಿನಲ್ಲಿ ನಿಯಂತ್ರಣ ಸಾಧಿಸುತ್ತವೆ. ಇದರಿಂದ ಬಿಡುಗಡೆಯಾಗುವ ಮಾರ್ಗವಿಲ್ಲವೇ?

ಪ್ರತಿರೋಧಗಳ ನಡುವೆಯೂ ಪ್ರಶ್ನಿಸುವ ಗುಣವೊಂದೇ ನಮಗೆ ಹಲವಾರು ಸಾಧ್ಯತೆಗಳನ್ನು ತೆರೆದಿಡುತ್ತದೆ. ಬುದ್ಧನಿಗೆ ತನ್ನ ಅರಮನೆಯ ವೈಭೋಗವನ್ನು ತ್ಯಜಿಸಿ, ಬದುಕಿನ ಅರ್ಥ ಸಂಶೋಧನೆ ಕೈಗೊಳ್ಳುವ ಸಲುವಾಗಿ ಹೊರನಡೆಯಲು ಪ್ರೇರೇಪಿಸಿದ್ದು ಅವನನ್ನು ಕಾಡಿದ ಪ್ರಶ್ನೆಗಳೇ. ನಾವು ಸಾಮಾನ್ಯವಾಗಿ ಗೌತಮನಂತೆ ವ್ಯವಸ್ಥೆಯೊಳಗೆ ಬದುಕುತ್ತೇವೆ. ಪ್ರಶ್ನಿಸುವವನು ಮಾತ್ರ ಬುದ್ಧನಾಗಿ ಹೊರಬಂದು ಪ್ರಸ್ತುತವೆನಿಸಿಕೊಳ್ಳುತ್ತಾನೆ. ಈ ವಿದ್ಯಮಾನವನ್ನು ಉದಾಹರಣೆಯೊಂದಿಗೆ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಆನೆಮರಿಯನ್ನು ಸಣ್ಣ ಹಗ್ಗದಿಂದ ಕಂಬಕ್ಕೆ ಕಟ್ಟಿಹಾಕಿ ನಿಯಂತ್ರಿಸಲು ಆರಂಭಿಸಿದರೆ, ಮುಂದೆ ದೈಹಿಕವಾಗಿ ಬೆಳೆದು ಕಂಬವನ್ನೇ ಎತ್ತಿ ಬಿಸಾಡುವ ಶಕ್ತಿ ಪಡೆದುಕೊಂಡರೂ, ಅದಕ್ಕೆ ತನ್ನ ಅಪರಿಮಿತ ಶಕ್ತಿಯು ಗೋಚರವಾಗದೆ, ಅದೇ ಸಣಕಲು ಹಗ್ಗಕ್ಕೆ ಜೋತುಬಿದ್ದು ಬದುಕಿನ ಅಂತ್ಯ ಕಾಣುತ್ತದೆ.

ಈ ರೀತಿ ವ್ಯವಸ್ಥೆಗೆ ಅನುಗುಣವಾಗಿ ಬಹುಜನರು ಪಾಲಿಸುವ ಒಪ್ಪಿತ ನಡವಳಿಕೆ, ಅಭಿಪ್ರಾಯ, ಸಂಸ್ಕೃತಿ, ಆಚರಣೆಗಳನ್ನು ಪ್ರಶ್ನಿಸದೇ ನಕಲು ಹೊಡೆದು ಅನುಸರಿಸುವ ಪ್ರಕ್ರಿಯೆಗೆ ಇಂಗ್ಲಿಷ್‌ನಲ್ಲಿ ‘ಬ್ಯಾಂಡ್ ವ್ಯಾಗನ್ ಇಫೆಕ್ಟ್’ ಎನ್ನುತ್ತಾರೆ. ಇದು ಟಾಲ್‌ಸ್ಟಾಯ್ ಹೇಳಿದಂತಹ ಸರಳ, ಸಾಮಾನ್ಯ ಮತ್ತು ಭಯಂಕರವಾದ ಬದುಕು. ಈ ರೀತಿ ಬದುಕುವುದು ತಪ್ಪೇನಲ್ಲ. ಆದರೆ, ಹೃದಯದ ಪಿಸುಮಾತಿಗೆ ಸ್ಪಂದಿಸುತ್ತಾ ಮನಸಾರೆ ಬದುಕಬೇಕೆನ್ನುವವರು, ವ್ಯವಸ್ಥೆಯ ಲೋಪದೋಷಗಳನ್ನು ನಿರಂತರವಾಗಿ ಪ್ರಶ್ನಿಸಿ, ಅದಕ್ಕಾಗಿ ಬೆಲೆ ತೆತ್ತರೂ ಲೆಕ್ಕಿಸದೆ ವಿಭಿನ್ನವಾಗಿ ಬದುಕುತ್ತಾರೆ. ಇಂತಹ ಬದುಕು ವ್ಯಾವಹಾರಿಕವಾಗಿ ಪ್ರಯೋಜನಕಾರಿಯಾಗದಿದ್ದರೂ, ಅರ್ಥಪೂರ್ಣವಾಗಿ ಬದುಕಿದ ನೆಮ್ಮದಿಯೊಂದಿಗೆ, ವಿಭಿನ್ನವಾಗಿ ಬದುಕಲು ಮುಂದಿನ ಪೀಳಿಗೆಯವರಿಗೆ ಪ್ರೇರಣೆಯಾಗುತ್ತಾರೆ.

ಇತಿಹಾಸದಲ್ಲಿ ನಮಗೆ ಎದುರಾಗುವವರು ಇವರೇ ವಿನಾ, ಸಾಮಾನ್ಯ ಜೀವನ ನಡೆಸಿದವರಲ್ಲ. ಬುದ್ಧ, ಬಸವಣ್ಣ, ಅಕ್ಕಮಹಾದೇವಿ, ಗಾಂಧಿ, ಅಂಬೇಡ್ಕರ್ ಅಂತಹವರು ಸಮಕಾಲೀನ ವ್ಯವಸ್ಥೆಗಳನ್ನು ಪ್ರಶ್ನಿಸಿದ್ದರಿಂದಲೇ ಕಾಲಾತೀತವಾಗಿ ವಿಸ್ಮಯ ಹುಟ್ಟಿಸುತ್ತಾರೆ. ನಾವು ಕೂಡ, ವರ್ತಮಾನದ ವ್ಯವಸ್ಥೆಯಲ್ಲಿರುವ ಜಾತಿ-ಧರ್ಮ-ಲಿಂಗ ಅಸಮಾನತೆ, ಪ್ರಕೃತಿ ನಾಶ, ಯಾಂತ್ರಿಕ ಜೀವನಶೈಲಿಯನ್ನು ಪ್ರಶ್ನಿಸಿ ಸ್ವವಿಮರ್ಶೆ ಮಾಡಿಕೊಂಡು, ಬದುಕನ್ನು ಅಸಾಮಾನ್ಯಗೊಳಿಸುವ ಇಚ್ಛಾಶಕ್ತಿ ಅಂತರ್ಗತಗೊಳಿಸಬೇಕೇ ಅಥವಾ ಸಾಮಾನ್ಯರಾಗಿಯೇ ಉಳಿದುಕೊಳ್ಳಬೇಕೇ? ಪ್ರಶ್ನೆಗಳಿಗೆ ಉತ್ತರ ಸಿಗಲೇಬೇಕೆಂದೇನಿಲ್ಲ. ಆದರೆ, ಪ್ರಶ್ನೆಗಳೇ ನಮಗೊಂದು ವಿಭಿನ್ನ ಅಸ್ಮಿತೆಯನ್ನು ಕಟ್ಟಿಕೊಡುವುದು. ಇದನ್ನೇ, ಶಿಕ್ಷಣ ನಮಗೆ ಕಲಿಸಬೇಕಾದುದು.

ಚುರುಮುರಿ



ಪ್ರಳಯ ಫಿಕ್ಸ್!

• ಗುರು ಪಿ.ಎಸ್.

‘ಮಳೆಯಾಗುತ್ತೆ, ಈ ಬಾರಿ ರಾಜ್ಯದಲ್ಲಿ ಭರ್ಜರಿ ಮಳೆಯಾಗುತ್ತೆ’ ಸ್ವಾಮೀಜಿಯೊಬ್ಬರ ಬಾಯಿಂದ ಆಣಿಮುತ್ತು ಹೊರಬಿತ್ತು.

ಸ್ವಾಮೀಜಿಗಳಿಂದ ‘ಅನಾಹುತಕಾರಿ’ ಭವಿಷ್ಯವನ್ನೇ ಕೇಳ್ತಿದ್ದ ಭಕ್ತರು, ‘ಒಳ್ಳೆಯ’ ಮಾತು ಕೇಳಿ ಹಿರಿಹಿರಿ ಹಿಗ್ಗಿದರು!

‘ಸ್ವಾಮಿಗಳೇ, ನಿಜವಾಗಿಯೂ ಉತ್ತಮ ಮಳೆ ಆಗುತ್ತಾ?’ ಎಂದು ಭಕ್ತರು ಕೇಳಿದರು.

‘ಹೌದು, ಮಳೆ ಆಗುತ್ತೆ. ಎಷ್ಟು ಅಂದ್ರೆ ಜಲಪ್ರಳಯ ಆಗೋವಷ್ಟು!’

‘ಥೋ, ಮತ್ತೆ ಸ್ಯಾಡ್ ಎಂಡಿಂಗಾ?’

‘ಜ್ಯೋತಿಷ್ಯ ಅಂದ್ರೇನೇ ಹಾಗೆ, ಒಳ್ಳೆಯದರಲ್ಲಿ ಕೆಟ್ಟದ್ದಿರುತ್ತೆ, ಕೆಟ್ಟದ್ದರಲ್ಲಿ ಒಳ್ಳೆಯದಿರುತ್ತೆ’.

‘ಅಂದ್ರೆ ಗುರುಗಳೇ?’

‘ಅಂದ್ರೆ ಗ್ಯಾರಂಟಿಗಳು ಯಶಸ್ವಿಯಾಗಿ ಜಾರಿ ಆದ್ರೆ ಬಿಜೆಪಿಯವರಿಗೆ ಕೆಟ್ಟದ್ದು, ಅಚ್ಛೇ ದಿನ್ ಘೋಷಣೆ ಸಾಕಾರವಾದರೆ ಕಾಂಗ್ರೆಸ್‌ಗೆ ಕೆಟ್ಟದ್ದು’.

‘ಕರ್ನಾಟಕದಲ್ಲಿ ನಿಮಗೆ ಕೆಟ್ಟದ್ದೇ ಕಾಣಿಸ್ತಿದೆ. ಮಹಾರಾಷ್ಟ್ರವನ್ನೊಮ್ಮೆ ನೋಡಿ ಗುರುಗಳೇ, ಬ್ಲ್ಯಾಕ್ ಶರ್ಟ್ ಹಾಕ್ಕೊಂಡವ್ರು, ಫಟಾಫಟ್ ವೈಟ್ ಶರ್ಟ್ ಚೇಂಜ್ ಮಾಡ್ಕೊಂಡಂತೆ, ಇವತ್ತು ಅಪೋಸಿಷನ್ ಪಾರ್ಟಿಯಲ್ಲಿದ್ದೋರು ಮರುದಿನವೇ ಡಿಸಿಎಂ ಆಗ್ಬಿಟ್ರು’ ಹೇಳಿದರು ಭಕ್ತರು.

‘ಕರ್ನಾಟಕದಲ್ಲೂ ಹಂಗೇ ಆಗೋದಿದೆ. ಮತ್ತೆ ಚೆನ್ನಾಗಿ ಪಟ್ಟಣ ಆಳೋಣ ಅಂತ ಒಬ್ರು ರೆಡಿ ಆಗಬಹುದು’ ಮತ್ತೊಂದು ಬಾಂಬ್ ಹಾಕಿದ್ರು ಸ್ವಾಮೀಜಿ.

‘ಇದೆಲ್ಲ ಹೇಗೆ ಕಂಡುಹಿಡಿತೀರಿ ಗುರುಗಳೇ?’

‘ಏನಿಲ್ಲ, ಪ್ರತಿ ಬೆಳವಣಿಗೆಯೂ ಒಂದೊಂದು ಸೂಚನೆ ಕೊಡ್ತಿರುತ್ತೆ’.

‘ಅಂದ್ರೆ?’

‘ಮೊನ್ನೆ ಅಧಿವೇಶನದಲ್ಲಿ ವಿರೋಧ ಪಕ್ಷದ ಸಾಲಿನಲ್ಲಿ ಮೊದಲೆರಡು ಸೀಟ್ ಖಾಲಿ ಬಿಟ್ಟಿದ್ರಲ್ವ. ಅದು ರಾಜ್ಯ ಮುಂದೆ ಕತ್ತಲಲ್ಲಿ ಮುಳುಗೋ ಮುನ್ಸೂಚನೆ!’

‘ಸುಮ್ನಿರಿ ಗುರುಗಳೇ. ಜಲಪ್ರಳಯ ಆಗುತ್ತೆ ಅಂದ್ರಿ, ಆದರೆ ಕೆಲವು ಕಡೆ ಇನ್ನೂ ಮಳೆನೇ ಆಗದೆ ಡ್ಯಾಮ್‌ಗಳೆಲ್ಲ ಖಾಲಿಯಾಗ್ತಿವೆ’.

‘ಅದು ಭೀಕರ ಬರದ ಮುನ್ಸೂಚನೆ’.

‘ಅಂದ್ರೆ, ಒಟ್ನಲ್ಲಿ...’

‘ಪ್ರಳಯ ಫಿಕ್ಸ್!’

ಸಂಗತ

ಸೋಂಕಿನ ಸರಪಣಿ ತುಂಡರಿಸಬಹುದೇ?

ಮಾನವ, ಪ್ರಾಣಿ ಮತ್ತು ಪರಿಸರಕ್ಕೆ ಸಂಬಂಧಿಸಿದ ಸ್ವಾಸ್ಥ್ಯಗಳಿಗೆ ಪರಿಹಾರ ಹುಡುಕುವ ‘ಒನ್ ಹೆಲ್ತ್’ ಪರಿಕಲ್ಪನೆಯ ಮೊರೆ ಹೋಗುವುದು ಇಂದಿನ ಅನಿವಾರ್ಯ

• ಡಾ. ಮುರಳೀಧರ ಕಿರಣಕೆರೆ

ಇದು ಅಸಹ್ಯಕರವಷ್ಟೇ ಅಲ್ಲ ಗಂಭೀರ ಪ್ರಕರಣವೂ ಹೌದು. ಆ ರೈತ ದಂಪತಿಯ ಎರಡೂವರೆ ವರ್ಷದ ಮಗು ಮನೆಯಲ್ಲಿ ಶೌಚಾಲಯವಿದ್ದರೂ ಮಲ ವಿಸರ್ಜನೆ ಮಾಡುವುದು ಮಾತ್ರ ಹಿತ್ತಲಿನಲ್ಲಿ. ಆ ಕೆಲಸ ಮುಗಿದ ಕೂಡಲೇ ಅವರ ಸಾಕುನಾಯಿ ತಕ್ಷಣ ಎಲ್ಲವನ್ನೂ ತಿಂದು ಸ್ವಚ್ಛ ಮಾಡುತ್ತಿತ್ತು! ಆ ಸಮಯದಲ್ಲಿ ಮಗುವಿನ ಪೃಷ್ಠ ಭಾಗವನ್ನು ಅಕ್ಕರೆಯಿಂದ ನೆಕ್ಕುತ್ತಿದ್ದುದೂ ಉಂಟು. ಇಷ್ಟೇ ಆಗಿದ್ದರೆ ಈ ಪ್ರಕರಣವನ್ನು ಇಲ್ಲಿ ಪ್ರಸ್ತಾಪಿಸುವ ಅಗತ್ಯ ಇರುತ್ತಿರಲಿಲ್ಲ. ನಮ್ಮ ಹಲವು ಹಳ್ಳಿಗಳು ಮತ್ತು ಕೊಳೆಗೇರಿಗಳಲ್ಲಿ ಇಂತಹ ದೃಶ್ಯ ತೀರಾ ಸಾಮಾನ್ಯ ಎಂಬುದು ಕಟು ವಾಸ್ತವ!

ಆ ನಾಯಿ ಇದ್ದಕ್ಕಿದ್ದಂತೆಯೇ ಉದ್ರೇಕಗೊಂಡು ಇತರ ನಾಯಿ, ಜಾನುವಾರುಗಳನ್ನು ಕಚ್ಚುವುದು, ಮನುಷ್ಯರನ್ನು ಅಟ್ಟಿಸಿಕೊಂಡು ಹೋಗುತ್ತಿರುವ ದೂರು ಬಂದದ್ದರಿಂದ ಹಳ್ಳಿಗೆ ಧಾವಿಸಬೇಕಾಯಿತು. ಅಷ್ಟೊತ್ತಿಗಾಗಲೇ ಹಳ್ಳಿಗರು ಅದನ್ನು ಕೊಂದಿದ್ದರು. ನಾಯಿಗೆ ರೇಬಿಸ್ ತಗುಲಿದ್ದರಿಂದ ಜೊಲ್ಲಿನ ಸಂಪರ್ಕಕ್ಕೆ ಬಂದವರು ಸುರಕ್ಷತೆಗಾಗಿ ರೇಬಿಸ್ ಲಸಿಕೆ ತೆಗೆದುಕೊಳ್ಳಲೇಬೇಕು. ಅದೃಷ್ಟವಶಾತ್ ಮನುಷ್ಯರ್‍ಯಾರೂ ಕಚ್ಚಿಸಿಕೊಂಡಿರಲಿಲ್ಲ. ಕಡಿತಕ್ಕೊಳಗಾಗಿದ್ದ ಜಾನುವಾರುಗಳಿಗೆ ಲಸಿಕೆ ಹಾಕಲಾಯಿತು.

‘ಸರ್, ನಮ್ಮ ಪಾಪುಗೆ ಇಂಜಕ್ಷನ್ ಕೊಡಿಸಬೇಕಾ?’ ಹೊರಡುವಾಗ ಆ ತಾಯಿ ಕೇಳಿದ್ದಳು. ತುಸು ಕೆದಕಿದಾಗಲೇ ಆಕೆ ಬಾಯಿಬಿಟ್ಟಿದ್ದು ಮಲವಿಸರ್ಜನೆಯ ಈ ಅಭ್ಯಾಸದ ಬಗ್ಗೆ. ಕೇಳಿದಾಗ ನಿಜಕ್ಕೂ ಗಾಬರಿಯಾಗಿತ್ತು. ಮಗುವಿನ ಪೃಷ್ಠ ಭಾಗವನ್ನು ಗಮನಿಸಿದಾಗ ಆತಂಕ ಮತ್ತಷ್ಟು ಏರಿತ್ತು! ಅಲ್ಲಲ್ಲಾ ಸಣ್ಣ ಸಣ್ಣ ಕಜ್ಜಿಗಳು. ಆ ನಾಯಿ ಹುಚ್ಚು ಕೆದರಿ ಓಡಿಹೋಗುವ ಹಿಂದಿನ ದಿನವೂ ಅಲ್ಲಲ್ಲಾ ನೆಕ್ಕಿತ್ತು. ಜೊಲ್ಲಿನಲ್ಲಿರುವ ರೇಬಿಸ್ ವೈರಾಣುಗಳು ಗಾಯದ ಮೂಲಕ ಮಗುವಿನ ದೇಹ ಸೇರಿರುವ ಸಾಧ್ಯತೆ ತುಂಬಾ ಹೆಚ್ಚು. ತಕ್ಷಣ ಲಸಿಕೆ ಕೊಡಿಸುವಂತೆ ಸಲಹೆ ನೀಡಿದಾಗ ಪೋಷಕರ ಮೊಗದಲ್ಲಿ ಭೀತಿ ಎದ್ದು ತೋರುತ್ತಿತ್ತು.

ಹೌದು, ಕೇಂದ್ರ ನರವ್ಯೂಹವನ್ನು ಬಾಧಿಸುವ, ರೋಗಲಕ್ಷಣಗಳು ಕಾಣಿಸಿಕೊಂಡ ನಂತರ ಯಾವುದೇ ಮದ್ದಿಲ್ಲದೆ ಮರಣ ನಿಶ್ಚಿತವಾಗಿರುವ ರೇಬಿಸ್ (ಹುಚ್ಚುನಾಯಿ ರೋಗ) ಪ್ರಾಣಿಜನ್ಯ ರೋಗಗಳಲ್ಲೇ ಅತಿ ಮಾರಕವಾದದ್ದು. ಪಶು, ಪಕ್ಷಿ, ಕೀಟಗಳಿಂದ ಮಾನವನಿಗೆ ಸೋಂಕು ಹರಡುವಂತೆ ಮನುಜನೂ ಹಲವು ಕಾಯಿಲೆಗಳನ್ನು ಪಶುಗಳಿಗೆ ದಾಟಿಸಬಲ್ಲ. ಮಾನವನ ಸೋಂಕು ರೋಗಗಳಲ್ಲಿ ಶೇ 60ಕ್ಕೂ ಅಧಿಕ ಕಾಯಿಲೆಗಳಿಗೆ ಪ್ರಾಣಿಗಳೇ ಮೂಲ. ರೋಗಾಣುಗಳು ಸೋಂಕಿತ ಜೀವಿಯ ನೇರ ಸಂಪರ್ಕ, ಉಸಿರು, ಕಲುಷಿತ ನೀರು, ಆಹಾರದ ಮೂಲಕ ಇಲ್ಲವೆ ಉಣ್ಣೆ, ಹೇನು, ಚಿಗಟ, ಸೊಳ್ಳೆ, ಬಾವಲಿಯಂತಹ ವಾಹಕಗಳ ಮುಖಾಂತರವೂ ಹರಡಬಹುದು.

ರೇಬಿಸ್ ಅಲ್ಲದೆ ಹಕ್ಕಿಜ್ವರ, ಬಾವಲಿಜ್ವರ, ಝಿಕಾ, ಎಬೋಲ, ಕೋವಿಡ್-19, ಆಂತ್ರಾಕ್ಸ್, ಪ್ಲೇಗ್, ಹುಚ್ಚುಹಸು ರೋಗ, ಇಲಿಜ್ವರ, ಕ್ಷಯ, ಕಂದುರೋಗ (ಬ್ರುಸೆಲ್ಲೋಸಿಸ್), ಮಂಗನಕಾಯಿಲೆ, ಹಂದಿಜ್ವರ, ಮಂಗನಜ್ವರ, ಫಂಗಸ್ ಸಮಸ್ಯೆ, ಲಾಡಿಹುಳು, ಕೊಕ್ಕೆಹುಳುವಿನ ಬಾಧೆಗಳು ಪ್ರಮುಖವಾದವು.

ಜುಲೈ 6, ವೈದ್ಯಕೀಯ ಕ್ಷೇತ್ರದಲ್ಲಿ ಚಾರಿತ್ರಿಕ ದಿನ. ವಿಶ್ವದ ಮೊದಲ ಲಸಿಕಾ ಪ್ರಯೋಗದ ಮೂಲಕ ಜೀವಸಂಕುಲದ ಸಂರಕ್ಷಣೆಗೆ ಮುನ್ನುಡಿ ಬರೆದ ದಿನ. ಭಯಾನಕ ರೇಬಿಸ್ ಕಾಯಿಲೆಗೆ ಮದ್ದು ಹುಡುಕುವ ದಿಸೆಯಲ್ಲಿ ಫ್ರೆಂಚ್ ಸೂಕ್ಷ್ಮಾಣುಶಾಸ್ತ್ರಜ್ಞ ಲೂಯಿಸ್ ಪ್ಯಾಶ್ಚರ್ 1881ರಲ್ಲಿ ಪ್ರಯತ್ನ ಶುರು ಮಾಡಿದ್ದರು. ಸೋಂಕಿತ ನಾಯಿಯ ಜೊಲ್ಲು ರಸವನ್ನು ಮೊಲಗಳ ದೇಹಕ್ಕೆ ಸೇರಿಸಿದಾಗ ಅವು ಹುಚ್ಚು ರೋಗದಿಂದ ಬಳಲುವುದನ್ನು ಕಂಡುಕೊಂಡ ಪ್ಯಾಶ್ಚರ್, ಆ ಮೊಲಗಳ ಮೆದುಳು ಹುರಿಯನ್ನು ಒಣಗಿಸಿ, ಅರೆದು ನಾಯಿಗಳಿಗೆ ನೀಡಿದಾಗ ರೇಬಿಸ್ ಬಾರದ್ದನ್ನು ಕಂಡುಕೊಂಡರು. 1885ರ ಜುಲೈ 6ರಂದು ತಾವು ಸಂಶೋಧಿಸಿದ ಈ ಚುಚ್ಚುಮದ್ದನ್ನು ಹುಚ್ಚು ನಾಯಿಯೊಂದರಿಂದ ತೀವ್ರ ಕಡಿತಕ್ಕೊಳಗಾಗಿದ್ದ 9 ವರ್ಷದ ಬಾಲಕನೊಬ್ಬನ ಮೇಲೆ ಪ್ರಯೋಗಿಸಿದರು. ಹುಡುಗ ರೋಗದಿಂದ ಪಾರಾಗಿದ್ದು ವಿಶ್ವವನ್ನೇ ಬೆರಗಾಗಿಸಿತ್ತು. ಮಾರಣಾಂತಿಕ ಪ್ರಾಣಿಜನ್ಯ ರೋಗವೊಂದಕ್ಕೆ ಚೊಚ್ಚಲ ಲಸಿಕೆ ನೀಡಿದ ಈ ದಿನವನ್ನು ಪ್ರತಿವರ್ಷ ‘ವಿಶ್ವ ಪ್ರಾಣಿಜನ್ಯ ರೋಗ ದಿವಸ’ ಎಂದು ಆಚರಿಸಲಾಗುತ್ತಿದೆ.



ನಮ್ಮ ಬಹುತೇಕ ಜಾನುವಾರು ಮಾಲೀಕರು, ಪಶು-ಪಕ್ಷಿಗಳ ಸಾಂಗತ್ಯದಲ್ಲಿ ಇರುವವರು, ಮುದ್ದು ಪ್ರಾಣಿಗಳ ಒಡೆಯರಿಗೆ ಪ್ರಾಣಿಗಳಿಂದ ಬರಬಹುದಾದ ಕಾಯಿಲೆಗಳ ಕುರಿತಾದ ಅರಿವು ಕನಿಷ್ಠ ಮಟ್ಟದಲ್ಲಿರುವುದು ದುರದೃಷ್ಟಕರ. ಕೆಲವರಂತೂ ತಮ್ಮ ಸಾಕುಪ್ರಾಣಿಗಳು ಅನಾರೋಗ್ಯಕ್ಕೆ ತುತ್ತಾದಾಗ ತಮಗೂ ಕಾಯಿಲೆ ಅಂಟಬಹುದೆಂಬ ಭಯದಲ್ಲಿ ಶುಶ್ರೂಷೆ ಮಾಡಲು ಹಿಂದೇಟು ಹಾಕುವುದೂ ಉಂಟು. ಕೊರೊನಾ ಸೋಂಕಿನ ಸಮಯದಲ್ಲಿ ರೋಗಾಣುಗಳು ನಾಯಿಗಳಿಂದಲೂ ಹರಡಬಹುದು ಎಂಬ ಸುಳ್ಳು ಸುದ್ದಿಯಿಂದಾಗಿ, ತಾವು ಸಾಕಿದ ಮುದ್ದುಪ್ರಾಣಿಗಳನ್ನು ಬೀದಿಗಟ್ಟಿದವರ ಸಂಖ್ಯೆಯೂ ದೊಡ್ಡದಿತ್ತು!

ಮಾನವ, ಪ್ರಾಣಿ ಮತ್ತು ಪರಿಸರದ ಆರೋಗ್ಯ ಒಂದಕ್ಕೊಂದು ಪೂರಕ. ಒಂದರ ಅನಾರೋಗ್ಯ ಮತ್ತೊಂದನ್ನು ತೀವ್ರವಾಗಿ ಬಾಧಿಸಬಲ್ಲದು. ಈ ಮೂರೂ ಸ್ವಾಸ್ಥ್ಯಗಳನ್ನು ಒಂದಾಗಿ ಪರಿಗಣಿಸಿ ಪರಿಹಾರ ಹುಡುಕುವ ‘ಒನ್ ಹೆಲ್ತ್’ (ಒಂದು ಆರೋಗ್ಯ) ಪರಿಕಲ್ಪನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವುದು ಇಂದಿನ ಅನಿವಾರ್ಯ. ವೈದ್ಯಕೀಯ, ಪಶುವೈದ್ಯಕೀಯ ಮತ್ತು ಪರಿಸರ ತಜ್ಞರು, ವಿಜ್ಞಾನಿಗಳು, ಕ್ಷೇತ್ರ ಮಟ್ಟದ ಕಾರ್ಯಕರ್ತರು ಒಗ್ಗೂಡಿ, ಸಮನ್ವಯದಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ ಪ್ರಾಣಿಜನ್ಯ ರೋಗಗಳ ನಿಯಂತ್ರಣದ ಜೊತೆಗೆ ಸೋಂಕಿನ ಸರಪಣಿಯನ್ನೂ ತುಂಡರಿಸಲು ಸಾಧ್ಯ. ಇಂತಹ ಇಚ್ಛಾಶಕ್ತಿ ನಮಗಿದೆಯೇ?

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ ಸರ್ಕಾರಿ ಪಶುಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ತರಬೇತಿ ಪಡೆದರೂ ಬದಲಾಗಲಿಲ್ಲವೇ?

ವಿಧಾನಸಭಾ ಅಧಿವೇಶನದ ಕಲಾಪದ ನೇರ ಪ್ರಸಾರ ದೃಶ್ಯ ಮಾಧ್ಯಮದಲ್ಲಿ ಆಗುತ್ತಿದೆ. ಇದನ್ನೆಲ್ಲಾ ಮಕ್ಕಳನ್ನೂ ಒಳಗೊಂಡು ಮನೆ ಮಂದಿಯೆಲ್ಲಾ ನೋಡುತ್ತಾರೆ. ತಾವು ಮನಸೋಇಚ್ಛೆ ಕೂಗಾಟ, ಪರಸ್ಪರ ಬೈಗುಳದಲ್ಲಿ ತೊಡಗಿಕೊಂಡು ಮಾಡುತ್ತಿರುವ ಆಟಗಳನ್ನು ಜನ ನೋಡುತ್ತಾರೆ ಎಂಬ ನಾಚಿಕೆಯೂ ಇಲ್ಲದಂತೆ ಶಾಸಕರು ನಡೆದುಕೊಳ್ಳುತ್ತಿರುವುದು ಅಸಹ್ಯ ಹುಟ್ಟಿಸುವಂತಿದೆ. ಸಭಾಧ್ಯಕ್ಷರ ಮಾತಿಗೆ ಗೌರವ ಕೊಡದೆ ಕಿರುಚಾಡುವ ಇಂತಹ ಜನಪ್ರತಿನಿಧಿಗಳ ಅಪ್ರಬುದ್ಧ ನಡವಳಿಕೆಯಿಂದ ಶಾಸನಸಭೆ ತನ್ನ ಗಾಂಭೀರ್ಯವನ್ನು ಕಳೆದುಕೊಂಡಂತೆ ಕಾಣುತ್ತಿದೆ.

ಹಿಂದೆ ಡಿ.ದೇವರಾಜ ಅರಸು, ಶಾಂತವೇರಿ ಗೋಪಾಲಗೌಡ, ಎಂ.ಎಸ್.ಕೃಷ್ಣನ್, ಟಿ.ಆರ್.ಶಾಮಣ್ಣ, ಸಿ.ಎಂ.ಆರ್ಮುಗಂ, ಜೆ.ಎಚ್.ಪಟೇಲ್, ರಾಮಕೃಷ್ಣ ಹೆಗಡೆ, ಎಸ್.ಬಂಗಾರಪ್ಪ, ಕೋಣಂದೂರು ಲಿಂಗಪ್ಪ ಅಂತಹವರ ಅರ್ಥಪೂರ್ಣ ಮಾತುಗಳನ್ನು ಕೇಳಲು ವಿಧಾನಸಭಾ ಗ್ಯಾಲರಿ ತುಂಬಿರುತ್ತಿತ್ತು. ಇಂತಹ ಅನೇಕ ಮಹನೀಯರಿಂದ ಸಭೆಗೆ ಕಳೆ ಬರುತ್ತಿತ್ತು. ರಾಜ್ಯದ ಹಿತ ಕಾಪಾಡುವ ಜವಾಬ್ದಾರಿಯುಳ್ಳ ಈಗಿನ ಪೀಳಿಗೆಯ ಶಾಸಕರ ಈ ವರ್ತನೆ ನೋಡಿದರೆ ಅಚ್ಚರಿಯಾಗುತ್ತದೆ. ಇತ್ತೀಚೆಗಷ್ಟೇ ಹೊಸ ಶಾಸಕರಿಗೆ ತರಬೇತಿ ನೀಡಿರುವುದು ವರದಿಯಾಗಿತ್ತು. ಅದಾಗಿಯೂ ಇವರ ನಡವಳಿಕೆಯಲ್ಲಿ ಬದಲಾವಣೆ ಆಗಲಿಲ್ಲವೆಂದರೆ ಹೇಗೆ? ಶಾಸಕರು ಈ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಲಿ. ಗಂಭೀರ ಮತ್ತು ಅರ್ಥಪೂರ್ಣ ಚರ್ಚೆಯಲ್ಲಿ ತೊಡಗಿಕೊಂಡು, ಭವ್ಯ ಇತಿಹಾಸವುಳ್ಳ ರಾಜ್ಯ ವಿಧಾನಸಭೆಯ ಪರಂಪರೆಗೆ ಕುಂದು ಬಾರದಂತೆ ನಡೆದುಕೊಳ್ಳಲಿ.

ಡಿ.ಪ್ರಸನ್ನಕುಮಾರ್, ಬೆಂಗಳೂರು

ಹಾವಿನ ಬುಟ್ಟಿ ತೋರಿಸಿ ಬೆದರಿಸುವುದೇಕೆ?

‘ರಾಜ್ಯ ಸರ್ಕಾರ ದೊಡ್ಡ ಮೊತ್ತ ಪಡೆದು ಅಧಿಕಾರಿಗಳ ಸ್ಥಳ ನಿಯೋಜನೆ ಮಾಡುತ್ತಿರುವುದಕ್ಕೆ ದಾಖಲೆ ಕೊಡಲು ಸಿದ್ಧ. ದಂಧೆಯ ದಾಖಲೆ ಕೊಟ್ಟರೆ ತನಿಖೆ ಮಾಡುತ್ತೀರಾ? ಆಯಾ ಇಲಾಖೆಗಳ ಸಚಿವರನ್ನು ವಜಾ ಮಾಡುತ್ತೀರಾ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ಮುಂದುವರಿದು ‘ಮುಖ್ಯಮಂತ್ರಿ ಕಚೇರಿಯೇ ಭ್ರಷ್ಟಾಚಾರದ ಕೇಂದ್ರವಾಗಿದೆ. ನಾನು ದಾಖಲೆ ಬಿಡುಗಡೆ ಮಾಡಿದರೆ ಈ ಸರ್ಕಾರ ಇರುವುದಿಲ್ಲ’ ಎಂದಿದ್ದಾರೆ. ಮಾಜಿ ಮುಖ್ಯಮಂತ್ರಿಯೂ ಆದ ಕುಮಾರಸ್ವಾಮಿ ಅವರಿಂದ ಇಂತಹ ಮಾತುಗಳು ತರವಲ್ಲ. ಆಡಳಿತ ಪಕ್ಷವನ್ನು ಹಾವಿನ ಬುಟ್ಟಿ ತೋರಿಸಿ ‘ಇದರಲ್ಲಿ ಹಾವಿದೆ, ಹೊರಗೆ ಬಿಡಲೇ?’ ಎಂದು ಹೆದರಿಸುವಂತಿದೆ. ಅದರಲ್ಲಿ ಕೇರೆ ಹಾವಿದೆಯೋ ನಾಗರಹಾವಿದೆಯೋ ಕಾಳಿಂಗಸರ್ಪವೇ ಇದೆಯೋ ಗೊತ್ತಾಗುವುದು ಹೇಗೆ? ನಿಜವಾದ ಕಾಳಜಿ ಇದ್ದರೆ ಮುಚ್ಚಳ ತೆರೆಯಲಿ.

ಇಷ್ಟಕ್ಕೂ ಸತ್ಯವಾದ ದಾಖಲೆಗಳಿದ್ದರೆ ಅವನ್ನು ಸದನದಲ್ಲಿ ಮಂಡಿಸಿ ನ್ಯಾಯ ಕೇಳಬಹುದು. ಅಲ್ಲೂ ಆಗದಿದ್ದರೆ ನ್ಯಾಯಾಲಯ ಇದ್ದೇಇದೆ. ಸುಮ್ಮನೆ ದಾಖಲೆ ಇದೆ ಎಂದು ಬಡಬಡಿಸಿದರೆ ಆಗದು. ಒಂದು ವೇಳೆ ದಾಖಲೆ ಇದ್ದೂ ಬಿಡುಗಡೆ ಮಾಡದಿದ್ದರೆ ಅದು ಸಹ ಅಪರಾಧ ಅಲ್ಲವೇ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅಕಾಡೆಮಿಗಳಲ್ಲಿ ಇರಲಿ ಪ್ರಾದೇಶಿಕ ಪ್ರಾತಿನಿಧ್ಯ

ರಾಜ್ಯ ಸರ್ಕಾರವು ಸಾಂಸ್ಕೃತಿಕ ಅಕಾಡೆಮಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಬೇಕಾಗಿದೆ. ಅಕಾಡೆಮಿಗಳು, ಪ್ರಾಧಿಕಾರಗಳು, ನಿಗಮ-ಮಂಡಳಿಗಳು, ವಿಶ್ವವಿದ್ಯಾಲಯಗಳ ಕುಲಪತಿ, ಸಿಂಡಿಕೇಟ್-ಸೆನೆಟ್ ಸದಸ್ಯರು, ಆಯೋಗದಂತಹವುಗಳಿಗೆ ನೇಮಕಾತಿ ಮಾಡುವಾಗ ಉತ್ತರ ಕರ್ನಾಟಕಕ್ಕೆ, ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಆದ್ಯತೆ ನೀಡಬೇಕು ಎಂದು ಡಾ. ಡಿ.ಎಂ.ನಂಜುಂಡಪ್ಪ ಸಮಿತಿ ಶಿಫಾರಸು ಮಾಡಿತ್ತು. ಇದರ ಪಾಲನೆಯಾಗುತ್ತಿಲ್ಲ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸೇರಿದಂತೆ ಇತರ ಅಕಾಡೆಮಿಗಳಲ್ಲಿ, ರಾಜ್ಯದ ಅತ್ಯಂತ ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶದ ಸಾಹಿತಿ, ಬರಹಗಾರರಿಗೆ ಅವಕಾಶ ನೀಡಬೇಕಾದುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅಗತ್ಯ. ಈ ಎಲ್ಲ ಸಂಸ್ಥೆಗಳಿಗೆ ನೇಮಕಾತಿ ಮಾಡುವಾಗ ಪ್ರಾದೇಶಿಕ ಪ್ರಾತಿನಿಧ್ಯ ಹಾಗೂ ಲಿಂಗತ್ವ ಸಂಗತಿಗಳನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಳ್ಳಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಕಲಾಪಕ್ಕೆ ಅಡ್ಡಿ: ಮೊಂಡಾಟ ಸರಿಯಲ್ಲ

ವಿಧಾನಮಂಡಲದ ಅಧಿವೇಶನದ ಮೊದಲ ದಿನವೇ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಹೋರಾಟಕ್ಕೆ ಇಳಿದಿರುವುದು ಎಷ್ಟು ಸರಿ? ಪ್ರತಿ ದಿನದ ಅಧಿವೇಶನಕ್ಕೂ ತೆರಿಗೆದಾರರ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಕಲಾಪಕ್ಕೆ ಅಡ್ಡಿ ಮಾಡುವ ಮೊಂಡಾಟಗಳು ನಡೆಯುವುದು ಸರಿಯಲ್ಲ. ಮತದಾರರು ಒಂದು ಪಕ್ಷಕ್ಕೆ ಸರ್ಕಾರ ನಡೆಸಲು ಅಭೂತಪೂರ್ವ ಒಪ್ಪಿಗೆ ಕೊಟ್ಟಿದ್ದಾರೆ. ಅದರ ಪರಿಣಾಮವಾಗಿ ಸರ್ಕಾರ ಒಂದಷ್ಟು ಗ್ಯಾರಂಟಿಗಳನ್ನೂ ಜಾರಿ ಮಾಡಿದೆ. ಅವುಗಳ ಚರ್ಚೆಗೂ ನಿಯಮಗಳಿವೆ. ನಿಯಮಗಳನ್ನು ಗಾಳಿಗೆ ತೂರಿ, ಕೂಡಲೇ ಅವುಗಳ ಬಗ್ಗೆ ಚರ್ಚೆ ಆಗಬೇಕು ಎನ್ನುವುದು ಸರಿಯೇ? ಹಿಂದೆ ಇದ್ದ ಸರ್ಕಾರ ಮತದಾರರಿಗೆ ಏನೇನು ಅನುಕೂಲಗಳನ್ನು ಜಾರಿ ಮಾಡಿತ್ತು?

ರಾಜಕೀಯಕ್ಕಾಗಿ ರಾಜಕೀಯ ಮಾಡುತ್ತಿರುವ ವಿರೋಧ ಪಕ್ಷ, ಗ್ಯಾರಂಟಿ ಘೋಷಿಸಿ ಅಧಿಕಾರಕ್ಕೆ ಬಂದದ್ದರ ವಿರುದ್ಧ ಧರಣಿ ನಡೆಸುತ್ತಿದೆಯೋ ಅಥವಾ ಗ್ಯಾರಂಟಿಗಳು ಫಲಾನುಭವಿಗಳಿಗೆ ಸರಿಯಾಗಿ ಮುಟ್ಟಿಲ್ಲ ಎಂಬ ಕಳಕಳಿಯಿಂದ ಧರಣಿ ನಡೆಸುತ್ತಿದೆಯೋ? ಈ ಬಗ್ಗೆಯೂ ಜನರು ಹೊರಗೆ ಚರ್ಚೆ ಮಾಡುತ್ತಿದ್ದಾರೆ. ಆದ್ದರಿಂದ ನಿಯಮಾನುಸಾರ ಕಲಾಪಗಳು ನಡೆಯಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಕ್ಸ್‌ಪ್ರೆಸ್ ಹೆದ್ದಾರಿಗಳಲ್ಲಿ ಅಪಘಾತ ತಪ್ಪಿಸಲು ಬೇಕು ವೇಗಕ್ಕೆ ಕಡಿವಾಣ

ದೇಶದಲ್ಲಿ ಅಪಘಾತಗಳಿಗಾಗಿ ಅತಿಹೆಚ್ಚು ಸುದ್ದಿಯಾಗುತ್ತಿರುವುದು ಮಹಾರಾಷ್ಟ್ರದ ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿ ಮತ್ತು ಕರ್ನಾಟಕದ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ. ಸಾಮಾನ್ಯ ದಶಪಥ ಹೆದ್ದಾರಿಗಳಿಗೂ, ಎಕ್ಸ್‌ಪ್ರೆಸ್ ಹೆದ್ದಾರಿಗಳಿಗೂ ಬಹಳ ವ್ಯತ್ಯಾಸವಿದೆ. ವೇಗದ ಚಾಲನೆ ಸಾಧ್ಯವಿರುವ ಎಕ್ಸ್‌ಪ್ರೆಸ್ ಹೆದ್ದಾರಿಗಳಲ್ಲಿ, ಅತಿ ವೇಗದ ಕಾರಣಕ್ಕೇ ಅಪಘಾತಗಳು ಸಂಭವಿಸುತ್ತಿವೆ ಎನ್ನುತ್ತವೆ ದತ್ತಾಂಶಗಳು. ಅತಿ ವೇಗದ ಚಾಲನೆಯನ್ನು ನಿಯಂತ್ರಿಸಲು ಹಲವು ಕ್ರಮ ತೆಗೆದುಕೊಳ್ಳಲಾಗುತ್ತಿದೆಯಾದರೂ, ಅವನ್ನು ಇನ್ನಷ್ಟು ಬಿಗಿಯಾಗಿ ಅನುಷ್ಠಾನಕ್ಕೆ ತರಬೇಕು ಎಂಬ ಅಭಿಪ್ರಾಯವಿದೆ



ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದ ನಾಸಿಕ್ ಮತ್ತು ನಾಗ್ಪುರ ಮಧ್ಯೆ ಇರುವ ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಕಳೆದ ವಾರ ಸಂಭವಿಸಿದ ಬಸ್ ಬೆಂಕಿ ಅವಘಡದಲ್ಲಿ 25 ಮಂದಿ ಸಜೀವವಾಗಿ ಸುಟ್ಟುಹೋಗಿದ್ದರು. ಆನಂತರ ಆ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ವಾಹನಗಳ ಅತಿವೇಗ ನಿಯಂತ್ರಣಕ್ಕೆ ಮತ್ತು ವಾಹನಗಳ ತಪಾಸಣೆಗೆ ಕ್ರಮ ತೆಗೆದುಕೊಳ್ಳಲಾಗಿದೆ. ಈ ಮೊದಲೂ ಅಂತಹ ಕ್ರಮಗಳು ಇದ್ದವಾದರೂ, ಈಗ ಅವುಗಳನ್ನು ಬಿಗಿಗೊಳಿಸಲಾಗಿದೆ. ಇದೇ ಮಾರ್ಚ್‌ನಲ್ಲಿ ಉದ್ಘಾಟನೆಯಾಗಿ ಬಳಕೆಗೆ ಮುಕ್ತವಾದ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಈವರೆಗೆ 500ಕ್ಕೂ ಹೆಚ್ಚು ಸಣ್ಣ ಮತ್ತು ದೊಡ್ಡ ಅಪಘಾತಗಳು ಸಂಭವಿಸಿವೆ. 100ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಈ ಹೆದ್ದಾರಿಯಲ್ಲೂ ಅತಿವೇಗ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ಆದರೆ, ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ವೇಗ ನಿಯಂತ್ರಣಕ್ಕೆ ಇರುವ ಕ್ರಮಗಳು ಹೆಚ್ಚು ವ್ಯವಸ್ಥಿತವಾಗಿವೆ.

ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿಯ ಉದ್ದಕ್ಕೂ ಇಂತಿಷ್ಟು ಮೀಟರ್‌ಗೆ ಎಂದು ವೇಗಮಾಪನ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಗಂಟೆಗೆ 150 ಕಿ.ಮೀ. ವೇಗದಲ್ಲಿ ಚಾಲನೆ ಸಾಧ್ಯವಿರುವಂತೆ ಈ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ವಿನ್ಯಾಸ ಮಾಡಲಾಗಿದೆಯಾದರೂ, ಗರಿಷ್ಠ ವೇಗವನ್ನು ಗಂಟೆಗೆ 120 ಕಿ.ಮೀ.ಗೆ ಮಿತಿಗೊಳಿಸಲಾಗಿದೆ. ಚಾಲಕರು ಗರಿಷ್ಠ ವೇಗಮಿತಿಯನ್ನು ಮೀರದಂತೆ ಎಚ್ಚರವಹಿಸಲು ಪ್ರಬಲ ಕಣ್ಗಾವಲು, ದಂಡ ಮತ್ತು ವಾಹನ ಮುಟ್ಟುಗೋಲು ವ್ಯವಸ್ಥೆ ಈ ಹೆದ್ದಾರಿಯಲ್ಲಿ ಇದೆ. ಹೆದ್ದಾರಿಯ ಉದ್ದಕ್ಕೂ ಇಂತಿಷ್ಟು ಕಿ.ಮೀ.ಗೆ ಒಂದರಂತೆ ವೇಗಮಾಪನ ಮತ್ತು ವಾಹನಗಳ ನೋಂದಣಿ ಫಲಕ ಗುರುತಿಸುವ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಗಂಟೆಗೆ 120 ಕಿ.ಮೀ.ಗಿಂತಲೂ ಹೆಚ್ಚು ವೇಗದಲ್ಲಿ ಸಂಚರಿಸುವ ವಾಹನಗಳನ್ನು ಈ ಕ್ಯಾಮೆರಾಗಳು ಗುರುತಿಸುತ್ತವೆ. ಅಂತಹ ವಾಹನಗಳು ಟೋಲ್ ಘಟಕಗಳನ್ನು ಸಮೀಪಿಸುತ್ತಿದ್ದಂತೆಯೇ, ಸಿಬ್ಬಂದಿಗೆ ಸೂಚನೆ ನೀಡುವ ವ್ಯವಸ್ಥೆ ಇದೆ.

ಕ್ಯಾಮೆರಾಗಳಿಂದ ಸೂಚನೆ ಪಡೆದ ಸಿಬ್ಬಂದಿ ಅಂತಹ ವಾಹನಗಳನ್ನು ತಡೆದು ನಿಲ್ಲಿಸುತ್ತಾರೆ. ಅಲ್ಲಿಯೇ ಇರುವ ಹೆದ್ದಾರಿ ಗಸ್ತು ಪೊಲೀಸ್ ಸಿಬ್ಬಂದಿ ವಾಹದನ ಚಾಲಕನಿಗೆ ದಂಡ ವಿಧಿಸುತ್ತಾರೆ. ಆ ಚಾಲಕ ಮತ್ತು ವಾಹನ ಈಗಾಗಲೇ ಹಲವು ಬಾರಿ ಗರಿಷ್ಠ ವೇಗಮಿತಿಯನ್ನು ಮೀರಿದ್ದರೆ, ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಚಾಲಕನ ಚಾಲನಾ ಪರವಾನಗಿಯನ್ನು ಅಮಾನತು ಮಾಡಲಾಗುತ್ತದೆ. ಏಪ್ರಿಲ್‌ನಿಂದ ಈವರೆಗೆ ಅಂತಹ 234 ವಾಹನಗಳ ಚಾಲಕರಿಗೆ ದಂಡ ವಿಧಿಸಲಾಗಿದೆ. ಅತಿವೇಗ ನಿಯಂತ್ರಣಕ್ಕೆ ಬಿಗಿಕ್ರಮ ತೆಗೆದುಕೊಂಡಿರುವ ಕಾರಣದಿಂದಲೇ ಇಲ್ಲಿ ಅಪಘಾತಗಳ ಸಂಖ್ಯೆ ಕಡಿಮೆ ಇದೆ ಎನ್ನುತ್ತಾರೆ ಮಹಾರಾಷ್ಟ್ರ ಸಂಚಾರ ಪೊಲೀಸರು.

601 ಕಿ.ಮೀ.ನಷ್ಟು ಉದ್ದವಿರುವ ಈ ಹೆದ್ದಾರಿಯಲ್ಲಿ ಇದೇ ಜನವರಿ 1ರಿಂದ ಈವರೆಗೆ 450 ಅಪಘಾತಗಳು ಸಂಭವಿಸಿವೆ. ಜೂನ್ 11ರವರೆಗೆ ಈ ಹೆದ್ದಾರಿಯಲ್ಲಿ 449 ಅಪಘಾತಗಳು ಸಂಭವಿಸಿದ್ದು, ಅವುಗಳಲ್ಲಿ



70 ಜನರು ಮೃತಪಟ್ಟಿದ್ದರು. ಆದರೆ ಕಳೆದ ವಾರ ಸಂಭವಿಸಿದ ಬಸ್ ಬೆಂಕಿ ಅವಘಡದಲ್ಲಿ 25 ಜನ ಬಲಿಯಾಗಿದ್ದರು. ಹೀಗಾಗಿ ಆರು ತಿಂಗಳ ಅವಧಿಯಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ 95ರಷ್ಟಾಗಿದೆ. ಆದರೆ, 118 ಕಿ.ಮೀ.ನಷ್ಟು ಉದ್ದವಿರುವ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಜನವರಿಯಿಂದ ಈವರೆಗೆ ಸಂಭವಿಸಿದ ಅಪಘಾತಗಳಲ್ಲಿ 132 ಜನರು ಮೃತಪಟ್ಟಿದ್ದಾರೆ. ಈ ಅವಧಿಯಲ್ಲಿ, ಈ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ 500ಕ್ಕೂ ಹೆಚ್ಚು ಸಣ್ಣ ಮತ್ತು ದೊಡ್ಡ ಅಪಘಾತಗಳು ಸಂಭವಿಸಿವೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾದ ಬೆನ್ನಲ್ಲೇ ಸಂಚಾರ ಪೊಲೀಸರು ಹಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅತಿವೇಗದ ಚಾಲನೆಯಲ್ಲಿರುವ ವಾಹನಗಳನ್ನು ಗುರುತಿಸಿ, ತಡೆದು ನಿಲ್ಲಿಸಿ ದಂಡ ಹಾಕಲು ಇಂಟರ್‌ಸೆಪ್ಟರ್ ವಾಹನಗಳನ್ನು ಹೆದ್ದಾರಿಯ ಅಲ್ಲಲ್ಲಿ ನಿಯೋಜನೆ ಮಾಡಿದ್ದಾರೆ. ಅತಿವೇಗದ ಚಾಲನೆಯನ್ನು ಗುರುತಿಸುವ ಕ್ಯಾಮೆರಾಗಳ ಅಳವಡಿಕೆಗೆ ಸಲಹೆ ನೀಡಿದ್ದಾರೆ. ವಾಹನ ಚಾಲಕರಲ್ಲಿ ಸುರಕ್ಷಿತ ಚಾಲನೆಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಆದರೆ, ಇವಿಷ್ಟೂ ಕೆಲಸಗಳನ್ನು ಪೊಲೀಸರಷ್ಟೇ ಮಾಡುತ್ತಿದ್ದಾರೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಇನ್ನಷ್ಟೇ ಇಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.

ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಲೇ–ಬೇಗಳು ಮತ್ತು ರೆಸ್ಟೋರೆಂಟ್‌ಗಳ ಬಳಿ ಮಾತ್ರವೇ ವಾಹನಗಳನ್ನು ನಿಲುಗಡೆ ಮಾಡಬೇಕು. ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡುವವರಿಗೂ ದಂಡ ವಿಧಿಸಲಾಗಿದೆ. ಎರಡು ತಿಂಗಳ ಅವಧಿಯಲ್ಲಿ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡಿದ್ದ 3,169 ವಾಹನ ಚಾಲಕರಿಗೆ ದಂಡ ವಿಧಿಸಲಾಗಿದೆ. ಚಾಲನೆ ವೇಳೆ ಲೇನ್ ಶಿಸ್ತು ಉಲ್ಲಂಘಿಸಿದ 2,204 ವಾಹನಗಳ ಚಾಲಕರಿಗೆ ದಂಡ ವಿಧಿಸಲಾಗಿದೆ. ಇದೂ ಸಹ ಅಪಘಾತಗಳ ಸಂಖ್ಯೆ ಕಡಿಮೆ ಇರುವ ಪ್ರಮುಖ ಕಾರಣ ಎಂದು ಗುರುತಿಸಲಾಗಿದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲೂ ಇಂತಹ ವ್ಯವಸ್ಥೆ ಜಾರಿಯಾಗಬೇಕಿದೆ.

ಅಡೆತಡೆಗಳೇ ಇರಬಾರದು

ಆರು ಪಥಗಳ ಹೆದ್ದಾರಿ ಇದ್ದರೂ, ಅದರಲ್ಲಿ ಯಾವುದೇ ಅಡೆತಡೆ ಇರದಿದ್ದರೆ ಮಾತ್ರ ಅದನ್ನು ಎಕ್ಸ್‌ಪ್ರೆಸ್ ಹೆದ್ದಾರಿ ಎಂದು ವರ್ಗೀಕರಿಸಲಾಗುತ್ತದೆ. ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಟೋಲ್ ಘಟಕಗಳ ಮೂಲಕ ಮಾತ್ರ ಪ್ರವೇಶಕ್ಕೆ ಮತ್ತು ನಿರ್ಗಮನಕ್ಕೆ ಅವಕಾಶವಿದೆ. 601 ಕಿ.ಮೀ. ಉದ್ದಕ್ಕೂ ಎಲ್ಲಿಯೂ ಜಾನುವಾರುಗಳು, ಪಾದಚಾರಿಗಳು ಹೆದ್ದಾರಿ ಪ್ರವೇಶಿಸಲು ಅವಕಾಶವಿಲ್ಲ. ಬೀದಿ ನಾಯಿಗಳು, ಕಾಡುಪ್ರಾಣಿಗಳೂ ಹೆದ್ದಾರಿ ಪ್ರವೇಶಕ್ಕೆ ಅವಕಾಶವಿಲ್ಲ. ಹೀಗಾಗಿ ಅಲ್ಲಿ ವಾಹನಗಳು ಪಾದಚಾರಿಗಳಿಗೆ, ಪ್ರಾಣಿಗಳಿಗೆ ಡಿಕ್ಕಿ ಹೊಡೆಯುವ ಸಾಧ್ಯತೆ ಇಲ್ಲವೇ ಇಲ್ಲ.

ಆದರೆ, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಪರಿಸ್ಥಿತಿ ಈ ರೀತಿ ಇಲ್ಲ. ಹೆದ್ದಾರಿಯ ಅಲ್ಲಲ್ಲಿ ತಂತಿಬೇಲಿಯನ್ನು ತುಂಡರಿಸಲಾಗಿದೆ. ಸರ್ವಿಸ್ ರಸ್ತೆಯಿಂದ ವಾಹನಗಳು ತಂತಿಬೇಲಿ ತುಂಡರಿಸಿದ ಜಾಗದಿಂದ ಹೆದ್ದಾರಿಗೆ ಪ್ರವೇಶ ಪಡೆಯುತ್ತವೆ. ಜಾನುವಾರುಗಳು ಮತ್ತು ಕಾಡು ಪ್ರಾಣಿಗಳೂ ಸುಲಭವಾಗಿ ಹೆದ್ದಾರಿ ಪ್ರವೇಶಿಸಲು ಅವಕಾಶವಿದೆ. ಅಗತ್ಯವಿರುವ ಎಲ್ಲೆಡೆ ಪಾದಚಾರಿ ಮೇಲ್ಸೇತುವೆ ಇಲ್ಲ. ಹೀಗಾಗಿ ಪಾದಚಾರಿಗಳು ಹೆದ್ದಾರಿ ದಾಟುವಾಗ ವಾಹನಗಳಿಗೆ ಸಿಲುಕಿದ ನಿದರ್ಶನಗಳಿವೆ. ಈ ಎಲ್ಲಾ ಅಡೆತಡೆಗಳನ್ನು ನಿವಾರಿಸಿದರೆ ಮಾತ್ರವೇ ಅದು ನಿಜವಾಗಿಯೂ ಎಕ್ಸ್‌ಪ್ರೆಸ್ ಹೆದ್ದಾರಿ ಎನಿಸಿಕೊಳ್ಳುತ್ತದೆ.

ಟೈರ್‌ಗಳ ತಪಾಸಣೆ

ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿಗೆ ಪ್ರವೇಶಿಸುವ ವಾಹನಗಳ ಟೈರ್‌ಗಳ ತಪಾಸಣೆ ನಡೆಸುವ ವ್ಯವಸ್ಥೆಯನ್ನು ಎರಡು ತಿಂಗಳ ಹಿಂದೆ ಜಾರಿಗೆ ತರಲಾಗಿದೆ. ಪ್ರತಿ ವಾಹನಗಳ ಟೈರ್‌ಗಳ ತಪಾಸಣೆ ನಡೆಸಿ, ಹೆದ್ದಾರಿಯ ವೇಗದ ಚಾಲನೆಗೆ ಅವು ಯೋಗ್ಯವಾಗಿವೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಸವೆದು ಹೋದ, ಐದು ವರ್ಷಕ್ಕಿಂತ ಹಳೆಯದಾದ ಟೈರ್‌ಗಳು ಇರುವ ವಾಹನಗಳು ಎಕ್ಸ್‌ಪ್ರೆಸ್ ಹೆದ್ದಾರಿ ಪ್ರವೇಶಿಸುವುದನ್ನು ತಡೆಯಲಾಗುತ್ತದೆ.

ಸಮೃದ್ಧಿ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಟೈರ್ ಸಿಡಿದು ನಡೆದ ಅಪಘಾತಗಳ ಸಂಖ್ಯೆಯೂ ದೊಡ್ಡದು. ಹೀಗಾಗಿ ಟೈರ್‌ಗಳ ತಪಾಸಣೆಯನ್ನು ಜಾರಿಗೆ ತರಲಾಯಿತು ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದಾರೆ. ಟೈರ್‌ಗಳು ಸವೆದು ಹೋಗಿದ್ದರೆ ಮತ್ತು ಐದು ವರ್ಷಕ್ಕಿಂತ ಹಳೆಯದಾಗಿದ್ದರೆ ವೇಗದ ಚಾಲನೆ ವೇಳೆ ಅವು ಸಿಡಿದುಹೋಗುವ ಅಪಾಯದ ಸಾಧ್ಯತೆ ಅತ್ಯಧಿಕವಾಗಿರುತ್ತದೆ. ಅಂತಹ ವಾಹನಗಳನ್ನು ತಡೆದು ನಿಲ್ಲಿಸುತ್ತಿರುವುದರಿಂದ, ಟೈರ್ ಸಿಡಿದು ಸಂಭವಿಸುವ ಅಪಘಾತಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಟೈರ್‌ಗಳ ಸ್ಥಿತಿಗತಿ ಮಾತ್ರವಲ್ಲದೆ, ಟೈರ್‌ಗಳಲ್ಲಿ ಸರಿಯಾದ ಪ್ರಮಾಣದ ಗಾಳಿ ಇದೆಯೇ ಎಂಬುದನ್ನೂ ಪರಿಶೀಲಿಸಲಾಗುತ್ತದೆ. ಟೈರ್‌ಗಳಲ್ಲಿ ಅಗತ್ಯಕ್ಕಿಂತ ಸ್ವಲ್ಪ ಹೆಚ್ಚು ಗಾಳಿ ಇದ್ದರೂ, ದೀರ್ಘಾವಧಿಯ ವೇಗದ ಚಾಲನೆ ವೇಳೆ ಹೆಚ್ಚು ಅಪಾಯ ಇರುವುದಿಲ್ಲ. ಆದರೆ, ಅಗತ್ಯಕ್ಕಿಂತ ಕಡಿಮೆ ಗಾಳಿ ಇದ್ದರೆ, ರಸ್ತೆ ಮತ್ತು ಟೈರ್ ಮಧ್ಯೆ ಘರ್ಷಣೆ ಹೆಚ್ಚುತ್ತದೆ. ಇದರಿಂದ ಟೈರ್ ಬೇಗ ಬಿಸಿಯಾಗುತ್ತದೆ. ಹೆಚ್ಚು ಬಿಸಿಯಾದಾಗ ಟೈರ್ ಸಿಡಿಯುವ ಅಪಾಯವಿರುತ್ತದೆ. ಹೀಗಾಗಿ ಟೈರ್‌ಗಳಲ್ಲಿ ಸರಿಯಾದ ಪ್ರಮಾಣದ ಗಾಳಿ ಇದೆಯೇ ಎಂಬುದನ್ನು ಪರಿಶೀಲಿಸಲಾಗುತ್ತದೆ ಮತ್ತು ಅದನ್ನು ಸರಿಪಡಿಸಲಾಗುತ್ತದೆ. ಇದರಿಂದಲೂ ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಏಪ್ರಿಲ್‌ನಿಂದ ಈವರೆಗೆ ಚಾಲನಾಯೋಗ್ಯವಲ್ಲದ ಟೈರ್‌ಗಳು ಇದ್ದ 978 ವಾಹನಗಳನ್ನು ತಡೆದು ನಿಲ್ಲಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಟೈರ್ ಸರಿಯಿಲ್ಲದ ಮತ್ತು ಸರಿಯಾದ ಪ್ರಮಾಣದ ಗಾಳಿ ಇಲ್ಲದ ವಾಹನಗಳ 21,000ಕ್ಕೂ ಹೆಚ್ಚು ಚಾಲಕರಿಗೆ ಆ ಬಗ್ಗೆ ಅರಿವು ಮೂಡಿಸಲಾಗಿದೆ.

ಆಧಾರ: ಪಿಟಿಐ, ಪಿಐಬಿ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಕಟಣೆಗಳು, ರಾಷ್ಟ್ರೀಯ ರಸ್ತೆ ಕಾಂಗ್ರೆಸ್ ಕೈಪಿಡಿಗಳು, ಕರ್ನಾಟಕ ರಾಜ್ಯ ಸಂಚಾರ ಪೊಲೀಸ್ ಅಧಿಕಾರಿಗಳ ಟ್ವೀಟ್‌ಗಳು

ರಾಗಿಣಿ ಈಗ 'ಶಾನುಭೋಗರ ಮಗಳು'



ರಾಗಿಣಿ ಪ್ರಜ್ವಲ್

ಜನಪ್ರಿಯ ನಿರ್ದೇಶಕ ಕೋಡ್ಲು ರಾಮಕೃಷ್ಣ ಒಂದು ಸಣ್ಣ ವಿರಾಮದ ಬಳಿಕ ಮತ್ತೊಂದು ಚಿತ್ರ ಪ್ರಾರಂಭಿಸಿದ್ದಾರೆ. ಭಾಗ್ಯ ಕೆ.ಮೂರ್ತಿ ಅವರ ಸ್ವಾತಂತ್ರ್ಯಪೂರ್ವ ಕಾದಂಬರಿ ಆಧಾರಿತ ಚಿತ್ರಕ್ಕೆ 'ಶಾನುಭೋಗರ ಮಗಳು' ಎಂದು ಹೆಸರಿಡಲಾಗಿದೆ. ನಟ ಪ್ರಜ್ವಲ್ ದೇವರಾಜ್ ಪತ್ನಿ ರಾಗಿಣಿ ಪ್ರಜ್ವಲ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

'ಚಿತ್ರದಲ್ಲಿ ಬ್ರಿಟಿಷರು, ಟಿಪ್ಪು ಸುಲ್ತಾನ್ ಹಾಗೂ ಮೈಸೂರಿನ ಮಹಾರಾಜರುಗಳೊಂದಿಗಿನ ಸನ್ನಿವೇಶಗಳು ಹೆಚ್ಚಿವೆ. 'ಶಾನುಭೋಗರ ಮಗಳ' ಪಾತ್ರ ನಿರ್ವಹಿಸುತ್ತಿರುವ ರಾಗಿಣಿ ಪ್ರಜ್ವಲ್ ನಾಲ್ಕಾರು ಬ್ರಿಟಿಷರನ್ನು ಗುಂಡಿಟ್ಟು ಸಾಯಿಸುವ ದೃಶ್ಯವನ್ನು ಇತ್ತೀಚಿಗೆ ಶ್ರೀರಂಗ ಪಟ್ಟಣ, ಮೇಲುಕೋಟೆ, ಕುಂತಿ ಬೆಟ್ಟದ ಸುತ್ತಮುತ್ತ ಚಿತ್ರೀಕರಿಸಲಾಯಿತು' ಎಂದಿದೆ ಚಿತ್ರತಂಡ.

ಟಿಪ್ಪು ಸುಲ್ತಾನ್ ಪಾತ್ರದಲ್ಲಿ ಕಿಶೋರ್ ಅಭಿನಯಿಸುತ್ತಿದ್ದು, ರಮೇಶ್‌ಭಟ್, ಸುಧಾ ಬೆಳವಾಡಿ, ಪದ್ಮಾ ವಾಸಂತಿ, ವಾಣಿಶ್ರೀ, ಭಾಗ್ಯಶ್ರೀ, ಕುಮಾರಿ ಅನನ್ಯ, ಟಿ.ಎನ್.ಶ್ರೀನಿವಾಸ ಮೂರ್ತಿ, ನಿರಂಜನ ಶೆಟ್ಟಿ ಪ್ರಮುಖ ಪಾತ್ರದಲ್ಲಿದ್ದಾರೆ. ಡಾ.ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ, ಜೈ ಆನಂದ್ ಛಾಯಾಗ್ರಹಣ, ಕೆಂಪರಾಜ್ ಸಂಕಲನ ಚಿತ್ರಕ್ಕಿದೆ. ❖

'ಲಾಫಿಂಗ್ ಬುದ್ಧ' ಚಿತ್ರೀಕರಣ ಪೂರ್ಣ



ಪ್ರಮೋದ್

ನಟ ಪ್ರಮೋದ್ ಶೆಟ್ಟಿ ನಾಯಕನಾಗಿ ನಟಿಸಿರುವ ಸಿನಿಮಾ 'ಲಾಫಿಂಗ್ ಬುದ್ಧ' ಚಿತ್ರೀಕರಣ ಪೂರ್ಣಗೊಂಡಿದೆ. ಕಳೆದ ಮಾರ್ಚ್ ತಿಂಗಳಲ್ಲಿ ಸಿನಿಮಾ ಚಿತ್ರೀಕರಣ ಆರಂಭಗೊಂಡಿತ್ತು.

ನಟ, ನಿರ್ದೇಶಕ ರಿಷಬ್ ಶೆಟ್ಟಿ ತಮ್ಮ ರಿಷಬ್ ಶೆಟ್ಟಿ ಫಿಲಂಸ್ ಲಾಂಛನದಲ್ಲಿ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಭದ್ರಾವತಿ, ಕಾರ್ಗಲ್ ಹಾಗೂ ಬೆಂಗಳೂರಿನಲ್ಲಿ ಚಿತ್ರದ ಚಿತ್ರೀಕರಣವಾಗಿದೆ. ಭದ್ರಾವತಿಯ ಚಂಡಿಕಾ ದುರ್ಗ ದೇವಸ್ಥಾನದಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಿತ್ತು. ಇತ್ತೀಚೆಗೆ ಬೆಂಗಳೂರಿನಲ್ಲಿ ಚಿತ್ರೀಕರಣ ಮುಕ್ತಾಯವಾಗಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸವನ್ನು ಚಿತ್ರತಂಡ ಆರಂಭಿಸಿದೆ.

ಹಾಸ್ಯ ಪ್ರಧಾನವಾದ ಈ ಚಿತ್ರವನ್ನು ಎಂ.ಭರತ್ ರಾಜ್ ನಿರ್ದೇಶಿಸಿದ್ದಾರೆ. ಪ್ರಮೋದ್ ಶೆಟ್ಟಿ ಹಾಗೂ ತೇಜು ಬೆಳವಾಡಿ ಮುಖ್ಯಪಾತ್ರದಲ್ಲಿ ಇಲ್ಲಿ ನಟಿಸಿದ್ದಾರೆ. ವಿಷ್ಣುವಿಜಯ್ ಸಂಗೀತ ನಿರ್ದೇಶನ, ಚಂದ್ರಶೇಖರ್ ಛಾಯಾಚಿತ್ರಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಸಂಕಲನ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನೂರಾರು ಮಂದಿ ಮುಸ್ಲಿಮರು ರಸ್ತೆಯಲ್ಲಿ ನಮಾಜ್ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದರ ಜತೆಯಲ್ಲಿ, 'ನೋಡಿ. ಇದು ಪ್ಯಾರಿಸ್‌ನ ದೃಶ್ಯ. ಪ್ರತಿ ಶುಕ್ರವಾರದಂದು ಪ್ಯಾರಿಸ್ ಈ ರೀತಿ ಬದಲಾಗುತ್ತದೆ. ಇಂದು ಪ್ಯಾರಿಸ್‌ಗೆ ಆಗಿರುವ ಸ್ಥಿತಿ, ನಾಳೆ ಭಾರತಕ್ಕೆ ಆಗುತ್ತದೆ. ಎಚ್ಚೆತ್ತುಕೊಳ್ಳಲು ಇದು ನಮಗೆ ಕೊನೆಯ ಅವಕಾಶ. ಇದರಿಂದ ನೀವು ಬಚಾವಾಗುತ್ತೀರಾ? ಬಚಾವಾಗದಿದ್ದರೆ, ಕಾಶ್ಮೀರದಿಂದ ಪಂಡಿತರು ಓಡಿಹೋದಂತೆ ಓಡಿಹೋಗಲು ನೀವು ಸಿದ್ಧತೆ ಮಾಡಿಕೊಳ್ಳಿ' ಎಂಬ ಸಂದೇಶವನ್ನೂ ಹಂಚಿಕೊಳ್ಳಲಾಗಿದೆ. ಆದರೆ, ಇದು ತಿರುಚಲಾದ ಮಾಹಿತಿ.



ಇದು ಪ್ಯಾರಿಸ್‌ನ ಚಿತ್ರವಲ್ಲ. ಬದಲಿಗೆ ರಷ್ಯಾದ ರಾಜಧಾನಿ ಮಾಸ್ಕೋದಲ್ಲಿನ ಚಿತ್ರ. 2015ರಲ್ಲಿ ಈದ್ ಉಲ್ ಫಿತರ್ ದಿನದಂದು ಮಾಸ್ಕೋದ ಕೆಥೆಡ್ರಲ್ ಮಸೀದಿ ಎದುರು ಸಾವಿರಾರು ಮುಸ್ಲಿಮರು ನಮಾಜ್ ಮಾಡಿದ್ದರು. ಆ ಪ್ರಾರ್ಥನೆಯ ವಿಡಿಯೊ ಇದು. ಆ ಕಾರ್ಯಕ್ರಮದಲ್ಲಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸಹ ಭಾಗಿಯಾಗಿದ್ದರು. ಮುಸ್ಲಿಂ ಸಮುದಾಯದ ಜನರಿಗೆ ಶುಭಾಶಯ ಕೋರಿದ್ದರು. ಹಲವು ಮಾಧ್ಯಮಗಳು ಆ ಬಗ್ಗೆ ಸುದ್ದಿ ಪ್ರಕಟಿಸಿದ್ದವು. ಆದರೆ, ಆ ವಿಡಿಯೊವನ್ನು ಬಳಸಿಕೊಂಡು ಈಗ ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ. ಇದು ಪ್ಯಾರಿಸ್‌ನ ಸ್ಥಿತಿ, ಇದೇ ಸ್ಥಿತಿ ಭಾರತಕ್ಕೂ ಬರಲಿದೆ ಎಂಬ ಆತಂಕವನ್ನು ಸೃಷ್ಟಿಸಲು ಈ ವಿಡಿಯೊ ಬಳಸಿಕೊಳ್ಳಲಾಗಿದೆ. ಈ ಸುಳ್ಳು ಸುದ್ದಿಯ ಬಗ್ಗೆ ಆಲ್ಟ್ ನ್ಯೂಸ್, ಇಂಡಿಯಾ ಟುಡೇ, ಸಿಎನ್‌ಎನ್ ಮತ್ತು ಬಿಬಿಸಿ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ನಿರ್ಲಿಪ್ತ ಮನಸ್ಥಿತಿ

ಇಳಿಯುವೆನು ಮುಳುಗುವೆನು ವಿಶ್ವಾತ್ಮಸಾಗರದಿ |
ಮುಳುಮುಳುಗಿ ಕಳೆಯುವೆನು ಬೇರೆತನದರಿವ ||
ಇಳೆಬಾನ್ಗಳಾಟದಲಿ ಕುಣಿಯುವೆನು ಮೈ ಮರೆತು |
ಗಳಿಸೀ ಮನಸ್ಥಿತಿಯ – ಮಂಕುತಿಮ್ಮ || 921 ||

ಪದ-ಅರ್ಥ: ಬೇರೆತನದರಿವ = ಬೇರೆತನದ + ಅರಿವ, ಇಳೆಬಾನ್ಗಳಾಟದಲಿ = ಇಳೆ(ಭೂಮಿ) + ಬಾನ್(ಆಕಾಶ)ಗಳ + ಆಟದಲಿ, ಗಳಿಸೀ = ಗಳಿಸು + ಈ

ವಾಚ್ಯಾರ್ಥ: ಬ್ರಹ್ಮಸತ್ವ ಎಂಬ ವಿಶ್ವಾತ್ಮದ ಸಮುದ್ರದಲ್ಲಿ ಇಳಿಯುತ್ತೇನೆ, ಮುಳುಗುತ್ತೇನೆ. ನಾನು ಬೇರೆ ಎಂಬ ಅಂಶವನ್ನು ಮುಳುಗಿ ಕಳೆಯುತ್ತೇನೆ. ಭೂಮಿ, ಆಕಾಶಗಳ ನಡುವಿನ ಪ್ರಪಂಚದಾಟದಲಿ ಮೈಮರೆತು ಕುಣಿಯುತ್ತೇನೆ ಎನ್ನುವ ಮನಸ್ಥಿತಿಯನ್ನು ಗಳಿಸು.

ವಿವರಣೆ: ಗೆಸ್ಸೆನ್ ಒಬ್ಬ ಝೆನ್ ಸಂತ. ಅವನಿಗೊಂದು ಅಪೇಕ್ಷೆ.ಝೆನ್ ಸೂತ್ರಗಳನ್ನು ಮುದ್ರಿಸಿ ಹಂಚುವುದು. ಆ ದಿನಗಳಲ್ಲಿಮುದ್ರಣ ಯಂತ್ರಗಳು ಬಂದಿರಲಿಲ್ಲ. ಒಂದು ಮರದ ತುಂಡಿನಮೇಲೆ ಅಕ್ಷರಗಳನ್ನು ಕೊರೆದು, ಬಣ್ಣದಲ್ಲಿ ನೆನೆಯಿಟ್ಟು, ಬಿಳಿಯ ಕಾಗದದ ಮೇಲೆ ಒತ್ತಿ, ಒಣಗಿಸಿ ಕಾಯ್ದುಕೊಳ್ಳಬೇಕಿತ್ತು. ಇದಕ್ಕೆ ಬಹಳ ಹಣ ಬೇಕಾಗುತ್ತಿತ್ತು. ಗೆಸ್ಸೆನ್ ಊರೂರು ಅಲೆದ, ಮನೆಮನೆಯಲ್ಲಿ ಬೇಡಿ ಹಣ ಸಂಗ್ರಹಿಸಿದ. ಇನ್ನೇನು ಮುದ್ರಣ ಕಾರ್ಯ ಪ್ರಾರಂಭಿಸಬೇಕು ಎಂದಾಗ ಜಪಾನ್ ದೇಶದಲ್ಲಿ ಹಳದಿ ಜ್ವರ ಕಾಳ್ಗಿಚ್ಚಿನಂತೆ ಹರಡಿತು. ಗೆಸ್ಸೆನ್ ತಾನು ಕೂಡಿಟ್ಟ ಹಣವನ್ನು ಶಿಷ್ಯರಿಗೆ ಕೊಟ್ಟು, ಸಂತ್ರಸ್ತರ ಸೇವೆ ಮಾಡಿದ. ನಂತರ ಮತ್ತೆ ಹದಿನೈದು ವರ್ಷ ಸತತ ಪರಿಶ್ರಮಪಟ್ಟು ಹಣ ಕೂಡಿಸಿದ. ಆ ಬಾರಿ ನದಿಯಲ್ಲಿ ಮಹಾಪ್ರವಾಹ ಬಂದು ಸಾವಿರಾರು ಜನರು ನಿರಾಶ್ರಿತರಾದರು. ಮತ್ತೆ ಗೆಸ್ಸೆನ್ ತನ್ನ ಬಳಿಯಿದ್ದ ಹಣವನ್ನೆಲ್ಲ ನಿರಾಶ್ರಿತರ ಸೇವೆಗೆ ಹಂಚಿಬಿಟ್ಟ. ಗುರುವಿನ ಅಪೇಕ್ಷೆ ಈಡೇರಲಿಲ್ಲವಲ್ಲ ಎಂದು ಗೆಸ್ಸೆನ್ ನ ಶಿಷ್ಯರು ಮುರುಗಿದರು. ಆಗಲೇ ಗುರುವಿಗೆ ಅರವತ್ತು ವರ್ಷ. ಗೆಸ್ಸೆನ್ ಮತ್ತೆ ಹದಿನೈದು ವರ್ಷ ಶ್ರಮಿಸಿ, ದುಡ್ಡು ಕೂಡಿಸಿ ಸೂತ್ರಗಳನ್ನು ಮುದ್ರಿಸಿದ. ಇಂದಿಗೂ ಅವನು ಮುದ್ರಿಸಿದ ಸೂತ್ರಗಳು ಕ್ಯೋಟೋದ ಸಂಗ್ರಹಾಲಯದಲ್ಲಿವೆ. ಜಪಾನೀಯರು ಹೇಳುತ್ತಾರೆ, "ಗುರು ಗೆಸ್ಸೆನ್ ಮೂರು ಬಾರಿ ಸೂತ್ರಗಳನ್ನು ಮುದ್ರಿಸಿದ. ಅವುಗಳಲ್ಲಿ ಒಂದು ಮಾತ್ರ ಕಾಗದದ ಮೇಲಿದೆ. ಉಳಿದ ಎರಡು, ಕೃತಜ್ಞತೆಯಿಂದ ಬಾಗಿದ ಜನರ ಹೃದಯಗಳ ಮೇಲಿವೆ". ಗೆಸ್ಸೆನ್ ಸೂತ್ರಗಳನ್ನು ಮುದ್ರಿಸಿದ ಮೇಲೆ ಯಾರಿಗೂ ಕಾಣದಂತೆ ಕಾಡಿನಲ್ಲಿ ಮರೆಯಾಗಿ ಹೋದ, ಮುಂದೆ ಯಾರೂ ಅವನನ್ನು ಕಾಣಲೇ ಇಲ್ಲ. ಇದೊಂದು ಅದ್ಭುತ. ಪ್ರಪಂಚದ ಆಟದಲ್ಲಿ ಮೈಮರೆತು ದುಡಿದರೂ, ಅದು ತನ್ನದಲ್ಲ ಎಂಬ ನಿಷ್ಕಾಮಕರ್ಮ. ಕಗ್ಗ ಅದನ್ನೇ ವಿವರಿಸುತ್ತದೆ. ವಿಶ್ವಾತ್ಮವೆಂಬ ಸಾಗರದಲ್ಲಿ ಇಳಿದು, ಮುಳುಗಿ, 'ನಾನು' ಎಂಬ ಅಹಂಕಾರವನ್ನು ಕಳೆದುಕೊಳ್ಳಬೇಕು. ಅದಾವುದೂ ತನಗೆ ಸಂಬಂಧಪಟ್ಟದ್ದಲ್ಲ ಎನ್ನುವಂತಹ ನಿರ್ಲಿಪ್ತ ಮನಸ್ಥಿತಿಯನ್ನು ಹೊಂದಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜುಲೈ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣತೃತೀಯ ಗಂ. 06-31, ನಂತರ ಚತುರ್ಥಿ ಗಂ. 27-13 ನಕ್ಷತ್ರ: ಧನಿಷ್ಠಾ ಗಂ. 24-25 ಯೋಗ: ಪ್ರೀತಿ ಗಂ. 24-00 ಕರಣ: ವಿಷ್ಟಿ ಗಂ. 06-31, ಬವ ಗಂ. 16-50, ಮಿಥುನ ಮಾಸದ 21 ನೇ ದಿನ, ಮಳೆನಕ್ಷತ್ರ: ಪುನರ್ವಸು 1.ರಾಹುಕಾಲ : ಬೆಳಿಗ್ಗೆ 01-30 - 03-00
ಸೂರ್ಯೋದಯ : 06-13 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 17 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 7, 2

ಮೇಷ: ವ್ಯವಹಾರದಲ್ಲಿನ ನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಧೈರ್ಯ ಬೆಳೆಸಿಕೊಳ್ಳಿ. ಈ ದಿನದ ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲವಾಗಿದೆ. ಸಾಮಾಜಿಕ ಗಲಭೆಯಿಂದ ದೂರವಿರಿ.

ವೃಷಭ: ಈ ಹಿಂದೆ ಪಾರಂಭವಾಗಿರುವ ಕಾರ್ಯಗಳು ಮನುಷ್ಯ ಪ್ರಯತ್ನದ ಕೊರತೆಯಿಂದ ಸ್ತಬ್ಧವಾದಂತಾಗಲಿದೆ. ಬಂಧುಗಳು ಸಂಬಂಧ ಕೋರಿ ನಿಮ್ಮ ಮನೆಗೆ ಬರಲಿದ್ದಾರೆ. ಎಲ್ಲರ ಒಪ್ಪಿಗೆಯಂತೆ ವಿವಾಹ ನಡೆಸಿರಿ.

ಮಿಥುನ: ಬಹುಸಮಯದಲ್ಲಿನ ಹಿತಶತ್ರುಗಳ, ಪ್ರತಿಸ್ಪರ್ಧಿಗಳ ವಿದ್ರೋಹ ಅನುಭವಕ್ಕೆ ಬಂದೀತು. ಆದರೆ ನೀವು ಹೆದರುವ ಅವಶ್ಯಕತೆ ಇಲ್ಲ, ಬದಲಾಗಿ ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂಥಕಾಲ ನಿರೀಕ್ಷಿಸಬಹುದು.

ಕರ್ಕಾಟಕ: ಹಳೆಯ ಸ್ನೇಹಿತನೊಬ್ಬನ ಆಕಸ್ಮಿಕ ಭೇಟಿಯು ಈ ದಿನ ಸಂತಸ ಉಂಟುಮಾಡುವುದು. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಪುಸ್ತಕ ವ್ಯಾಪಾರಿಗಳಿಗೆ ಉತ್ತಮ ಲಾಭ.

ಸಿಂಹ: ಕುಟುಂಬದಲ್ಲಿ ನಿಮ್ಮ ನಿಲುವುಗಳೇನು ಎಂಬುದನ್ನು ಸ್ಪಷ್ಟಪಡಿಸಬೇಕಾಗುವುದು. ಆಭರಣ ಅಥವಾ ಬಟ್ಟೆ ವ್ಯಾಪಾರ ಮಾಡುವವರು ಪತ್ರಿಕೆಯವರ ಸಹಕಾರದಿಂದ ಪ್ರಚಾರವನ್ನು ಪಡೆದುಕೊಳ್ಳಬಹುದು.

ಕನ್ಯಾ: ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು ಹಾಗೂ ಮನೆಯಲ್ಲಿ ದೇವತಾ ಕಾರ್ಯಕ್ರಮ ಏರ್ಪಡಿಸುವಿರಿ. ಖಾದ್ಯ ತೈಲಗಳ ವ್ಯಾಪಾರಗಳಿಂದ ಹೇರಳ ಲಾಭ ಹೊಂದುವಿರಿ.

ತುಲಾ: ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವುದರಿಂದ ಹೆಚ್ಚಿನ ವರಮಾನ ಮತ್ತು ಸಮಾಜದಲ್ಲಿ ಉನ್ನತ ಸ್ಥಾನಮಾನ ನಿರೀಕ್ಷಿಸ ಬಹುದು. ವೃತ್ತಿರಂಗದಲ್ಲಿ ಅದೃಷ್ಟ ಈ ದಿನ ನಿಮ್ಮ ಪಾಲಿಗಿರುವುದು.

ವೃಶ್ಚಿಕ: ಸ್ವಲ್ಪ ಪರಿಶ್ರಮವೂ ಕಾರ್ಯಸಾಧನೆಯಲ್ಲಿ ಪ್ರದರ್ಶಿಸಲು ಸಾಧ್ಯವಾಗದಂತೆ ಆಗಲಿದೆ. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿ ಪಡೆದುಕೊಳ್ಳುವಿರಿ. ಮನೆಯಲ್ಲಿ ಸಂಘರ್ಷದ ವಾತಾವರಣ ಸೃಷ್ಟಿಯಾಗಬಹುದು.

ಧನು: ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪರಿಶ್ರಮದ ಅಗತ್ಯವಿದೆ. ಯಾವುದೇ ಸ್ವಾರ್ಥ ಅಪೇಕ್ಷೆ ಇಲ್ಲದೇ ಮಾಡುತ್ತಿರುವ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಇರುತ್ತದೆ. ಬರವಣಿಗೆಯಲ್ಲಿ ಉತ್ಸಾಹ ಹೆಚ್ಚುವುದು.

ಮಕರ: ಕುಟುಂಬ ಅಭಿವೃದ್ಧಿಯ ನಿಂತುಹೋಗಿದ್ದ ಕೆಲವು ಕಾರ್ಯಗಳು ಪುನಃ ಆರಂಭಗೊಳ್ಳುವುದು. ಭೋಜನದ ಸಮಯ ಸ್ನೇಹಿತರೊಂದಿಗೆ ಕಳೆಯುವಿರಿ. ವಿಶ್ರಾಂತಿ ಇಲ್ಲದ ಕೆಲಸದಿಂದ ದೇಹಾಯಾಸವಾಗಲಿದೆ.

ಕುಂಭ: ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರುವ ಸೂಚನೆ ಕಾಣುವಿರಿ. ಮಕ್ಕಳಿಗಾಗಿ ಆಟಿಕೆ ವಸ್ತುಗಳ ಖರೀದಿ ಮಾಡುವಂತಾಗುವುದು. ದೈನಂದಿನ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಬದಲಾವಣೆ ಇರುವುದಿಲ್ಲ.


ಮೀನ: ಹಿರಿಯರ ಆಶೀರ್ವಾದ ಮತ್ತು ಮಾರ್ಗದರ್ಶನ ನಿಮ್ಮಪಾಲಿಗಿರುವುದರಿಂದ ಶುಭವಾಗುವುದು. ಮಗನ ನೂತನ ಕೆಲಸದ ವಿಚಾರವಾಗಿ ಆಪ್ತರೊಬ್ಬರಲ್ಲಿ ಸಲಹೆ ಕೇಳಿಕೊಳ್ಳುವಿರಿ. ಆದಾಯದಲ್ಲಿ ಹೆಚ್ಚಳವಿರುವುದು.

ಪದಬಂಧ 5371

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಂಟುಮಾಡುವಿಕೆ ಅಥವಾ ಊಹೆ (3)
3.ಕಣ್ಣಿಗೆ ಕಾಣುವುದು (3)
5.ಮನುಷ್ಯನನ್ನು ತಿನ್ನುವ ಪ್ರಾಣಿ (5)
6.ಅಲೆಯುತ್ತಿರುವಾಗ ಉಲ್ಟಾ ಬಿಡಿದ ತರಂಗ! (2)
8.ಪ್ರಾಂಗಣದಲ್ಲಿರುವ ಜೀವ! (2)
9.ನಾಗರೀಕರು ಹಿಡಿದಿರುವ ಗುಂಜು (2)
10.ಸಂಸಾರ ಬಂಧನಕ್ಕೆ ಒಳಗಾದವನು (2)
14.ಮತ ಧರ್ಮವನ್ನು ಅನುಸರಿಸದವನು (5)
15.ಮರಳ ಬಳಿಯಲ್ಲಿರುವ ಹುಚ್ಚ ತಿರುಗಿದ್ದಾನಲ್ಲಾ? (3)
16.ಕರಡಿ ಇಲ್ಲದೆ (3)

ಮೇಲಿಂದ ಕೆಳಕ್ಕೆ
1.ಕಲೆಯೊಳಗಿರುವ ಆಹ್ವಾನ ಪತ್ರ (4)
2.ಆಗಿಹೋಗಿದ್ದನ್ನು ಮನಸ್ಸಿಗೆ ತಂದುಕೊಳ್ಳುವುದು (3)
3.ಮುಚ್ಚುಮರೆ ಇಲ್ಲದೆ ನಿಚ್ಚಳವಾದುದು (3)
4.ಮನ್ನಿಸುವ ಸ್ವಭಾವ (4)
7.ಹೂಗಳಿಂದ ತೆಗೆದ ಸುಗಂಧ ದ್ರವ್ಯ (3)
8.ತೊಡಗುವಿಕೆಗೊಂದು ಪರ್ಯಾಯ ಪದ (3)
9.ನಾರಿ ಹಿಡಿದಿರುವ ತೆಂಗಿನಕಾಯಿ (4)
11.ನಗಿಸುವುದೇ ಇವನ ಕಾಯಕ (4)
12.ಈತ ನೀಚನೇ ಬಿಡಿ (3)
13.ಎಂಟು ಕಾಲುಳ್ಳ ಕಾಲ್ಪನಿಕ ಪ್ರಾಣಿ (3)



5370ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭಿಷೇಕ 3.ಅಸ್ಥಿಭಾರ
5.ದಿವಾನ 7.ಹವನ
9.ಮಯೂರ 10.ರಮಣ
11.ಸಂಕಟ 15.ಮೃಗಜಲ
16.ತಾರುಮಾರು

ಮೇಲಿಂದ ಕೆಳಕ್ಕೆ:
1.ಅನಾದಿ 2.ಕರು
3.ಅಸಹಕಾರ 4.ರಥ
6.ವಾಗ್ಗೇಯಕಾರ 8.ನಯವಂಚಕ
9.ಮರಣಕಾಲ 12.ಟಗರು
13.ಗಮ್ಮ 14.ತಾತಾ

ಸುಡೊಕು 5757

	4			2		7		3
6		9	5		7		4	
	3			8		6		
	7			9			3	
	9	3	6		8			4
4				5		8		
7			8		9			
	5							7
	8			4		9		


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5756 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,389
ಇಂದಿನ ಅಂತ್ಯ	19,398
▲	9
ದಿನದ ಗರಿಷ್ಠ	19,421

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1700-2000
ಮಧ್ಯಮ	₹1300-1500
ಸಣ್ಣ	₹800-1200

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹530

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1705 (1690)
ಸೋಯಾ (ರಿಫೈನ್ಡ್)	₹960 (970)
ಸೂರ್ಯಕಾಂತಿ (ರಿಫೈನ್ಡ್)	₹960 (960)
ಪಾಮೋಲಿನ್	₹865 (877)

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)

ಕನಿಷ್ಠ-ಗರಿಷ್ಠ	₹6800
ಗರಿಷ್ಠ	₹8055
ಮಾದರಿ	₹7800
ಒಟ್ಟು ಆವಕ	1638


ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹146.50
ಗುಡ್ ಲಾಟ್	₹129

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹268-412
ದ್ವಿತಳಿ (ಬಿ.ವಿ)	₹303-523

₹299.90 ಲಕ್ಷ ಕೋಟಿಗೆ ಮಾರುಕಟ್ಟೆ ಮೌಲ್ಯ



ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯ ಮಾರುಕಟ್ಟೆ ಬಂಡವಾಳ ಮೌಲ್ಯ ಬುಧವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹299.90 ಲಕ್ಷ ಕೋಟಿಗೆ ತಲುಪಿದೆ.

ಬಂಡವಾಳ ಮೌಲ್ಯವು ₹300 ಲಕ್ಷ ಕೋಟಿಯ ಮೈಲಿಗಲ್ಲು ತಲುಪಲು ಇನ್ನು ₹9,949.27 ಲಕ್ಷ ಕೋಟಿ ಬೇಕಿದೆ.

ಬಿಎಸ್‌ಇ ಸೆನ್ಸೆಕ್ಸ್ ತುಸು ಇಳಿಕೆ ಕಂಡಿದ್ದರೂ ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹1.32 ಲಕ್ಷ ಕೋಟಿಯಷ್ಟು ಏರಿಕೆಯಾಗಿದೆ.

ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಸೇವಾ ವಲಯದ ಚಟುವಟಿಕೆ



ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಬೆಳವಣಿಗೆಯು ಜೂನ್‌ನಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಹೀಗಿದ್ದರೂ ಸತತ 23ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಚಲನೆ ಮುಂದುವರಿದಿದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಮೇ ತಿಂಗಳಲ್ಲಿ 61.2 ಇದ್ದಿದ್ದು ಜೂನ್‌ನಲ್ಲಿ 58.5ಕ್ಕೆ ಇಳಿಕೆ ಕಂಡಿದೆ.

ಹೊಸ ವಹಿವಾಟುಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದು ಹಾಗೂ ಮಾರುಕಟ್ಟೆಯು ಅನುಕೂಲಕರ ಸ್ಥಿತಿಯಲ್ಲಿ ಇರುವುದರಿಂದಾಗಿ ಸಕಾರಾತ್ಮಕ ಚಲನೆ ಮುಂದುವರಿದಿದೆ ಎಂದು ಅದು ತಿಳಿಸಿದೆ.

ತಯಾರಿಕಾ ವಲಯವನ್ನೂ ಒಳಗೊಂಡು ಖಾಸಗಿ ವಲಯದಲ್ಲಿ ತಯಾರಾದ ಉತ್ಪನ್ನಗಳ ದರವು ದಶಕದದಲ್ಲೇ ವೇಗದ ಏರಿಕೆ ಕಂಡಿದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಹತ್ತರಲ್ಲಿ ಒಂದು ಕಂಪನಿಯು ಕಾರ್ಯಾಚರಣಾ ವೆಚ್ಚ ಗರಿಷ್ಠ ಮಟ್ಟದಲ್ಲಿ ಇರುವುದಾಗಿ ಹೇಳಿದೆ. ಆಹಾರ, ನಿರ್ಮಾಣ ವಸ್ತುಗಳು ಮತ್ತು ವೇತನಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವೆಚ್ಚ ಮಾಡಲಾಗಿದೆ ಎಂದು ಹೇಳಿದೆ. ಉಳಿದ ಕಂಪನಿಗಳು ಕಳೆದ ತಿಂಗಳಿನಷ್ಟೇ ವೆಚ್ಚ ಮಾಡಿರುವುದಾಗಿ ತಿಳಿಸಿವೆ.

ತಯಾರಿಕೆ ಮತ್ತು ಸೇವೆಗಳ ಒಟ್ಟು ಬೆಳವಣಿಗೆಯನ್ನು ತಿಳಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಮೇ ತಿಂಗಳಿನಲ್ಲಿ 61.6ರಷ್ಟು ಇದ್ದಿದ್ದು ಜೂನ್‌ನಲ್ಲಿ 59.4ಕ್ಕೆ ಇಳಿಕೆ ಕಂಡಿದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ತಿಳಿಸಿದೆ.

ಬ್ಯಾಂಕ್ ಹಾಗೂ ಎನ್‌ಬಿಎಫ್‌ಸಿಗಳಿಗೆ ಆರ್‌ಬಿಐ ಕರಡು ಸುತ್ತೋಲೆ

ಕಾರ್ಡ್: ಆಯ್ಕೆ ಗ್ರಾಹಕನ ಮರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ನೀಡುವ ಸಂದರ್ಭದಲ್ಲಿ, ಯಾವ ಕಾರ್ಡ್ ನೆಟ್‌ವರ್ಕ್ ಬೇಕು ಎಂಬುದನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಗ್ರಾಹಕರಿಗೆ ನೀಡಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.

ಇದು ನಿಯಮವಾಗಿ ಜಾರಿಗೆ ಬಂದ ನಂತರದಲ್ಲಿ, ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ಕೂಡ ಇದನ್ನು ಪಾಲಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಆರ್‌ಬಿಐ ಬುಧವಾರ ಕರಡು ಸುತ್ತೋಲೆಯೊಂದನ್ನು ಹೊರಡಿಸಿದ್ದು, ಇದಕ್ಕೆ ಸಲಹೆಗಳನ್ನು, ಪ್ರತಿಕ್ರಿಯೆಗಳನ್ನು ಆಹ್ವಾನಿಸಿದೆ. ಸಲಹೆಗಳನ್ನು ಆಗಸ್ಟ್ 4ಕ್ಕೆ ಮೊದಲು ಸಲ್ಲಿಸಬೇಕು.

ಅಧಿಕೃತ ಕಾರ್ಡ್ ನೆಟ್‌ವರ್ಕ್ ಕಂಪನಿಗಳು, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಸೇವೆ ಒದಗಿಸುವ ವಿಚಾರದಲ್ಲಿ ಬ್ಯಾಂಕ್ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಂಡಿರುತ್ತವೆ. 'ಯಾವ ನೆಟ್‌ವರ್ಕ್‌ನ ಕಾರ್ಡ್‌ಅನ್ನು ಗ್ರಾಹಕನಿಗೆ ನೀಡಬೇಕು ಎಂಬುದನ್ನು ಕಾರ್ಡ್ ನೀಡುವ ಕಂಪನಿ (ಬ್ಯಾಂಕ್ ಅಥವಾ ಎನ್‌ಬಿಎಫ್‌ಸಿ) ತೀರ್ಮಾನಿಸುತ್ತಿದೆ' ಎಂದು ಆರ್‌ಬಿಐ ಹೇಳಿದೆ.

'ಪರಿಶೀಲನೆ ನಡೆಸಿದಾಗ, ಕಾರ್ಡ್ ನೆಟ್‌ವರ್ಕ್ ಕಂಪನಿ ಹಾಗೂ ಕಾರ್ಡ್ ನೀಡುವ ಕಂಪನಿ ನಡುವೆ ಇರುವ ಒಪ್ಪಂದಗಳು ಗ್ರಾಹಕನಿಗೆ ಆಯ್ಕೆಗಳನ್ನು ಒದಗಿಸುವುದಕ್ಕೆ ಪೂರಕವಾಗಿ ಇಲ್ಲ ಎಂಬುದು ಕಂಡುಬಂದಿದೆ' ಎಂದು ಆರ್‌ಬಿಐ ವಿವರಿಸಿದೆ.

ಗ್ರಾಹಕರ ಹಿತ ಕಾಯುವ ಉದ್ದೇಶದಿಂದ ಹಾಗೂ ಪಾವತಿ ವ್ಯವಸ್ಥೆಯ ಹಿತದೃಷ್ಟಿಯಿಂದ, 'ಕಾರ್ಡ್ ನೀಡುವ ಕಂಪನಿಯು ಕಾರ್ಡ್ ನೆಟ್‌ವರ್ಕ್ ಕಂಪನಿ ಜೊತೆ ಮಾಡಿಕೊಳ್ಳುವ ಒಪ್ಪಂದವು, ಬೇರೆ ಕಾರ್ಡ್ ನೆಟ್‌ವರ್ಕ್ ಸೇವೆ ಬಳಸಲು ಅಡ್ಡಿ ಉಂಟುಮಾಡುವಂತೆ ಇರಬಾರದು' ಎಂದು ಕರಡು ಸುತ್ತೋಲೆಯು ಹೇಳಿದೆ. ಕಾರ್ಡ್ ನೀಡುವ ಕಂಪನಿಯು ಒಂದಕ್ಕಿಂತ ಹೆಚ್ಚು ನೆಟ್‌ವರ್ಕ್‌ಗಳ ಕಾರ್ಡ್ ಸೇವೆ ಒದಗಿಸಬೇಕು ಎಂದು ಸೂಚಿಸಿದೆ.

ತಮಗೆ ಯಾವ ಕಾರ್ಡ್ ನೆಟ್‌ವರ್ಕ್ ಇಷ್ಟ ಎಂಬುದನ್ನು ಗ್ರಾಹಕರೇ ಆಯ್ಕೆ ಮಾಡಿಕೊಳ್ಳಬೇಕು. ಈ ಸೂಚನೆಗಳು ಅಕ್ಟೋಬರ್ 1ರಿಂದ ಜಾರಿಗೆ ಬರಲಿವೆ ಎಂದು ಆರ್‌ಬಿಐ ಹೇಳಿದೆ.



ಕಾರ್ಡ್ ನೆಟ್‌ವರ್ಕ್‌ಗಳು ಯಾವುವು?

ದೇಶದಲ್ಲಿ ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್ ಸೇವೆಯಲ್ಲಿ ಭಾಗಿಯಾಗಿರುವ ಜನಪ್ರಿಯ ನೆಟ್‌ವರ್ಕ್ ಕಂಪನಿಗಳು ಅಮೆರಿಕನ್ ಎಕ್ಸ್‌ಪ್ರೆಸ್ ಬ್ಯಾಂಕಿಂಗ್ ಕಾರ್ಪ್, ಡೈನರ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಲಿ., ಮಾಸ್ಟರ್‌ಕಾರ್ಡ್ ಏಷ್ಯಾ ಪೆಸಿಫಿಕ್ ಲಿ., ರಾಷ್ಟ್ರೀಯ ಪಾವತಿ ನಿಗಮದ ರುಪೇ ಮತ್ತು ವೀಸಾ ವರ್ಲ್ಡ್‌ವೈಡ್ ಲಿ.

ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಗೆ ಅಸ್ತು

ನವದೆಹಲಿ: ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಗೆ ಕೇಂದ್ರ ಸಚಿವ ಸಂಪುಟವು ಬುಧವಾರ ಅನುಮೋದನೆ ನೀಡಿದ್ದು, ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಇದನ್ನು ಮಂಡಿಸುವ ನಿರೀಕ್ಷೆ ಇದೆ.

ಈ ವಿಷಯದ ಕುರಿತು ಸಂಪುಟ ಸಭೆಯ ನಂತರ ಸಚಿವರು ಅಧಿಕೃತ ಮಾಹಿತಿ ನೀಡದಿದ್ದರೂ ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ಮಸೂದೆಗೆ ಸಂಪುಟದಲ್ಲಿ ಅನುಮೋದನೆ ಸಿಕ್ಕಿರುವುದನ್ನು ಮಾಧ್ಯಮಗಳಿಗೆ ದೃಢಪಡಿಸಿದರು.

ಭಾರತದಲ್ಲಿನ ಎಲ್ಲಾ ಆನ್‌ಲೈನ್ ಮತ್ತು ಆಫ್‌ಲೈನ್ ದತ್ತಾಂಶವು ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ-2023ರ ವ್ಯಾಪ್ತಿಯೊಳಗೆ ಬರಲಿದೆ ಎಂದು ಮತ್ತೊಂದು ಅಧಿಕೃತ ಮೂಲ 'ಪ್ರಜಾವಾಣಿ'ಗೆ ಖಚಿತಪಡಿಸಿದೆ.

ಒಬ್ಬ ವ್ಯಕ್ತಿಯು ಒಪ್ಪಿಗೆ ನೀಡಿದರೆ ಮಾತ್ರ, ಈ ಮಸೂದೆಯ ಅಡಿಯಲ್ಲಿ ವೈಯಕ್ತಿಕ ದತ್ತಾಂಶ ಸಂರಕ್ಷಣೆಯನ್ನು ಪ್ರಕ್ರಿಯೆಗೊಳಿಸಬಹುದು. ರಾಷ್ಟ್ರೀಯ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆಯ ಆಧಾರದ ಮೇಲೆ ಅಧಿಕಾರಿಗಳಿಗೆ ದತ್ತಾಂಶ ಅಗತ್ಯವಿರುವಾಗ ಕೆಲವು ವಿನಾಯಿತಿಗಳಿವೆ ಎಂದೂ ಮೂಲಗಳು ಹೇಳಿವೆ.

'ಮಸೂದೆಯಲ್ಲಿನ ನಿಯಮಗಳ ಉಲ್ಲಂಘನೆಯ ಪ್ರತಿ ನಿದರ್ಶನಕ್ಕೂ ಸಂಬಂಧಿಸಿದ ಘಟಕಗಳ ಮೇಲೆ ₹250 ಕೋಟಿವರೆಗೆ ದಂಡ ವಿಧಿಸಲು ಮಸೂದೆ ಅನುವು ಮಾಡಿ ಕೊಡಲಿದೆ. ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಹೊರಡಿಸಿದ್ದ ಕೊನೆಯ ಕರಡಿನ ಬಹುತೇಕ ಎಲ್ಲ ನಿಬಂಧನೆಗಳನ್ನು ಈ ಮಸೂದೆ ಒಳಗೊಂಡಿದೆ' ಎಂದು ಮೂಲಗಳು ಹೇಳಿವೆ.

ಪ್ರಸ್ತಾವಿತ ಕಾನೂನಿನ ಅಡಿಯಲ್ಲಿ ಸರ್ಕಾರದ ಇಲಾಖೆಗಳು, ಸಂಸ್ಥೆಗಳಿಗೆ ನಿಬಂಧನೆಗಳಿಂದ ವಿನಾಯಿತಿ ನೀಡಲಾಗಿಲ್ಲ. ಕಾನೂನು ಜಾರಿಗೆ ಬಂದ ನಂತರ ವ್ಯಕ್ತಿಗಳು ತಮ್ಮ ದತ್ತಾಂಶ ಸಂಗ್ರಹ, ಸಂರಕ್ಷಣೆಯ ಬಗ್ಗೆ ವಿವರಗಳನ್ನು ಪಡೆಯುವ ಹಕ್ಕು ಹೊಂದಿರುತ್ತಾರೆ. ವಿವಾದಗಳು ಉಂಟಾದ ಸಂದರ್ಭದಲ್ಲಿ, ಅದನ್ನು ದತ್ತಾಂಶ ಸಂರಕ್ಷಣಾ ಮಂಡಳಿಯು ನಿರ್ಧರಿಸುತ್ತದೆ. ನಾಗರಿಕರು ಸಿವಿಲ್ ನ್ಯಾಯಾಲಯದ ಮೊರೆ ಹೋಗಿ, ಪರಿಹಾರ ಪಡೆಯುವ ಹಕ್ಕನ್ನು ಹೊಂದಿರುತ್ತಾರೆ' ಮೂಲಗಳು ತಿಳಿಸಿವೆ.

ಸಂಸತ್ತಿನ ಮುಂಗಾರು ಅಧಿವೇಶನ ಜುಲೈ 20ರಿಂದ ಶುರುವಾಗಲಿದ್ದು, ಆಗಸ್ಟ್ 11ರವರೆಗೆ ನಡೆಯಲಿದೆ.

ಉಕ್ಕಿಗೆ ಬೇಡಿಕೆ ಹೆಚ್ಚಳ: ಟಾಟಾ ಸ್ಟೀಲ್

ನವದೆಹಲಿ (ಪಿಟಿಐ): ಮೂಲಸೌಕರ್ಯ ಅಭಿವೃದ್ಧಿ, ನಗರೀಕರಣ ಹಾಗೂ ಪೂರಕ ಸುಧಾರಣಾ ಕ್ರಮಗಳ ಕಾರಣದಿಂದಾಗಿ ದೇಶದಲ್ಲಿ ಉಕ್ಕಿಗೆ ಬೇಡಿಕೆಯು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಟಾಟಾ ಸ್ಟೀಲ್ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ.

ಕಂಪನಿಯ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು '2022-23ನೆಯ ಸಾಲಿನಲ್ಲಿ ಭಾರತದಲ್ಲಿ ಉಕ್ಕಿನ ಬಳಕೆಯು ಶೇ 10ರಷ್ಟು ಹೆಚ್ಚಾಗಿದೆ' ಎಂದು ಹೇಳಿದ್ದಾರೆ. 'ಮುಂದಿನ ಒಂದು ದಶಕದ ಅವಧಿಯಲ್ಲಿ ದೇಶದ ಜಿಡಿಪಿ ಬೆಳೆದಂತೆಲ್ಲ, ಉಕ್ಕಿನ ಬೇಡಿಕೆ ಕೂಡ ಹೆಚ್ಚುತ್ತ ಸಾಗಲಿದೆ' ಎಂದು ಅವರು ಅಂದಾಜಿಸಿದ್ದಾರೆ.

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹14400
ಎಸಿ	₹7280
ಆರ್‌ಪಿ	₹10000
ಆರ್‌ಸಿ	₹5950

ಮುಂಬೈ ಧಾರಣೆ

ಶೇಂಗಾ

5-7-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1710 (1700)
ಒಂದು ವಾರದ ಡೆಲಿವರಿ	1705 (1695)
ಸೋಯಾ ಕಚ್ಚಾ	900 (910)
ಪಾಮ್ ವಾರದ ಡೆಲಿವರಿ	863 (875)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,850 (58,100)
ಬೆಳ್ಳಿ ಕೆ.ಜಿ
69,850 (69,500)

ಆವರಣದಲ್ಲಿ ಸೋಮವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಶಿವಮೊಗ್ಗ**			33699-35500
ಬಂಟ್ವಾಳ		ಬೆಟ್ಟೆ	50000-56699	ರಾಶಿ	45009-52209
ಕೋಕ	12500-25000	ರಾಶಿ	43009-55969	ತಟ್ಟಿಬೆಟ್ಟೆ	41160-52009
ಹೊಸತು	27500-41500	ಗೊರಬಲು	18020-43599	**ಶಿರಸಿ**	
ಹಳತು	48000-50500	ಸರಕು	57109-76600	ಬೆಟ್ಟೆ	39099-46699
ಕುಮಟಾ		**ಸಿದ್ದಾಪುರ**		ಬಿಳಿಗೋಟು	26299-34100
ಚಿಪ್ಪು	30899-33019	ಬಿಳಿಗೋಟು	29699-33708	ಚಾಲಿ	35499-40088
ಕೋಕ	21509-33099	ಚಾಲಿ	36889-39399	ಕೆಂಪುಗೋಟು	
ಫ್ಯಾಕ್ಟರಿ	14609-22529	ಕೋಕ	27399-33899		28999-39699
ಹಳೆಚಾಲಿ	37899-41009	ಹಳೆಚಾಲಿ	---	ರಾಶಿ	45218-52299
ಹೊಸಚಾಲಿ	36899-38699	ಕೆಂಪುಗೋಟು			

ಮಾರುತಿ ಸುಜುಕಿ 'ಇನ್ವಿಕ್ಟೊ' ಬಿಡುಗಡೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಹೊಸ ಇನ್ವಿಕ್ಟೊ ವಾಹನವನ್ನು ಬುಧವಾರ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಇದರ ಪರಿಚಯಾತ್ಮಕ ಬೆಲೆ ₹24.8 ಲಕ್ಷದಿಂದ ಆರಂಭವಾಗುತ್ತದೆ. ಮೂರು ಸಾಲುಗಳ ಆಸನ ಇರುವ ಪ್ರೀಮಿಯಂ ಬಹು ಉಪಯೋಗಿ ವಾಹನ (ಎಂಪಿವಿ) ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲು ಹೊಂದಲು ಕಂಪನಿ ಬಯಸುತ್ತಿದೆ.

ಎಂಪಿವಿ ವಾಹನ ಮಾರುಕಟ್ಟೆಯಲ್ಲಿ ಕಂಪನಿಯು ಶೇಕಡ 50ರಷ್ಟು ಪಾಲನ್ನು ಈಗಾಗಲೇ ಹೊಂದಿದೆ.

ಇನ್ವಿಕ್ಟೊ ವಾಹನವನ್ನು ಕಂಪನಿಯು ಟೊಯೊಟಾ ಕಿರ್ಲೋಸ್ಕರ್ ಮೋಟರ್‌ನಿಂದ (ಟಿಕೆಎಂ) ಪಡೆಯಲಿದೆ. ಟಿಕೆಎಂ, ಇನ್ನೊವಾ ಹೈಕ್ರಾಸ್ ವಾಹನವನ್ನು ದೇಶಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದೆ. ಇದನ್ನು ಕೆಲವು ಬದಲಾವಣೆಗಳೊಂದಿಗೆ ಮಾರುತಿ ಸುಜುಕಿ ಕಂಪನಿಗೆ ಪೂರೈಸಲಾಗುತ್ತದೆ.

ಗ್ರ್ಯಾಂಡ್ ವಿಟಾರಾ, ಫ್ರಾಂಕ್ಸ್ ಮತ್ತು ಜಿಮ್ನಿ ವಾಹನಗಳು ಎಸ್‌ಯುವಿ ಮಾರುಕಟ್ಟೆಯಲ್ಲಿ ಕಂಪನಿಯ ಪಾಲನ್ನು ಗಣನೀಯವಾಗಿ ಹೆಚ್ಚಿಸಿವೆ ಎಂದು ಮಾರುತಿ ಸುಜುಕಿ ಸಿಇಒ ಹಿಸಾಷಿ ಟಕೆಯುಚಿ ತಿಳಿಸಿದ್ದಾರೆ.

ಎಸ್‌ಯುವಿ ಮಾರುಕಟ್ಟೆಯಲ್ಲಿ ಕಂಪನಿಯು ಈಗ ಸರಿಸುಮಾರು ಶೇ 20ರಷ್ಟು ಪಾಲು ಹೊಂದಿದೆ.

ಇನ್ವಿಕ್ಟೊ ವಾಹನವು 2 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಹೊಂದಿದೆ. ಹೈಬ್ರಿಡ್ ತಂತ್ರಜ್ಞಾನ ಹೊಂದಿರುವ ಇದು ಲೀಟರ್‌ಗೆ 23.24 ಕಿ.ಮೀ. ಇಂಧನ ದಕ್ಷತೆ ನೀಡುತ್ತದೆ. ಏಳು ಹಾಗೂ ಎಂಟು ಆಸನಗಳ ಆಯ್ಕೆ ಇದರಲ್ಲಿದೆ. ಇತ್ತ, ಬುಧವಾರದ ವಹಿವಾಟಿನಲ್ಲಿ ಮಾರುತಿ ಸುಜುಕಿ ಕಂಪನಿಯ ಷೇರು ಮೌಲ್ಯವು ಶೇ 3.55ರಷ್ಟು ಹೆಚ್ಚಳ ಕಂಡಿದೆ.



ಮಾರುತಿ ಸುಜುಕಿ ಕಂಪನಿಯ ಎಂ.ಡಿ. ಹಾಗೂ ಸಿಇಒ ಹಿಸಾಷಿ ಟಕೆಯುಚಿ ಅವರು 'ಇನ್ವಿಕ್ಟೊ' ವಾಹನದ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಕೇಸರಿ ಪಡೆ ನಾಯಕನಿಂದ ಕೃತ್ಯ; ಕಾಂಗ್ರೆಸ್ ಆರೋಪ: ತನಿಖೆಗೆ ಸಮಿತಿ ರಚಿಸಿದ ಬಿಜೆಪಿ

ಬುಡಕಟ್ಟು ಯುವಕನ ಮೇಲೆ ಮೂತ್ರ ವಿಸರ್ಜನೆ: ಸೆರೆ

ಭೋಪಾಲ್(ಪಿಟಿಐ): ಮಧ್ಯಪ್ರದೇಶದ ಸಿಂಧಿ ಜಿಲ್ಲೆಯಲ್ಲಿ ಬುಡಕಟ್ಟು ಯುವಕನ ಮೇಲೆ ಮೂತ್ರ ವಿಸರ್ಜಿಸಿ ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಹ ಹೇಯಕೃತ್ಯ ಎಸಗಿದ್ದ ಆರೋಪಿಯನ್ನು ಬುಧವಾರ ಪೊಲೀಸರು ಬಂಧಿಸಿದ್ದಾರೆ.

ಪ್ರವೇಶ್ ಶುಕ್ಲಾ ಬಂಧಿತ.ಆರೋಪಿ ವಿರುದ್ಧ ಐಪಿಸಿ ಸೆಕ್ಷನ್ 294 (ಅಸಭ್ಯ ವರ್ತನೆ), 504 (ಉದ್ದೇಶ ಪೂರ್ವಕ ಅವಹೇಳನ), ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ರಾಷ್ಟ್ರೀಯ ಭದ್ರತಾ ಕಾಯ್ದೆಯಡಿಯೂ ಕ್ರಮಕೈಗೊಳ್ಳಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಆರೋಪಿಯು ಸ್ಥಳೀಯ ಬಿಜೆಪಿ ನಾಯಕ ಎಂದು ಕಾಂಗ್ರೆಸ್ ಆರೋಪಿಸಿದ್ದು, ಇದನ್ನು ಆಡಳಿತಾರೂಢ ಬಿಜೆಪಿ ಅಲ್ಲಗಳೆದಿದೆ. ಆದರೆ, ರಾಜ್ಯ ಬಿಜೆಪಿ ಘಟಕವು ಪ್ರಕರಣದ ಬಗ್ಗೆ ತನಿಖೆ ನಡೆಸಲು ನಾಲ್ವರು ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಿದೆ ಎಂದು ಅಧ್ಯಕ್ಷ ವಿ.ಡಿ. ಶರ್ಮಾ ತಿಳಿಸಿದ್ದಾರೆ.

ಜಂಜಾತಿ ವಿಕಾಸ ಪ್ರಾಧಿಕಾರದ ಅಧ್ಯಕ್ಷ ರಾಮಲಾಲ್ ರೌಟೆಲ್ ಇದರ ಅಧ್ಯಕ್ಷರಾಗಿದ್ದಾರೆ. ಶಾಸಕರಾದ ಶರದ್ ಕೋಲ್, ಅಮರ್ ಸಿಂಗ್, ಪಕ್ಷದ ರಾಜ್ಯ ಉಪಾಧ್ಯಕ್ಷ ಕಾಂತದೇವ್ ಸಿಂಗ್ ಸಮಿತಿಯ ಸದಸ್ಯರಾಗಿದ್ದಾರೆ ಎಂದು ತಿಳಿಸಿದ್ದಾರೆ.

ಕುಡಿದ ಮತ್ತಿನಲ್ಲಿದ್ದ ಆರೋಪಿಯು ಸಿಗರೇಟ್ ಸೇದುತ್ತಾ ಪಾದಚಾರಿ ಮಾರ್ಗದಲ್ಲಿ ಕುಳಿತಿದ್ದ ಯುವಕನ ಮೇಲೆ ಮೂತ್ರ ವಿಸರ್ಜನೆ ಮಾಡುತ್ತಿರುವ ವಿಡಿಯೊ ಮಂಗಳವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ನೆಟ್ಟಿಗರು ಮತ್ತು ಪ್ರತಿಪಕ್ಷಗಳಿಂದ ಇದಕ್ಕೆ ತೀವ್ರ ಖಂಡನೆ ವ್ಯಕ್ತವಾದ್ದರಿಂದ ಎಚ್ಚೆತ್ತುಕೊಂಡು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಆರೋಪಿಯನ್ನು ಬಂಧಿಸಿ ಕ್ರಮ ಜರುಗಿಸಲು ಸೂಚಿಸಿದ್ದರು.

'ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದ್ದು, ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ' ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಜುಲತಾ ಪಟ್ಲೆ ತಿಳಿಸಿದ್ದಾರೆ.

ಕೃತ್ಯ ನಡೆದಿದ್ದು ಯಾವಾಗ?: ಕಾಂಗ್ರೆಸ್ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕಾಂತಿಲಾಲ್ ಭೂರಿಯಾ, 'ಈ ಕೃತ್ಯ ನಡೆದು ಕೆಲವು ತಿಂಗಳು ಕಳೆದಿವೆ. ಆರೋಪಿ ಬಿಜೆಪಿ ನಾಯಕ. ಹಾಗಾಗಿ, ಸಂತ್ರಸ್ತ ಯುವಕ ಪೊಲೀಸ್ ಠಾಣೆಗೆ ದೂರು ಕೊಡಲು ಭಯಪಟ್ಟಿದ್ದಾರೆ' ಎಂದು ತಿಳಿಸಿದ್ದಾರೆ.

ಕೂಡಲೇ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಜೊತೆಗೆ, ಬಿಜೆಪಿಯೇತರ ರಾಜ್ಯಗಳಲ್ಲಿ ಈ ಪ್ರಕರಣದ ಕೋರ್ಟ್ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಸಂತ್ರಸ್ತ ಕುಟುಂಬಕ್ಕೆ ₹ 2 ಕೋಟಿ ಪರಿಹಾರ ನೀಡಬೇಕು. ಕುಟುಂಬದ ಇಬ್ಬರು ಸದಸ್ಯರಿಗೆ ಸರ್ಕಾರಿ ನೌಕರಿ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಆರೋಪಿಗೆ ಬಿಜೆಪಿಯ ಉನ್ನತಮಟ್ಟದ ನಾಯಕರ ಜೊತೆಗೆ ಉತ್ತಮ ಸಂಪರ್ಕವಿದೆ ಎಂದಿರುವ ಅವರು, ಸ್ಥಳೀಯ ಶಾಸಕರು ಮತ್ತು ಅವರ ಬೆಂಬಲಿಗರು ಗೂಂಡಾಗಳಂತೆ ವರ್ತಿಸುತ್ತಿದ್ದಾರೆ ಎಂದು ದೂರಿದ್ದಾರೆ.

ತನಿಖೆಗೆ ಆದೇಶ: 'ಇದೊಂದು ಅಮಾನವೀಯ ಕೃತ್ಯ' ಎಂದು ಖಂಡಿಸಿರುವ ಗೃಹ ಸಚಿವ ನರೋತ್ತಮ್ ಮಿಶ್ರಾ, 'ಕಾಂಗ್ರೆಸ್ ಮತ್ತು ಬಹುಜನ ಸಮಾಜ ಪಕ್ಷದ ಒತ್ತಾಯದಂತೆ ಆರೋಪಿಯ ಮನೆಯನ್ನು ನೆಲಸಮಗೊಳಿಸುವ ಕ್ರಮಕ್ಕೆ ಸರ್ಕಾರ ಮುಂದಾಗುವುದಿಲ್ಲ. ಸರ್ಕಾರಿ ಸ್ವತ್ತು ಅತಿಕ್ರಮಿಸಿದ್ದರಷ್ಟೇ ಬುಲ್ಡೋಜರ್ ನೀತಿ ಅನುಸರಿಸಲಾಗುತ್ತದೆ' ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಅವರು ಸೂಚಿಸಿದ ಬಳಿಕವಷ್ಟೇ ಪೊಲೀಸರು ಕ್ರಮಕ್ಕೆ ಮುಂದಾಗಿದ್ದಾರೆ. ಈ ಬಗ್ಗೆಯೂ ತನಿಖೆಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಚೌಹಾಣ್ ಕಾಳಜಿ ಪ್ರಶ್ನಿಸಿದ ಮಾಯಾವತಿ

'ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿದಾಡಿದ ಬಳಿಕ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಸರ್ಕಾರ ಎಚ್ಚೆತ್ತುಕೊಂಡಿದೆ. ಇದು ಬುಡಕಟ್ಟು ಜನರು, ದಲಿತರ ಬಗ್ಗೆ ಸರ್ಕಾರಕ್ಕೆ ಎಷ್ಟು ಕಾಳಜಿ ಇದೆ ಎಂಬುದಕ್ಕೆ ಕನ್ನಡಿ ಹಿಡಿದಿದೆ' ಎಂದು ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ಮಾಯಾವತಿ ಟ್ವೀಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸರ್ಕಾರವು ಕೂಡಲೇ ಆರೋಪಿ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಕ್ರಮಕೈಗೊಂಡರೆ ಸಾಲದು. ಆತನಿಗೆ ಸೇರಿದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಮನೆಯನ್ನೂ ನೆಲಸಮಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.ಆರೋಪಿಯು ಬಿಜೆಪಿಗೆ ಸೇರಿದ್ದಾರೆ ಎಂದು ಸರ್ಕಾರ ಕ್ರಮಕ್ಕೆ ಹಿಂಜರಿಯಬಾರದು. ಇಂತಹ ಪ್ರಕರಣಗಳಿಂದ ಎಲ್ಲರೂ ಸಮಾಜದ ಮುಂದೆ ಅವಮಾನ ಎದುರಿಸಬೇಕಾಗುತ್ತದೆ ಎಂದಿದ್ದಾರೆ.

ಕಳಚಿದ ಕೇಸರಿ ಮುಖವಾಡ: ರಾಹುಲ್

ನವದೆಹಲಿ (ಪಿಟಿಐ): 'ಮೂತ್ರ ವಿಸರ್ಜನೆ ಪ್ರಕರಣವು ಬಿಜೆಪಿಯ ಬುಡಕಟ್ಟು ಮತ್ತು ದಲಿತ ವಿರೋಧಿ ಮುಖವಾಡವನ್ನು ಕಳಚಿಟ್ಟಿದೆ'ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹರಿಹಾಯ್ದಿದ್ದಾರೆ.

ಬಿಜೆಪಿಯ ಅಧಿಕಾರಾವಧಿಯಲ್ಲಿ ದೇಶದಾದ್ಯಂತ ಬುಡಕಟ್ಟು ಮತ್ತು ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಕೃತ್ಯ ಎಸಗಿರುವ ಆರೋಪಿಯು ಬಿಜೆಪಿ ನಾಯಕ. ಈತನ ಕೃತ್ಯದಿಂದ ಇಡೀ ಸಮಾಜವೇ ತಲೆ ತಗ್ಗಿಸುವಂತಾಗಿದೆ' ಎಂದು ಟ್ವೀಟ್ ಮೂಲಕ ಟೀಕಿಸಿದ್ದಾರೆ.

ಬಿಜೆಪಿ ಆಡಳಿತದಲ್ಲಿ ಬುಡಕಟ್ಟು ಸಹೋದರರು ಮತ್ತು ಸಹೋದರಿಯರಿಗೆ ನೆಮ್ಮದಿ ಇಲ್ಲದಂತಾಗಿದೆ. ಕೇಸರಿ ಪಡೆಯ ಅಸಹ್ಯಕರ ಹಾಗೂ ನೈಜ ವ್ಯಕ್ತಿತ್ವ ಬಯಲಾಗಿದೆ ಎಂದು ದೂರಿದ್ದಾರೆ.

ತಂದೆಗೆ ಸೇರಿದ ಮನೆ ನೆಲಸಮ

ಸಿಂಧಿ (ಮಧ್ಯಪ್ರದೇಶ) (ಪಿಟಿಐ): ಆರೋಪಿ ಪ್ರವೇಶ್ ಶುಕ್ಲಾ ಅವರ ತಂದೆಗೆ ಸೇರಿದ ಮನೆಯ ಒಂದು ಭಾಗವನ್ನು ಸ್ಥಳೀಯ ಆಡಳಿತವು ಬುಧವಾರ ನೆಲಸಮಗೊಳಿಸಿದೆ. ಆರೋಪಿಗೆ ಸೇರಿದ ಮನೆಯನ್ನು ನೆಲಸಮಗೊಳಿಸುವಂತೆ ಕಾಂಗ್ರೆಸ್, ಚೌಹಾಣ್ ಸರ್ಕಾರಕ್ಕೆ ಆಗ್ರಹಿಸಿದ ಬೆನ್ನಲ್ಲೇ ಈ ಕಾರ್ಯಾಚರಣೆ ನಡೆದಿದೆ.

'ಆರೋಪಿಯ ತಂದೆ ರಮಾಕಾಂತ್ ಶುಕ್ಲ ಅವರು ಮನೆ ನಿರ್ಮಿಸುವ ವೇಳೆ ಕೆಲವು ನಿಯಮಾವಳಿಗಳನ್ನು ಉಲ್ಲಂಘಿಸಿದ್ದಾರೆ. ಅಕ್ರಮವಾಗಿ ನಿರ್ಮಿಸಿದ್ದ ಮನೆಯ ಭಾಗವನ್ನು ನೆಲಸಮಗೊಳಿಸಲಾಗಿದೆ. ಆರೋಪಿಯು ಅಪರಾಧಿ ಹಿನ್ನೆಲೆ ಹೊಂದಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಬ್ಬರು ದಲಿತ ಯುವಕರಿಗೆ ಥಳಿತ

ಶಿವಪುರಿ/ಭೋಪಾಲ್(ಪಿಟಿಐ): ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯ ವರ್ಖಾಡಿ ಗ್ರಾಮದಲ್ಲಿ ಯುವತಿಯರಿಗೆ ಕಿರುಕುಳ ನೀಡಿದ್ದಾರೆ ಎಂಬ ಆರೋಪದ ಮೇಲೆ ಇಬ್ಬರು ದಲಿತ ಯುವಕರಿಗೆ ಥಳಿಸಿದ್ದು, ಈ ಸಂಬಂಧ ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ಬುಧವಾರ ಪೊಲೀಸರು ತಿಳಿಸಿದ್ದಾರೆ. ಅಲ್ಪಸಂಖ್ಯಾತ ಸಮುದಾಯದ ಸೇರಿದ ಗುಂಪು ಜೂನ್ 30ರಂದು ಯುವಕರನ್ನು ಥಳಿಸಿದೆ. ಬಳಿಕ ಅವರ ಮುಖಕ್ಕೆ ಕಪ್ಪುಬಣ್ಣ ಬಳಿದು ಕೊರಳಿಗೆ ಚಪ್ಪಲಿ ಹಾರ ಹಾಕಿ ಊರಿನಲ್ಲಿ ಮೆರವಣಿಗೆ ಮಾಡಿದ್ದಾರೆ ಎಂದು ಮ್ಯಾಗ್ರೋನಿ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ ದೀಪಕ್ ಶರ್ಮ ತಿಳಿಸಿದ್ದಾರೆ.

'ಹಳ್ಳಿಯ ಕೆಲವು ಹೆಣ್ಣುಮಕ್ಕಳ ಜೊತೆಗೆ ಯುವಕರು ಮೊಬೈಲ್‌ನಲ್ಲಿ ಮಾತ್ರ ಮಾತನಾಡಿದ್ದಾರೆ. ಖುದ್ದಾಗಿ ಯಾರೊಬ್ಬರನ್ನೂ ಭೇಟಿ ಮಾಡಿಲ್ಲ. ಕಿರುಕುಳವನ್ನೂ ನೀಡಿಲ್ಲ. ತನಿಖೆಗೆ ವೇಳೆ ಈ ಸತ್ಯ ಬಯಲಾಗಿದೆ' ಎಂದಿದ್ದಾರೆ.

ಬಿಜೆಪಿ ಆರೋಪ: ಮೂತ್ರ ವಿಸರ್ಜನೆ ಪ್ರಕರಣದಲ್ಲಿ ಬಿಜೆಪಿ ಮೇಲೆ ಆರೋಪ ಹೊರಿಸುತ್ತಿರುವ ಕಾಂಗ್ರೆಸ್ ಪಕ್ಷವು ದಲಿತ ಯುವಕರ ಥಳಿತ ಪ್ರಕರಣದಲ್ಲಿ ಮೌನವಹಿಸಿದೆ. ಇದು ಆ ಪಕ್ಷದ ತುಷ್ಟೀಕರಣ ನೀತಿಗೆ ನಿದರ್ಶನವಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ. ಶರ್ಮಾ ಟೀಕಿಸಿದ್ದಾರೆ.

ಪ್ರತ್ಯೇಕ ಸಭೆ ನಡೆಸಿ ಶಕ್ತಿ ಪ್ರದರ್ಶನ ಮಾಡಿದ 'ಎನ್‌ಸಿಪಿ'ಯ ಉಭಯ ಬಣಗಳ ನಾಯಕರು

ಸಂಖ್ಯಾಬಲ: ಶರದ್‌ಗಿಂತ ಅಜಿತ್ ಮುಂದೆ?

ಮುಂಬೈ(ಪಿಟಿಐ): ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಇಬ್ಭಾಗಗೊಂಡ ನಂತರ ವರಿಷ್ಠ ಶರದ್ ಪವಾರ್ ಹಾಗೂ ಮಹಾರಾಷ್ಟ್ರ ಉಪಮುಖ್ಯಮಂತ್ರಿಯಾಗಿರುವ ಅಜಿತ್ ಪವಾರ್ ಬುಧವಾರ ಪ್ರತ್ಯೇಕ ಸಭೆಗಳನ್ನು ನಡೆಸಿ ಶಕ್ತಿ ಪ್ರದರ್ಶನ ನಡೆಸಿದರು.

ಎನ್‌ಸಿಪಿ ಒಟ್ಟು 53 ಶಾಸಕರ ಪೈಕಿ 32 ಶಾಸಕರು ಅಜಿತ್ ಪವಾರ್ ನಡೆಸಿದ ಸಭೆಯಲ್ಲಿ ಪಾಲ್ಗೊಂಡಿದ್ದರು. ಶರದ್ ಪವಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ 18 ಶಾಸಕರು ಇದ್ದರು ಎಂದು ಎರಡೂ ಬಣಗಳ ಮೂಲಗಳು ಹೇಳಿವೆ. ಈ ಹಿನ್ನೆಲೆಯಲ್ಲಿ, ಸಂಖ್ಯಾಬಲದಿಂದಾಗಿ ಅಜಿತ್ ಪವಾರ್ ಅವರು ತಮ್ಮ ಚಿಕ್ಕಪ್ಪ ಹಾಗೂ ಪಕ್ಷದ ವರಿಷ್ಠ ಶರದ್ ಪವಾರ್ ಅವರಿಗಿಂತ ಮುಂದೆ ಇದ್ದಂತಾಗಿದೆ.

ದಕ್ಷಿಣ ಮುಂಬೈನಲ್ಲಿರುವ ಶರದ್ ಪವಾರ್ ನಿವಾಸ 'ಸಿಲ್ವರ್ ಓಕ್' ಮುಂದೆ ಪಕ್ಷದ ಕಾರ್ಯಕರ್ತರು 'ಏಕಾಂಗಿಯಾಗಿ ಯುದ್ಧ ಸಾರಿರುವ 83 ವರ್ಷದ ಯೋಧ' ಎಂಬ ಫಲಕ ಪ್ರದರ್ಶಿಸಿದರು.

ಅಜಿತ್ ನಿವಾಸ 'ದೇವಗಿರಿ' ಕೂಡ ದಕ್ಷಿಣ ಮುಂಬೈನಲ್ಲಿಯೇ ಇದ್ದು, ಮನೆ ಮುಂದೆ ಜಮಾಯಿಸಿದ್ದ ಬೆಂಬಲಿಗರು 'ನಾವು ದಾದಾ (ಅಜಿತ್ ಪವಾರ್) ಅವರ ಕಟ್ಟಾ ಬೆಂಬಲಿಗರು' ಎಂಬ ಘೋಷಣೆಗಳನ್ನು ಕೂಗಿದರು.

ನಂತರ ವೈ.ಬಿ.ಚವಾಣ್ ಕೇಂದ್ರದಲ್ಲಿ ಶರದ್ ಪವಾರ್ ಬಣದ ಸಭೆ ನಡೆಯಿತು. ಬಾಂದ್ರಾದಲ್ಲಿರುವ ಭುಜಬಲ್ ನಾಲೆಜ್‌ಸಿಟಿಯಲ್ಲಿ ಸಭೆ ನಡೆಸುವ ಮೂಲಕ ಅಜಿತ್ ಬಲ ಪ್ರದರ್ಶನ ಮಾಡಿದರು.





ಮುಂಬೈನ ವೈ.ಬಿ.ಚವಾಣ್ ಕೇಂದ್ರದಲ್ಲಿ ಬುಧವಾರ ನಡೆದ ಪಕ್ಷದ ಸಭೆಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಎನ್‌ಸಿಪಿ ವರಿಷ್ಠ ಶರದ್ ಪವಾರ್ ಮಾತನಾಡಿದರು (ಎಡಚಿತ್ರ). ಉಪಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಬೆಂಬಲಿಗರು —ಪಿಟಿಐ ಚಿತ್ರಗಳು

ಶರದ್ ಪವಾರ್ ಅವರಿಗೆ ಗುರುದಕ್ಷಿಣೆ ಅರ್ಪಿಸಿದ್ದೇವೆ. ಅಲ್ಲದೇ, ಅಣ್ಣನ ಮಗನನ್ನು ಉಪಮುಖ್ಯಮಂತ್ರಿ ಮಾಡುವ ಮೂಲಕ ಇಡೀ ಪಕ್ಷವನ್ನೇ ಅಧಿಕಾರಕ್ಕೆ ತಂದಿದ್ದೇವೆ.

ಛಗನ್ ಭುಜಬಲ್, ಸಚಿವ ಹಾಗೂ ಅಜಿತ್ ಪವಾರ್ ಬಣದ ನಾಯಕ

80 ವರ್ಷ ತುಂಬಿದ ರತನ್ ಟಾಟಾ, ಅಮಿತಾಭ್ ಬಚ್ಚನ್, ಡಾ.ಸೈರಸ್ ಪೂನಾವಾಲಾ ಇನ್ನೂ ಕ್ರಿಯಾಶೀಲರಾಗಿಲ್ಲವೇ? ತಂದೆಗೆ ಅವಮಾನಿಸುವುದನ್ನು ಸಹಿಸುವುದಿಲ್ಲ

ಸುಪ್ರಿಯಾ ಸುಳೆ, ಎನ್‌ಸಿಪಿ ಕಾರ್ಯಾಧ್ಯಕ್ಷೆ, ಶರದ್ ಪವಾರ್ ಪುತ್ರಿ

'ಚೋಕ್ಸಿ, ನೀರವ್ ಸೇರ್ಪಡೆ ಬಾಕಿ'

ಮುಂಬೈ(ಪಿಟಿಐ): 'ಆರ್ಥಿಕ ಅಪರಾಧ ಎಸೆದ ಆರೋಪ ಎದುರಿಸುತ್ತಿರುವ ಮೆಹುಲ್ ಚೋಕ್ಸಿ, ನೀರವ್ ಮೋದಿ ಹಾಗೂ ವಿಜಯ್ ಮಲ್ಯ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳುವುದು ಮಾತ್ರ ಬಾಕಿ ಉಳಿದಿದೆ' ಎಂದು ಶಿವಸೇನಾ (ಯುಬಿಟಿ) ಬುಧವಾರ ಕುಟುಕಿದೆ.

ಅಜಿತ್ ಪವಾರ್ ಅವರು ತಮ್ಮ ಬೆಂಬಲಿಗರೊಂದಿಗೆ ಮಹಾರಾಷ್ಟ್ರ ಸರ್ಕಾರ ಸೇರಿದ ಬಗ್ಗೆ ಪಕ್ಷದ ಮುಖವಾಣಿ 'ಸಾಮ್ನಾ'ದಲ್ಲಿ ಸಂಪಾದಕೀಯದಲ್ಲಿ ಈ ಕುರಿತು ಬರೆಯಲಾಗಿದೆ.

ಮಹಾರಾಷ್ಟ್ರದಲ್ಲಿ ರಾಜಕೀಯ ಬೆಳವಣಿಗೆಗಳನ್ನು ಚಲನಚಿತ್ರಕ್ಕೆ ಹೋಲಿಸಿರುವ ಪತ್ರಿಕೆ, 'ಒಬ್ಬರು ಪೂರ್ಣ, ಮತ್ತಿಬ್ಬರು ಅರ್ಧ' ಎಂದು ಚಾಟಿ ಬೀಸಿದೆ. ಆ ಮೂಲಕ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಹಾಗೂ ಅಜಿತ್ ಪವಾರ್ ಅವರನ್ನು ಪರೋಕ್ಷವಾಗಿ ಕಿಚಾಯಿಸಿದೆ.

ಜೂನ್ 30ರಂದೇ ಚುನಾವಣಾ ಆಯೋಗಕ್ಕೆ ಅರ್ಜಿ

ನವದೆಹಲಿ: ಎನ್‌ಸಿಪಿ ಇಬ್ಭಾಗವಾಗುವ ಎರಡು ದಿನ ಮೊದಲೇ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದ ಅಜಿತ್ ಪವಾರ್, ಪಕ್ಷದ ಅಧ್ಯಕ್ಷ ಸ್ಥಾನದಿಂದ ಶರದ್ ಪವಾರ್ ಅವರನ್ನು ಪದಚ್ಯುತಗೊಳಿಸಿದ್ದಾಗಿ ತಿಳಿಸಿದ್ದರು ಎಂದು ಮೂಲಗಳು ಬುಧವಾರ ಹೇಳಿವೆ.

ಜೂನ್ 30ರಂದು ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದ ಅಜಿತ್ ಪವಾರ್, 'ತಮ್ಮ ಬಣವನ್ನೇ ನೈಜ ಎನ್‌ಸಿಪಿ ಎಂಬುದಾಗಿ ಪರಿಗಣಿಸಬೇಕು. 'ಗಡಿಯಾರ' ಚಿಹ್ನೆಯನ್ನು ತಮ್ಮ ಬಣಕ್ಕೆ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದ್ದರು' ಎಂದೂ ಹೇಳಿವೆ.

ಪಕ್ಷ ಇಬ್ಭಾಗವಾಗುವುದಕ್ಕೆ ಸಂಬಂಧಿಸಿ ಅಜಿತ್ ಪವಾರ್ ಅವರು ಮುಂಚಿತವಾಗಿ ಎಲ್ಲ ಸಿದ್ಧತೆ ಮಾಡಿಕೊಂಡಿದ್ದರು. ತಮಗೆ ಬೆಂಬಲ ಘೋಷಿಸುವ ಪ್ರಮಾಣಪತ್ರಗಳಿಗೆ ಶಾಸಕರು ಮತ್ತು ಸಂಸದರು ಸೇರಿದಂತೆ 40 ಮಂದಿಯ ಸಹಿಯನ್ನು ಜೂನ್ 30ರಂದೇ ಪಡೆದುಕೊಂಡಿದ್ದರು. ಈ ಪ್ರಮಾಣಪತ್ರಗಳನ್ನು ಅಜಿತ್ ಪವಾರ್ ಬಣ ಚುನಾವಣಾ ಆಯೋಗಕ್ಕೆ ಬುಧವಾರ ಸಲ್ಲಿಸಿದೆ.

ಶರದ್ ಪವಾರ್ ಬಣದ ನಾಯಕ ಜಯಂತ್ ಪಾಟೀಲ ಅವರು ಜುಲೈ 3ರಂದು ಚುನಾವಣಾ ಆಯೋಗಕ್ಕೆ ಕೇವಿಯಟ್ ಸಲ್ಲಿಸಿದ್ದು, ಶಿಂದೆ ನೇತೃತ್ವದ ಸರ್ಕಾರ ಸೇರಿರುವ 9 ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿದ್ದಾರೆ.

ಮಿತ್ರ ಪಕ್ಷಗಳ ನಾಶವೇ ಬಿಜೆಪಿ ನೀತಿ: ಶರದ್ ಪವಾರ್

ಮುಂಬೈ(ಪಿಟಿಐ): 'ಬಿಜೆಪಿಯು ತನ್ನ ಪ್ರತಿಯೊಂದು ಮಿತ್ರ ಪಕ್ಷವನ್ನು ರಾಜಕೀಯವಾಗಿ ನಾಶ ಮಾಡುವುದು ಖಾತ್ರಿ. ನಿಮಗೂ ಅಂಥದೇ ಗತಿ ಕಾದಿದೆ' – ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರು ಅಜಿತ್ ಪವಾರ್ ನೇತೃತ್ವದ ಬಣಕ್ಕೆ ಬುಧವಾರ ನೀಡಿದ ಎಚ್ಚರಿಕೆ ಇದು.

ಪಕ್ಷ ಇಬ್ಭಾಗವಾದ ನಂತರ, ತಮ್ಮ ಶಕ್ತಿ ಪ್ರದರ್ಶನಕ್ಕಾಗಿ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, 'ತನ್ನ ಮಿತ್ರ ಪಕ್ಷಗಳನ್ನು ಕ್ರಮೇಣ ದುರ್ಬಲಗೊಳಿಸಿ, ನಿರ್ನಾಮ ಮಾಡುವುದೇ ಬಿಜೆಪಿಯ ನೀತಿ. ಅವರೊಂದಿಗೆ ಯಾರು ಕೈಜೋಡಿಸುತ್ತಾರೋ ಹಾಗೂ ಅಧಿಕಾರ ಹಂಚಿಕೊಳ್ಳುತ್ತಾರೊ ಅವರಿಗೆಲ್ಲ ಇದೇ ಗತಿ ಆಗಿದೆ' ಎಂದು ವಾಗ್ದಾಳಿ ನಡೆಸಿದರು.

'ಬಿಜೆಪಿಯ ಇಂಥ ನಡೆಗೆ ಸಾಕಷ್ಟು ನಿದರ್ಶನಗಳಿವೆ. ಪಂಜಾಬ್‌ನಲ್ಲಿ ಬಿಜೆಪಿ ಮಿತ್ರಪಕ್ಷವಾಗಿದ್ದ ಅಕಾಲಿ ದಳ ಈಗ ಅಸ್ತಿತ್ವಕ್ಕಾಗಿ ಪರದಾಡುತ್ತಿದೆ. ತೆಲಂಗಾಣ, ಆಂಧ್ರಪ್ರದೇಶ ಮತ್ತು ಬಿಹಾರದಲ್ಲಿಯೂ ಇದೇ ಪರಿಸ್ಥಿತಿಯನ್ನು ನೋಡಿದ್ದೇವೆ' ಎಂದರು.

'ಬಿಜೆಪಿಯಿಂದ ಪಕ್ಷಕ್ಕೆ ಹಾನಿಯಾಗುತ್ತದೆ ಎಂಬುದು ಮನವರಿಕೆಯಾದ ಕಾರಣ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಆರ್‌ಜೆಡಿಯೊಂದಿಗೆ ಮೈತ್ರಿ ಮಾಡಿಕೊಂಡರು. ಬಿಜೆಪಿ ಜೊತೆ ಈಗ ಕೈಜೋಡಿಸಿರುವವರು ಬೇರೆಯದೇ ಆಗಲಿದೆ ಎಂಬ ಕನಸು ಕಾಣುವುದು ಬೇಡ' ಎಂದರು.

ಅಜಿತ್ ಪವಾರ್ ಬಣವು ಬ್ಯಾನರ್‌ಗಳಲ್ಲಿ ತಮ್ಮ ಭಾವಚಿತ್ರ ಬಳಸಿಕೊಂಡಿರುವುದಕ್ಕೆ ಆಕ್ಷೇಪಿಸಿದ ಶರದ್ ಪವಾರ್, 'ನಮ್ಮನ್ನು ತೊರೆದು ಹೋದವರು ನನ್ನ ಭಾವಚಿತ್ರ ಬಳಸುವುದು ಯಾಕೆ' ಎಂದು ಪ್ರಶ್ನಿಸಿದರು. 'ನಮ್ಮ ಪಕ್ಷದ ಚಿಹ್ನೆ ಹಾಗೂ ಹೆಸರು ಅವರ ಕೈವಶವಾಗುವುದಕ್ಕೆ ಬಿಡುವುದಿಲ್ಲ' ಎಂದೂ ಗುಡುಗಿದರು.

'ಬಿಜೆಪಿ ಕದ ತಟ್ಟಿದ್ದ ಎನ್‌ಸಿಪಿ'

'ಅಧಿಕಾರಕ್ಕಾಗಿ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಈ ಹಿಂದೆ ಹಲವು ಬಾರಿ ಬಿಜೆಪಿ ಜೊತೆ ಮಾತುಕತೆ ನಡೆಸಿತ್ತು. ಆದರೆ, ಕೊನೆ ಗಳಿಗೆಯಲ್ಲಿ ತನ್ನ ನಿರ್ಧಾರ ಬದಲಿತ್ತು' ಎಂದು ಉಪಮುಖ್ಯಮಂತ್ರಿ ಅಜಿತ್ ಪವಾರ್ ಬುಧವಾರ ಹೇಳಿದ್ದಾರೆ.

ಅಧಿಕಾರ ಹಿಡಿಯುವ ಸಲುವಾಗಿ ಕಳೆದ 25 ವರ್ಷಗಳ ಕಾಲ ಪಕ್ಷವು ಬಿಜೆಪಿಯ ಸಖ್ಯಕ್ಕೆ ಹಾತೊರೆದ ಗುಟ್ಟುಗಳನ್ನು ಅಜಿತ್ ಬಹಿರಂಗಪಡಿಸಿದ್ದಾರೆ.

ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, '2014, 2017, 2019 ಹಾಗೂ 2022ರಲ್ಲಿ ಪಕ್ಷವು ಬಿಜೆಪಿ ಜೊತೆ ಮಾತುಕತೆ ನಡೆಸಿತ್ತು' ಎಂದರು.

'ಕಳೆದ ವರ್ಷ ಏಕನಾಥ ಶಿಂದೆ ನೇತೃತ್ವದಲ್ಲಿ ಶಿವಸೇನಾ ಶಾಸಕರು ಬಂಡೆದ್ದು, ಸರ್ಕಾರ ರಚಿಸಿದಾಗಲೂ, ಅಧಿಕಾರ ಹಿಡಿಯುವ ಅವಕಾಶ ನಮಗಿತ್ತು. ಪಕ್ಷದ 53 ಶಾಸಕರು, 9 ವಿಧಾನಪರಿಷತ್ ಸದಸ್ಯರು ಸಹಿ ಹಾಕಿದ್ದ ಪತ್ರಗಳು ಈಗಲೂ ನನ್ನ ಬಳಿ ಇವೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ತೀಸ್ತಾ ಬಂಧನಕ್ಕೆ 2 ವಾರ ತಡೆಯಾಜ್ಞೆ

ನವದೆಹಲಿ (ಪಿಟಿಐ): ಗೋದ್ರೋತ್ತರ ಗಲಭೆಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಗ್ಧ ಜನರನ್ನು ಸಾಕ್ಷಿಗಳಾಗಿ ಸೃಷ್ಟಿಸಿದ ಆರೋಪ ಎದುರಿಸುತ್ತಿರುವ ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರ ಬಂಧನಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಎರಡು ವಾರಗಳ ಕಾಲ ತಡೆಯಾಜ್ಞೆ ನೀಡಿದೆ.

ಈ ಪ್ರಕರಣದಲ್ಲಿ ತೀಸ್ತಾ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿತ್ತು. ಅದರ ಅವಧಿ ಮುಗಿದಿದ್ದರಿಂದ ನ್ಯಾಯಾಲಯಕ್ಕೆ ಶರಣಾಗುವಂತೆ ಗುಜರಾತ್ ಹೈಕೋರ್ಟ್ ಜುಲೈ 1ರಂದು ಸೂಚಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ತ್ರಿಸದಸ್ಯ ಪೀಠವು, ತೀಸ್ತಾ ಅವರನ್ನು ಜುಲೈ 19ರವರೆಗೆ ಬಂಧಿಸದಂತೆ ಮಧ್ಯಂತರ ರಕ್ಷಣೆ ನೀಡಿದೆ.

'ಪಿಎಚ್‌.ಡಿ ಕಡ್ಡಾಯವಲ್ಲ'

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಕ್ಕೆ ಪಿಎಚ್‌.ಡಿ ಕಡ್ಡಾಯಗೊಳಿಸಿದ್ದ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ತನ್ನ ನಿರ್ಧಾರದಿಂದ ಹಿಂದೆ ಸರಿದಿದ್ದು, ಈ ಹುದ್ದೆಗಳ ನೇರ ನೇಮಕಾತಿಗೆ ಎನ್‌ಇಟಿ, ಎಸ್‌ಇಟಿ ಮತ್ತು ಎಸ್‌ಎಲ್‌ಇಟಿ ಪರೀಕ್ಷೆಗಳನ್ನು ಕನಿಷ್ಠ ಅರ್ಹತಾ ಮಾನದಂಡ ಎಂದು ಪ್ರಕಟಿಸಿದೆ.

'ಸಹಾಯಕ ಪ್ರಾಧ್ಯಾಪಕರ ನೇಮಕಕ್ಕೆ ಪಿಎಚ್‌.ಡಿ ಅರ್ಹತೆಯು ಐಚ್ಛಿಕವಾಗಿ ಮುಂದುವರಿಯುತ್ತದೆ. ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ), ರಾಜ್ಯ ಅರ್ಹತಾ ಪರೀಕ್ಷೆ (ಎಸ್‌ಇಟಿ) ಮತ್ತು ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆ (ಎಸ್‌ಎಲ್‌ಇಟಿ) ಕನಿಷ್ಠ ಅರ್ಹತಾ ಮಾನದಂಡ ಆಗಿರುತ್ತದೆ' ಎಂದು ಯುಜಿಸಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ತಿಳಿಸಿದ್ದಾರೆ.

ಸೋಲಿಸಿದವರಿಗೂ ಟಿಕೆಟ್ ನೀಡಿದ್ದೆ: ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: '2019ರ ಲೋಕಸಭೆ ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಪಕ್ಷದ ಕೆಲವು ಸಹೋದ್ಯೋಗಿಗಳೇ ಬಿಜೆಪಿಯೊಂದಿಗೆ ಕೈಜೋಡಿಸಿದ್ದರು. ಆದರೆ, ಪಕ್ಷ ಗೆಲ್ಲಲೇಬೇಕೆಂದು ನಾನು ಬಯಸಿದ್ದರಿಂದ ನನಗೆ ವಿರೋಧವಿದ್ದ ಎಲ್ಲರಿಗೂ ಈಚೆಗೆ ನಡೆದ ಕರ್ನಾಟಕ ವಿಧಾನಸಭೆಯ ಚುನಾವಣೆಯಲ್ಲಿ ಟಿಕೆಟ್ ನೀಡಲಾಗಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಪಕ್ಷದ ಪ್ರಧಾನ ಕಚೇರಿಯಲ್ಲಿ ಬುಧವಾರ ನಡೆದ ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತರ ವಿಭಾಗದ 'ನಾಯಕತ್ವದ ಬೆಳವಣಿಗೆ ಮಿಷನ್' ಕುರಿತ ಪಕ್ಷದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಣಿಪುರದಲ್ಲಿ ಮನೆಗೆ ಬೆಂಕಿ

ಇಂಫಾಲ್ (ಪಿಟಿಐ): ಮಣಿಪುರದ ತೌಬಾಲ್ ಜಿಲ್ಲೆಯಲ್ಲಿದ್ದ ಭಾರತೀಯ ಮೀಸಲು ಪಡೆಯ (ಐಆರ್‌ಬಿ) ಸಿಬ್ಬಂದಿ ಮನೆಗೆ ಉದ್ರಿಕ್ತರ ಗುಂಪೊಂದು ಬೆಂಕಿ ಇಟ್ಟಿದೆ ಎಂದು ಪೊಲೀಸರುತಿಳಿಸಿದ್ದಾರೆ.

ಉದ್ರಿಕ್ತರು ಮತ್ತು ಅಸ್ಸಾಂ ರೈಫಲ್ಸ್ ನಡುವೆ ಮಂಗಳವಾರ ರಾತ್ರಿ ನಡೆದ ಗುಂಡಿನ ಚಕಮಕಿಯಲ್ಲಿ 27 ವರ್ಷ ವಯಸ್ಸಿನ ರೊನಾಲ್ಡೊ ಎಂಬ ವ್ಯಕ್ತಿ ಮೃತಪಟ್ಟ ಬೆನ್ನಲ್ಲೇ ಈ ಕೃತ್ಯ ಎಸಗಲಾಗಿದೆ.

ಕೇರಳ: ರಸ್ತೆಗಳು ಜಲಾವೃತ, ಮನೆಗಳಿಗೆ ಹಾನಿ: ವ್ಯಕ್ತಿ ಸಾವು

ನಿರಂತರ ಮಳೆ: ಜನಜೀವನ ಅಸ್ತವ್ಯಸ್ತ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಮಂಗಳವಾರ ರಾತ್ರಿಯಿಂದ ನಿರಂತರವಾಗಿ ಮಳೆಯಾಗುತ್ತಿದ್ದು ಹಲವೆಡೆ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಜನಜೀವನ ಅಸ್ತವ್ಯಸ್ತವಾಗಿದ್ದು ಹಲವೆಡೆ ಮರಗಳು ಧರೆಗುರುಳಿವೆ. ಮನೆಗಳಿಗೆ ಹಾನಿಯಾಗಿದ್ದು ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ.

ರಾಜ್ಯದ ಇಡುಕಿ ಜಿಲ್ಲೆಯಲ್ಲಿ 'ರೆಡ್ ಅಲರ್ಟ್' ಘೋಷಿಸಿರುವ ಭಾರತೀಯ ಹವಾಮಾನ ಇಲಾಖೆಯು (ಐಎಂಡಿ), ಕೊಲ್ಲಂ ಮತ್ತು ತಿರುವನಂತಪುರ ಹೊರತು ಪಡಿಸಿ ಉಳಿದ ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್' ಘೋಷಿಸಿದೆ. ಮುಂದಿನ ಕೆಲವು ದಿನಗಳಲ್ಲಿ ಮಳೆಯ ತೀವ್ರತೆ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಅದು ಹೇಳಿದೆ.

ಮಂಗಳವಾರ ರಾತ್ರಿಯಿಡೀ ಸುರಿದ ಮಳೆಗೆ ಪತ್ತನಂತಿಟ್ಟ ಜಿಲ್ಲೆಯಲ್ಲಿ ಹೊಳೆಯಲ್ಲಿ ಆಟೋರಿಕ್ಷಾ ಮುಗುಚಿಬಿದ್ದು, ಚಾಲಕರೊಬ್ಬರು ಮೃತಪಟ್ಟಿದ್ದಾರೆ. ಇಲ್ಲಿನ 130 ವರ್ಷಗಳಷ್ಟು ಹಳೆಯ ಸಿಎಸ್‌ಐ ಚರ್ಚ್ ಭಾರಿ ಮಳೆಗೆ ನಾಶವಾಗಿದೆ. ಕೋಯಿಕ್ಕೋಡ್ ಜಿಲ್ಲೆಯ ಥಾಮರಸ್ಸೇರಿ ತಾಲ್ಲೂಕಿನಲ್ಲಿ ಉಕ್ಕಿಹರಿಯುತ್ತಿದ್ದ ನದಿಯಲ್ಲಿ 68 ವರ್ಷದ ವ್ಯಕ್ತಿಯೊಬ್ಬರು ಕೊಚ್ಚಿ ಹೋಗಿದ್ದಾರೆ. ಶೋಧ ಕಾರ್ಯ ಕೈಗೊಳ್ಳಲಾಗಿದೆ.

ಮಳೆಯಿಂದಾಗಿ ಹಲವೆಡೆ ಮನೆಗಳಿಗೆ ಹಾನಿಯಾಗಿದ್ದು, ಸಂತ್ರಸ್ತರಿಗೆ ಪರಿಹಾರ ಶಿಬಿರಗಳಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶಾಲಾ–ಕಾಲೇಜುಗಳನ್ನು ಪರಿಹಾರ ಶಿಬಿರಗಳನ್ನಾಗಿ ಪರಿವರ್ತಿಸಲಾಗಿದ್ದು, ವಿದ್ಯಾರ್ಥಿಗಳಿಗೆ ರಜೆ ಘೋಷಿಸಲಾಗಿದೆ.

ಎಚ್ಚರಿಕೆ: ಪೆರಿಯಾರ್ ಮತ್ತು ಮುಥಿರಪುಳ ನದಿತೀರದ ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗುವ ಸಾಧ್ಯತೆ ಇದ್ದು ಇಲ್ಲಿನ ನಿವಾಸಿಗಳು ಎಚ್ಚರಿಕೆ ವಹಿಸಬೇಕು ಹಾಗೂ ಪರಿಹಾರ ಶಿಬಿರಗಳಿಗೆ ಸ್ಥಳಾಂತರಗೊಳ್ಳಬೇಕು ಎಂದು ಅಲ್ಲಿನ ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ.



ಭಾರಿ ಮಳೆಯ ಕಾರಣ ರಾಜಸ್ಥಾನದ ಜೈಪುರದ ರಸ್ತೆಯಲ್ಲಿ ದೊಡ್ಡ ಗುಂಡಿ ಬಿದ್ದಿದ್ದು ಕೇಬಲ್‌ಗಳು ಕಾಣುತ್ತಿವೆ. ಗುಂಡಿಯಿಂದ ನೀರನ್ನು ಹೊರಕ್ಕೆ ಪಂಪ್ ಮಾಡಲಾಯಿತು

ಇನ್ನೂ ಆರು ದಿನ ಮಳೆ

ನವದೆಹಲಿ: ದೇಶದ ರಾಜಧಾನಿ ದೆಹಲಿಯ ಹಲವು ಭಾಗಗಳಲ್ಲಿ ಬುಧವಾರ ಉತ್ತಮ ಮಳೆಯಾಗಿದ್ದು, ಇನ್ನೂ ಆರು ದಿನ ಮೋಡ ಕವಿದ ವಾತಾವರಣ ಇರಲಿದ್ದು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಒಬಿಸಿ: ನಾಲ್ಕು ಪ್ರವರ್ಗ ಸೃಷ್ಟಿ

ಒಂದನೇ ಪುಟದಿಂದ...

ಆಯೋಗದ ಶಿಫಾರಸುಗಳ ಪೈಕಿ, ಕೆಎಂಸಿ ಕಾಯ್ದೆ –1976ರ ಸೆಕ್ಷನ್ 10ಕ್ಕೆ ತಿದ್ದುಪಡಿ ತಂದು ಮೇಯರ್ ಮತ್ತು ಉಪ ಮೇಯರ್ ಅವಧಿ 30 ತಿಂಗಳಿಗೆ ನಿಗದಿಪಡಿಸಬೇಕೆಂಬ ಶಿಫಾರಸನ್ನು ಹೊರತುಪಡಿಸಿ ಉಳಿದವುಗಳಿಗೆ ಆಗಸ್ಟ್ 12ರಂದು ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ಅನುಮೋದನೆ ನೀಡಿತ್ತು.

ಮರು ವರ್ಗೀಕರಣ ಯಾಕೆ?: 'ರಾಜಕೀಯ ಮೀಸಲಾತಿ ನೀಡಲು ಹಿಂದುಳಿದ ವರ್ಗಗಳನ್ನು 'ಪ್ರವರ್ಗ ಎ' ಮತ್ತು 'ಪ್ರವರ್ಗ ಬಿ' ಎಂದು ವರ್ಗೀಕರಿಸಲಾಗಿದೆ. ಈ 'ಪ್ರವರ್ಗ ಎ'ಯಲ್ಲಿ 'ಪ್ರವರ್ಗ 1ಎ'ಯಲ್ಲಿರುವ ಅತ್ಯಂತ ಹಿಂದುಳಿದ 381 ಜಾತಿಗಳು, 'ಪ್ರವರ್ಗ 2ಎ'ಯಲ್ಲಿರುವ 368 ಜಾತಿಗಳು ಮತ್ತು ಪ್ರವರ್ಗ 2ಬಿಯಲ್ಲಿರುವ ಮುಸ್ಲಿಂ ಸೇರಿದೆ. ಈ ಜಾತಿಗಳ ನಡುವೆ ತೀವ್ರ ಪೈಪೋಟಿ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿರುವ ಅತ್ಯಂತ ಹಿಂದುಳಿದ ವರ್ಗಗಳು ಮತ್ತು ಉಳಿದ ಹಿಂದುಳಿದ ವರ್ಗಗಳು ರಾಜಕೀಯ ಪ್ರಾತಿನಿಧ್ಯದಿಂದ ವಂಚಿತವಾಗುತ್ತಿವೆ. ಈ ಕಾರಣಕ್ಕೆ ಹಿಂದುಳಿದ ವರ್ಗಗಳನ್ನು ಮರು ವರ್ಗೀಕರಿಸುವ ಅಗತ್ಯವಿದೆ' ಎಂದು ಆಯೋಗ ಪ್ರತಿಪಾದಿಸಿದೆ.

ಈಗಿರುವ ರಾಜಕೀಯ ಮೀಸಲಾತಿ: ರಾಜ್ಯದಲ್ಲಿ ಶಿಕ್ಷಣ ಮತ್ತು ಉದೋಗದಲ್ಲಿ ಮೀಸಲಾತಿ ನೀಡಲು ಹಿಂದುಳಿದ ಜಾತಿಗಳನ್ನು ಪ್ರವರ್ಗ 1ಎ, 2ಎ, 2ಬಿ, 3ಎ ಮತ್ತು 3ಬಿ ಎಂದು ವರ್ಗೀಕರಿಸಲಾಗಿದೆ.

ಆದರೆ, ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ 'ಹಿಂದುಳಿದ ವರ್ಗಗಳ 'ಪ್ರವರ್ಗ–ಎ' ಮತ್ತು 'ಪ್ರವರ್ಗ ಬಿ' ಎಂದು ಮಾತ್ರ ವರ್ಗೀಕರಿಸಲಾಗಿದೆ. ಈ ಪ್ರವರ್ಗ 'ಎ' ಯಲ್ಲಿ 749 ಜಾತಿಗಳನ್ನು (ಪ್ರವರ್ಗ1, 2ಎ, 2ಬಿಯಲ್ಲಿರುವ ಜಾತಿಗಳು) ಒಂದೆಡೆ ಸೇರಿಸಿ, ಒಟ್ಟು ಸ್ಥಾನಗಳ ಶೇ 33ರಲ್ಲಿ ಶೇ 80ರಷ್ಟು (ಅಂದರೆ ಶೇ 26.4) ಮೀಸಲಾತಿ ನೀಡಲಾಗಿದೆ. ಉಳಿದ ಎಲ್ಲ 53 ಹಿಂದುಳಿದ ಜಾತಿಗಳನ್ನು (ಪ್ರವರ್ಗ 3ಎ, 3ಬಿಯಲ್ಲಿರುವ ಜಾತಿಗಳು) 'ಪ್ರವರ್ಗ ಬಿ'ಯಲ್ಲಿ ತಂದು ಶೇ 20ರಷ್ಟು (ಅಂದರೆ ಶೇ 6.6) ಮೀಸಲಾತಿ ನೀಡಲಾಗಿದೆ.

ಆಯೋಗದ ಐದು ಶಿಫಾರಸುಗಳು

- ಹಿಂದುಳಿದ ವರ್ಗಗಳ 'ಪ್ರವರ್ಗ ಎ' ಮತ್ತು 'ಪ್ರವರ್ಗ ಬಿ' ಸಮುದಾಯಗಳಿಗೆ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಒಟ್ಟು ಸ್ಥಾನಗಳ ಪೈಕಿ ಮೂರನೇ ಒಂದರಷ್ಟು (ಶೇ 33ರಷ್ಟು) ರಾಜಕೀಯ ಮೀಸಲಾತಿಯನ್ನು ನೀಡುವ ನೀತಿ ರೂಪಿಸಬೇಕು. ಆದರೆ, ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಒಟ್ಟು ಮೀಸಲಾತಿ ಪ್ರಮಾಣ ಶೇ 50 ಮೀರಬಾರದು
- ಬಿಬಿಎಂಪಿಯಲ್ಲಿ ಮೇಯರ್ ಮತ್ತು ಉಪಮೇಯರ್ ಸ್ಥಾನಗಳಲ್ಲಿಯೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಪರಿಶೀಲಿಸಬೇಕು
- ಎಲ್ಲ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣಾ ವಿಭಾಗಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ನಿಯಂತ್ರಣಕ್ಕೆ ತರಬೇಕು
- ಬಿಬಿಎಂಪಿ ಕಾಯ್ದೆ 2020ರ ಪ್ರಕಾರ ಮೇಯರ್, ಉಪ ಮೇಯರ್ ಅಧಿಕಾರ ಅವಧಿ 30 ತಿಂಗಳು. ಅದೇ ರೀತಿ, 'ಕರ್ನಾಟಕ ಪುರಸಭೆಗಳ (ಕೆಎಂಸಿ) ಕಾಯ್ದೆ 1976' ರ 'ಸೆಕ್ಷನ್ 10' ಕ್ಕೆ ತಿದ್ದುಪಡಿಗೆ ಪರಿಗಣಿಸಿ, ಮೇಯರ್ ಮತ್ತು ಉಪ ಮೇಯರ್ ಅವಧಿಯನ್ನು 30 ತಿಂಗಳಿಗೆ ನಿಗದಿಪಡಿಸಬೇಕು
- ಅಲ್ಪಸಂಖ್ಯಾತರೂ ಸೇರಿದಂತೆ ಒಬಿಸಿ ಪರ ಪರಿಣಾಮಕಾರಿಯಾಗಿ ಮೀಸಲಾತಿ ನೀಡುವ ಉದ್ದೇಶದಿಂದ ಮುಂದೆ 2027 ಅಥವಾ 2028ರಲ್ಲಿ ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಮೊದಲು, ಹಿಂದುಳಿದ ವರ್ಗಗಳಲ್ಲಿ ಇನ್ನೂ ಎರಡು ಪ್ರವರ್ಗಗಳನ್ನು ಸೃಜಿಸಲು ಹಿಂದುಳಿದ ವರ್ಗಗಳ 'ಪ್ರವರ್ಗ ಎ' ಮತ್ತು 'ಪ್ರವರ್ಗ ಬಿ'ಯನ್ನು ಮರು ವಿಂಗಡಿಸುವ ಬಗ್ಗೆ ರಾಜ್ಯ ಸರ್ಕಾರ ಪರಿಶೀಲಿಸಬಹುದು

ಯುಸಿಸಿ: ಎಐಎಡಿಎಂಕೆ ವಿರೋಧ

ಚೆನ್ನೈ (ಪಿಟಿಐ): ಕೇಂದ್ರ ಸರ್ಕಾರವು ಜಾರಿಗೊಳಿಸಲು ಮುಂದಾಗಿರುವ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ವಿರೋಧಿಸುವುದಾಗಿ ಬಿಜೆಪಿಯ ಮಿತ್ರಪಕ್ಷವಾದ ಎಐಎಡಿಎಂಕೆಯು ಬುಧವಾರ ಪುನರುಚ್ಚರಿಸಿದೆ.

ಯುಸಿಸಿ ಜಾರಿ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಎಐಎಡಿಎಂಕೆ ಮುಖ್ಯಸ್ಥ ಕೆ. ಪಳನಿಸ್ವಾಮಿ ಅವರು, 'ನಮ್ಮ ನಿಲುವನ್ನು 2019ರ ಲೋಕಸಭೆ ಚುನಾವಣೆಯ ಪ್ರಣಾಳಿಕೆಯಲ್ಲೇ ಉಲ್ಲೇಖಿಸಿದ್ದೇವೆ. ಅದನ್ನು ಸೂಕ್ಷ್ಮವಾಗಿ ಓದಿ' ಎಂದರು. 'ಯುಸಿಸಿಯಂಥ ಕಾನೂನುಗಳನ್ನು ಜಾರಿಗೊಳಿಸುವ ದಿಸೆಯಲ್ಲಿ ಸಾಂವಿಧಾನಿಕ ತಿದ್ದುಪಡಿ ತರದಂತೆ ಕೇಂದ್ರ ಸರ್ಕಾರವನ್ನು ಎಐಎಡಿಎಂಕೆಯು ಒತ್ತಾಯಿಸಲಿದೆ.

ಅಲ್ಪಸಂಖ್ಯಾತರನ್ನು ಹೊರಗಿಡಲು ಆಗ್ರಹ

ಲಖನೌ(ಪಿಟಿಐ): 'ಏಕರೂಪ ನಾಗರಿಕ ಸಂಹಿತೆಯಿಂದ (ಯುಸಿಸಿ) ಬುಡಕಟ್ಟು ಜನಾಂಗವನ್ನಷ್ಟೇ ಅಲ್ಲ; ಎಲ್ಲ ಧಾರ್ಮಿಕ ಅಲ್ಪಸಂಖ್ಯಾತರನ್ನೂ ಹೊರಗಿಡಬೇಕು' ಎಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಎಐಎಂಪಿಎಲ್‌ಬಿ) ಕಾನೂನು ಆಯೋಗಕ್ಕೆ ಸಲ್ಲಿಸಿರುವ ತನ್ನ ಆಕ್ಷೇಪಣೆಯಲ್ಲಿ ಒತ್ತಾಯಿಸಿದೆ.

'ಮಂಡಳಿಯ ಕಾರ್ಯಕಾರಿ ಸಮಿತಿ, ಯುಸಿಸಿಯ ಕರಡು ಪ್ರತಿಗೆ ದಾಖಲಿಸಬೇಕಿದ್ದ ಪ್ರತಿಕ್ರಿಯೆಗೆ ಜೂನ್ 27ರಂದು ನಡೆದಿದ್ದ ಸಭೆಯಲ್ಲಿ ಅನುಮೋದನೆ ನೀಡಿತ್ತು. ಬುಧವಾರ ವರ್ಚುವಲ್ ಆಗಿ ನಡೆದ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿ, ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿ, ಆಯೋಗಕ್ಕೆ ಸಲ್ಲಿಸಲಾಗಿದೆ' ಎಂದು ಮಂಡಳಿಯ ವಕ್ತಾರ ಕಾಸಿಂ ರಸೂಲ್ ಇಲ್ಯಾಸ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಯುಸಿಸಿಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ಸಲ್ಲಿಸಲು ಕಾನೂನು ಆಯೋಗ ಜುಲೈ 14ರವರೆಗೂ ಅವಕಾಶ ನೀಡಿತ್ತು.

ಅನ್ಸಾರಿ ಹತ್ಯೆ: 10 ಮಂದಿಗೆ ಕಠಿಣ ಸಜೆ

ಸೆರೈಕೆಲಾ (ಜಾರ್ಖಂಡ್) (ಪಿಟಿಐ): ದೇಶದಾದ್ಯಂತ ಸುದ್ದಿಯಾಗಿದ್ದ ತಬ್ರೇಜ್ ಅನ್ಸಾರಿ ಹತ್ಯೆ ಪ್ರಕರಣದ ಎಲ್ಲಾ ಹತ್ತು ಮಂದಿ ಅಪರಾಧಿಗಳಿಗೆ 10 ವರ್ಷ ಕಠಿಣ ಶಿಕ್ಷೆ ವಿಧಿಸಿ ಸೆರೈಕೆಲಾ-ಖರ್ಸ್ವಾನ್ ಜಿಲ್ಲಾ ನ್ಯಾಯಾಲಯವು ಬುಧವಾರ ತೀರ್ಪು ನೀಡಿದೆ.

ಹೆಚ್ಚುವರಿ ಒಂದನೇ ಜಿಲ್ಲಾ ನ್ಯಾಯಾಧೀಶ ಅಮಿತ್ ಶೇಖರ್ ಅವರು ಬಿಗಿಭದ್ರತೆ ನಡುವೆ ವಿಡಿಯೊ ಕಾನ್ಫರೆನ್ಸ್ ಮೂಲಕ ಶಿಕ್ಷೆ ಹಾಗೂ ತಲಾ ₹15 ಸಾವಿರ ದಂಡ ವಿಧಿಸಿ ತೀರ್ಪು ಪ್ರಕಟಿಸಿದರು.

ಪುಣೆಯಲ್ಲಿ ಕಾರ್ಮಿಕರಾಗಿದ್ದ ಅನ್ಸಾರಿ (24) ಅವರು, 2019ರ ಜೂನ್ 17ರಂದು ಈದ್ ಆಚರಣೆಗಾಗಿ ಹುಟ್ಟೂರು ಧಟ್ಕಿಡಿ ಗ್ರಾಮಕ್ಕೆ ಬಂದಿದ್ದರು. ಅಂದು ರಾತ್ರಿ ಮೋಟಾರ್ ಸ್ಕೂಟರ್ ಕಳವಿಗೆ ಯತ್ನಿಸಿದ್ದಾರೆ ಎಂಬ ಶಂಕೆ ಮೇಲೆ ಗುಂಪೊಂದು ಅವರನ್ನು ಕಂಬಕ್ಕೆ ಕಟ್ಟಿ ಹಾಕಿ ಇಡೀ ರಾತ್ರಿ ಥಳಿಸಿತ್ತು.

ಜೈ ಶ್ರೀರಾಮ್, ಜೈ ಹನುಮಾನ್ ಎಂದು ಘೋಷಣೆ ಕೂಗುವಂತೆ ಒತ್ತಾಯಿಸಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ಘಟನೆ ನಡೆದ ಐದು ದಿನಗಳ ಬಳಿಕ ಅನ್ಸಾರಿ ಮೃತಪಟ್ಟಿದ್ದರು.

ಆ ವೇಳೆ ಜಾರ್ಖಂಡ್‌ನಲ್ಲಿ ಬಿಜೆಪಿ ಸರ್ಕಾರದ ಆಡಳಿತವಿತ್ತು. ಈ ಪ್ರಕರಣ ರಾಷ್ಟ್ರಮಟ್ಟದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವಣ ರಾಜಕೀಯ ಸಂಘರ್ಷಕ್ಕೆ ನಾಂದಿ ಹಾಡಿತ್ತು. ಸಂಸತ್‌ನಲ್ಲಿ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಈ ವಿಷಯ ಪ್ರಸ್ತಾಪಿಸಿದ್ದರಿಂದ ಕಲಾಪಕ್ಕೂ ಅಡ್ಡಿಯಾಗಿತ್ತು.

ಆಗ ಎಐಸಿಸಿ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರದ ವೈಫಲ್ಯದ ವಿರುದ್ಧ ಹರಿಹಾಯ್ದಿದ್ದರು. ಇದಕ್ಕೆ ರಾಜ್ಯಸಭೆಯಲ್ಲಿ ಪ್ರತಿಕ್ರಿಯಿಸಿದ್ದ ಪ್ರಧಾನಿ ಮೋದಿ, 'ಈ ಘಟನೆ ನೋವು ತಂದಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದ್ದರು.

ಪ್ರಮುಖ ಆರೋಪಿ ಪ್ರಕಾಶ್ ಮಂಡಲ್ ಅಲಿಯಾಸ್ ಪಪ್ಪು ಮಂಡಲ್ ಈಗಾಗಲೇ ಜೈಲಿನಲ್ಲಿದ್ದು, ಉಳಿದವರನ್ನು ಕಳೆದ ವಾರ ಪೊಲೀಸರು ವಶಕ್ಕೆ ಪಡೆದಿದ್ದರು.

ಕರ್ನಾಟಕ ಸೇರಿ 9 ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು

ಸಿಪಿಎಸ್ ಡಿಪ್ಲೊಮಾ: ವೈದ್ಯರ ಭವಿಷ್ಯ ಅತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಎರಡು ತಿಂಗಳ ಹಿಂದೆ ವೈದ್ಯರ ಹೊಸ ನೋಂದಣಿ ನಿಯಮಗಳನ್ನು ಪ್ರಕಟಿಸಿದ್ದು, ಕರ್ನಾಟಕ ಸೇರಿದಂತೆ ಒಂಬತ್ತು ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 20,000ಕ್ಕೂ ಹೆಚ್ಚು ತಜ್ಞ ವೈದ್ಯರ ಭವಿಷ್ಯಕ್ಕೆ ಕಂಟಕ ಎದುರಾಗಿದೆ.

ಈ ವೈದ್ಯರು ಪೂರ್ಣಗೊಳಿಸಿರುವ ಸ್ನಾತಕೋತ್ತರ ವಿಶೇಷ ಕೋರ್ಸ್‌ಗಳನ್ನು ಎನ್‌ಎಂಸಿ ಮಾನ್ಯ ಮಾಡದ ಕಾರಣ ಈ ವೈದ್ಯರ ಭವಿಷ್ಯ ಇದೀಗ ಅತಂತ್ರವಾಗಿದೆ.

ಇವರೆಲ್ಲರೂ ಮುಂಬೈನ 'ಕಾಲೇಜ್ ಆಫ್ ಫಿಸಿಷಿಯನ್ಸ್ ಮತ್ತು ಸರ್ಜನ್ಸ್' (ಸಿಪಿಎಸ್) ಮತ್ತು ಅದರಿಂದ ಮಾನ್ಯತೆ ಪಡೆದಿರುವ ಸಂಸ್ಥೆಗಳಲ್ಲಿ ವಿಶೇಷ ಕೋರ್ಸ್‌ಗಳನ್ನು ಪೂರ್ಣಗೊಳಿಸಿದವರು. ಸಿಪಿಎಸ್ 1912ರಿಂದಲೂ ಮಾನ್ಯತಾ ಸಂಸ್ಥೆಯಾಗಿ ಅಸ್ತಿತ್ವದಲ್ಲಿದ್ದು, ವಿವಿಧ ವೈದ್ಯಕೀಯ ವಿಭಾಗಗಳಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸಿಕೊಂಡು ಬಂದಿದೆ.

ವೈದ್ಯಕೀಯ ವಿಜ್ಞಾನಗಳಲ್ಲಿ ಎಂ.ಡಿ/ಎ.ಎಸ್ (64,000 ಸೀಟುಗಳು) ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ (2,700 ಸೀಟುಗಳು) ರಾಷ್ಟ್ರೀಯ ಪರೀಕ್ಷಾ ಮಂಡಳಿಯು ಅಭ್ಯರ್ಥಿಗಳನ್ನು ಭರ್ತಿ ಮಾಡುತ್ತದೆ. ಇದರ ಹೊರತಾಗಿ ಸ್ನಾತಕೋತ್ತರ ಅಧ್ಯಯನ ಮಾಡಬಯಸುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಿಪಿಎಸ್ ನಡೆಸುವ ಕೋರ್ಸ್‌ಗಳು (1,600 ಸೀಟುಗಳು) ಮೂರನೇ ಮಾರ್ಗವನ್ನು ಕಲ್ಪಿಸುತ್ತದೆ.

ಹೊಸ ನಿಯಮ: ಮೇ ತಿಂಗಳಿನಲ್ಲಿ ವೈದ್ಯರ ರಾಷ್ಟ್ರೀಯ ರಿಜಿಸ್ಟರ್ ರಚಿಸಲು ಎನ್‌ಎಂಸಿ ನಿಯಮಗಳನ್ನು ರೂಪಿಸಿದೆ. ಅಖಿಲ ಭಾರತ ಮಟ್ಟದಲ್ಲಿ ಮಾನ್ಯತೆ ಹೊಂದಿರುವ ಶೈಕ್ಷಣಿಕ ಕೋರ್ಸ್‌ಗಳನ್ನು ಪೂರೈಸಿರುವವರಿಗೆ ಮಾತ್ರ ರಿಜಿಸ್ಟರ್‌ನಲ್ಲಿ ನೋಂದಾಯಿಸಲು ಅವಕಾಶ ಕಲ್ಪಿಸಿದೆ.

ಕರ್ನಾಟಕದ ಜತೆಯಲ್ಲಿ ಮಹಾರಾಷ್ಟ್ರ, ಗುಜರಾತ್, ಒಡಿಶಾ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಡ ರಾಜ್ಯಗಳು ಸಿಪಿಎಸ್‌ನ ಕೋರ್ಸ್‌ಗಳಿಗೆ ಮಾನ್ಯತೆ ನೀಡಿವೆ. ಹೀಗಾಗಿ ಸಿಪಿಎಸ್‌ನಲ್ಲಿ ಡಿಪ್ಲೊಮಾ, ವಿಶೇಷ ತರಬೇತಿ ಕೋರ್ಸ್‌ಗಳನ್ನು ಪೂರ್ಣಗೊಳಿಸಿರುವ 20,000ಕ್ಕೂ ಹೆಚ್ಚು ವೈದ್ಯರು ಈ ರಾಜ್ಯಗಳಲ್ಲಿ ತಜ್ಞ ವೈದ್ಯರೆಂದು ಮಾನ್ಯತೆ ಪಡೆದು, ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಎನ್‌ಎಂಸಿಯ ಹೊಸ ನಿಯಮ ಇವರ ಭವಿಷ್ಯವನ್ನು ತ್ರಿಶಂಕು ಸ್ಥಿತಿಗೆ ತಳ್ಳಿದೆ.



ಬಿಕ್ಕಟ್ಟಿಗೆ ದೊರೆಯದ ಪರಿಹಾರ

ಸಿಪಿಎಸ್ ಕೋರ್ಸ್‌ಗಳ ಭವಿಷ್ಯದ ಕುರಿತು ಕೇಂದ್ರ ಆರೋಗ್ಯ ಸಚಿವಾಲಯ, ಮಹಾರಾಷ್ಟ್ರ ಸರ್ಕಾರ, ಎನ್‌ಎಂಸಿ ಮತ್ತು ರಾಜ್ಯ ವೈದ್ಯಕೀಯ ಶಿಕ್ಷಣ ಇಲಾಖೆಗಳು 2017ರಿಂದ ಹಲವು ಸುತ್ತಿನ ಸಭೆ, ಮಾತುಕತೆಗಳನ್ನು ನಡೆಸಿವೆ. ಆದರೆ ಬಿಕ್ಕಟ್ಟಿಗೆ ಪರಿಹಾರ ದೊರೆತಿಲ್ಲ.

ದುಲೀಪ್ ಟ್ರೋಫಿ: ದಕ್ಷಿಣ ವಲಯಕ್ಕೆ ತಿರುಗೇಟು ನೀಡಿದ ಉತ್ತರ ವಲಯ; 14 ವಿಕೆಟ್ ಪತನ

ಕನ್ನಡಿಗ ವಿದ್ವತ್‌ಗೆ ಐದು ವಿಕೆಟ್

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ದುಲೀಪ್ ಟ್ರೋಫಿ ಸೆಮಿಫೈನಲ್ ಪಂದ್ಯದ ಮೊದಲ ದಿನವೇ 14 ವಿಕೆಟ್‌ಗಳು ಪತನವಾದವು. ಅದರಲ್ಲಿ ಎರಡು ವಿಕೆಟ್‌ಗಳು ಮಾತ್ರ ಸ್ಪಿನ್ನರ್‌ಗಳಿಗೆ ಒಲಿದವು!

ದಕ್ಷಿಣ ವಲಯ ತಂಡದಲ್ಲಿ ಆಡುತ್ತಿರುವ ಕನ್ನಡಿಗ ವಿದ್ವತ್ ಕಾವೇರಪ್ಪ ಐದು ವಿಕೆಟ್ ಗೊಂಚಲು ಗಳಿಸುವುದರೊಂದಿಗೆ ಉತ್ತರ ವಲಯವನ್ನು 198 ರನ್‌ಗಳಿಗೆ ಕಟ್ಟಿಹಾಕಿದರು. ಆದರೆ, ಅದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ದಕ್ಷಿಣ ವಲಯ ತಂಡ ಆಘಾತ ಅನುಭವಿಸಿತು. ಉತ್ತರ ವಲಯದ ಮಧ್ಯಮವೇಗಿಗಳಾದ ಬಲ್ತೇಜ್ ಸಿಂಗ್ ಮತ್ತು ಹರ್ಷಿತ್ ರಾಣಾ ತಲಾ ಎರಡು ವಿಕೆಟ್ ಗಳಿಸಿದರು. ಇದರಿಂದಾಗಿ ತಂಡದ ಆತ್ಮವಿಶ್ವಾಸವು ಇಮ್ಮಡಿಸಿತು.

ಮಂದಬೆಳಕಿನ ಕಾರಣ ದಿನದಾಟ ಮುಕ್ತಾಯವಾದಾಗ ದಕ್ಷಿಣ ವಲಯವು 17 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 63 ರನ್ ಗಳಿಸಿತು. ಮಯಂಕ್ ಅಗರವಾಲ್ (37; 61ಎ, 4X4) ಮತ್ತು ತಿಲಕ್ ವರ್ಮಾ (ಬ್ಯಾಟಿಂಗ್ 12) ಕ್ರೀಸ್‌ನಲ್ಲಿದ್ದಾರೆ. ಮುನ್ನಡೆ ಪಡೆಯಲು ಇನ್ನೂ 136 ರನ್ ಗಳಿಸಬೇಕಿದೆ.

ವಿದ್ವತ್ ವೇಗ: ಟಾಸ್ ಗೆದ್ದ ದಕ್ಷಿಣ ವಲಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹೋದ ರಣಜಿ ಕ್ರಿಕೆಟ್‌ನಲ್ಲಿ ಗಮನ ಸೆಳೆಯುವಂತೆ ಬೌಲಿಂಗ್ ಮಾಡಿದ್ದ ಕನ್ನಡಿಗ ವಿದ್ವತ್ ಇಲ್ಲಿಯೂ ತಮ್ಮ ಸ್ವಿಂಗ್ ಕೌಶಲ ಮೆರೆದರು. ಮಳೆಗಾಲದ ಸುಳಿಗಾಳಿ ಮತ್ತು ಪಿಚ್‌ನಲ್ಲಿದ್ದ ಸತ್ವವನ್ನು ಹದವಾಗಿ ಬಳಸಿಕೊಂಡ ವಿದ್ವತ್ ಎದುರಾಳಿ ತಂಡಕ್ಕೆ ಪೆಟ್ಟುಕೊಟ್ಟರು. ಕ್ವಾರ್ಟರ್‌ಫೈನಲ್‌ನಲ್ಲಿ ಶತಕ ಬಾರಿಸಿದ್ದ ಧ್ರುವ ಶೋರೆ, ಅಂಕಿತ್ ಖಲ್ಸಿ, ನಾಯಕ ಜಯಂತ್ ಯಾದವ್, ಪುಲ್ಕಿತ್ ನಾರಂಗ್ ಹಾಗೂ ಬಲ್ತೇಜ್ ಸಿಂಗ್ ವಿಕೆಟ್‌ಗಳನ್ನು ಕಬಳಿಸಿದರು.

ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಪ್ರಭಸಿಮ್ರನ್ ಸಿಂಗ್ (49; 52ಎ) ಮತ್ತು ಅಂಕಿತ್ ಕುಮಾರ್ (33; 70ಎ) ಸ್ವಲ್ಪ ಹೋರಾಟ ನಡೆಸಿದರು. ಕೊನೆಯಲ್ಲಿ ಹರ್ಷಿತ್ (31; 22ಎ) ಮತ್ತು ವೈಭವ್ ಅರೋರಾ (ಔಟಾಗದೆ 23; 50ಎ) ಕಾಣಿಕೆ ನೀಡಿದರು. ಆದರೂ ತಂಡವು 200 ರನ್‌ಗಳ ಗಡಿ ದಾಟಲಿಲ್ಲ.

ಮಯಂಕ್ ಆಸರೆ: ಮೊದಲ ಇನಿಂಗ್ಸ್ ಆರಂಭಿಸಿದ ದಕ್ಷಿಣ ವಲಯ ತಂಡಕ್ಕೆ ಕರ್ನಾಟಕದ ಮಯಂಕ್ ಅಗರವಾಲ್ ಆಸರೆಯಾದರು. ಆದರೆ, ಐಪಿಎಲ್‌ನಲ್ಲಿ ಮಿಂಚಿದ್ದ ಸಾಯಿ ಸುದರ್ಶನ್ (9 ರನ್) ಮತ್ತು ಕರ್ನಾಟಕದ ಬ್ಯಾಟರ್ ಆರ್. ಸಮರ್ಥ್ (1 ರನ್) ಒಂಬತ್ತು ಓವರ್‌ಗಳು ಮುಗಿಯುವ ಮುನ್ನವೇ ಔಟಾದರು. ನಾಯಕ ಹನುಮವಿಹಾರಿ ಮತ್ತು ರಿಕಿ ಭುಯ್ ಖಾತೆ ತೆರೆಯದೇ ನಿರ್ಗಮಿಸಿದರು. ಹರ್ಷಿತ್ ರಾಣಾ, ಹತ್ತನೇ ಓವರ್‌ನಲ್ಲಿ ಇವರಿಬ್ಬರನ್ನೂ ಸತತ ಎರಡು ಎಸೆತಗಳಲ್ಲಿ ಔಟ್ ಮಾಡಿದರು.

ಮಳೆಯಿಂದ ಆಟ ಸ್ಥಗಿತ: ಮಧ್ಯಾಹ್ನ ಮೂರು ಗಂಟೆಯ ಸುಮಾರಿಗೆ ಮಳೆ ಆರಂಭವಾಗಿದ್ದರಿಂದ ಸುಮಾರು 25 ನಿಮಿಷ ಆಟ ಸ್ಥಗಿತವಾಗಿತ್ತು. ಆಗ ಉತ್ತರ ವಲಯವು 9 ವಿಕೆಟ್ ಕಳೆದುಕೊಂಡಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರ ವಲಯ: 58.3 ಓವರ್‌ಗಳಲ್ಲಿ 198 (ಪ್ರಭಸಿಮ್ರನ್ ಸಿಂಗ್ 49, ಅಂಕಿತ್ ಕುಮಾರ್ 33, ನಿಶಾಂತ್ ಸಿಂಧು 27, ಹರ್ಷಿತ್ ರಾಣಾ 31, ವೈಭವ್ ಅರೋರಾ ಔಟಾಗದೆ 33, ವಿದ್ವತ್ ಕಾವೇರಪ್ಪ 28ಕ್ಕೆ5, ವೈಶಾಖ ವಿಜಯಕುಮಾರ್ 26ಕ್ಕೆ1, ಸಾಯಿ ಕಿಶೋರ್ 36ಕ್ಕೆ1, ಕೆ.ವಿ. ಶಶಿಕಾಂತ್ 52ಕ್ಕೆ2, ವಾಷಿಂಗ್ಟನ್ ಸುಂದರ್ 44ಕ್ಕೆ1) ದಕ್ಷಿಣ ವಲಯ: 17 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 63 (ಮಯಂಕ್ ಅಗರವಾಲ್ ಬ್ಯಾಟಿಂಗ್ 37, ತಿಲಕ್ ವರ್ಮಾ ಬ್ಯಾಟಿಂಗ್ 12, ಬಲ್ತೇಜ್ ಸಿಂಗ್ 21ಕ್ಕೆ2, ಹರ್ಷಿತ್ ರಾಣಾ 19ಕ್ಕೆ2)


ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಸೆಮಿಫೈನಲ್‌ನಲ್ಲಿ ಐದು ವಿಕೆಟ್ ಗಳಿಸಿದ ದಕ್ಷಿಣ ವಲಯ ತಂಡದ ವಿದ್ವತ್ ಕಾವೇರಪ್ಪ –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಖ್ಯಾತನಾಮರ ವೈಫಲ್ಯ

ಭಾರತ ತಂಡದ ಆಟಗಾರರಾದ ಪೃಥ್ವಿ ಶಾ, ಚೇತೇಶ್ವರ್ ಪೂಜಾರ ಮತ್ತು ಸೂರ್ಯಕುಮಾರ್ ಯಾದವ್ ನಿರಾಶೆ ಮೂಡಿಸಿದರು. ರಾಷ್ಟ್ರೀಯ ತಂಡಕ್ಕೆ ಸೇರುವ ಆಕಾಂಕ್ಷಿಯಾಗಿರುವ ಸರ್ಫರಾಜ್ ಖಾನ್ ಸೊನ್ನೆ ಸುತ್ತಿದರು. ಆದರೆ, ಬೌಲಿಂಗ್ ಆಲ್‌ರೌಂಡರ್ ಅತಿಥ್ ಶೇಟ್ ಪಶ್ಚಿಮ ವಲಯಕ್ಕೆ ಆಸರೆಯಾದರು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಆರಂಭವಾದ ಇನ್ನೊಂದು ಸೆಮಿಫೈನಲ್‌ನಲ್ಲಿ ಅತಿಥ್ (74; 129ಎ, 4X9) ಗಳಿಸಿದ ಅರ್ಧಶತಕದ ಬಲದಿಂದ ಪಶ್ಚಿಮ ವಲಯವು ದಿನದಾಟದ ಕೊನೆಗೆ 90 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 216 ರನ್ ಗಳಿಸಿತು. ಚಿಂತನ್ ಗಜ (13) ಮತ್ತು ಅರ್ಜನ್ ನಾಗಸ್ವಲ್ಲಾ (5) ಕ್ರೀಸ್‌ನಲ್ಲಿದ್ದಾರೆ.

ಟಾಸ್ ಗೆದ್ದ ಪಶ್ಚಿಮ ವಲಯ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ಪೃಥ್ವಿ (26; 54ಎ) ಮತ್ತು ಪ್ರಿಯಾಂಕ್ ಪಾಂಚಾಲ್ (13; 44ಎ) ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದರು. ಆದರೆ 16ನೇ ಓವರ್‌ನಲ್ಲಿ ಪೃಥ್ವಿ ವಿಕೆಟ್ ಗಳಿಸಿದ ಸೌರಭ್ ಕುಮಾರ್ ಜೊತೆಯಾಟವನ್ನು ಮುರಿದರು.

ನಂತರದಲ್ಲಿ ಕೇಂದ್ರ ವಲಯದ ನಾಯಕ ಶಿವಂ ಮಾವಿ (43ಕ್ಕೆ4) ಮಿಂಚಿದರು. ಟೆಸ್ಟ್ ಪರಿಣತ ಪೂಜಾರ, ಸೂರ್ಯಕುಮಾರ್, ಸರ್ಫರಾಜ್ ಮತ್ತು ಅತಿಥ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 90 ಓವರ್‌ಗಳಲ್ಲಿ 8ಕ್ಕೆ 216 (ಪೃಥ್ವಿ ಶಾ 26, ಪ್ರಿಯಾಂಕ್ ಪಾಂಚಾಲ್ 13, ಚೇತೇಶ್ವರ್ ಪೂಜಾರ 28, ಅತಿಥ್ ಶೇಟ್ 74, ಧರ್ಮೇಂದ್ರಸಿಂಹ ಜಡೇಜ 39, ಚಿಂತನ್ ಗಜ ಬ್ಯಾಟಿಂಗ್ 13, ಶಿವಂ ಮಾವಿ 43ಕ್ಕೆ4)


76ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡ ಕರ್ನಾಟಕ ತಂಡ

ಕರ್ನಾಟಕಕ್ಕೆ ಸಮಗ್ರ ಪ್ರಶಸ್ತಿ

ರಾಷ್ಟ್ರೀಯ ಈಜು; ಅಂತಿಮ ದಿನ ರಾಜ್ಯಕ್ಕೆ ಐದು ಚಿನ್ನ

ಪ್ರಜಾವಾಣಿ ವಾರ್ತೆ

ಲಿನೇಶಾ, ನೆಹ್ರಾ 'ಶ್ರೇಷ್ಠ ಈಜುಪಟು'

ಕರ್ನಾಟಕದ ಎ.ಕೆ.ಲಿನೇಶಾ ಮತ್ತು ಗುಜರಾತ್‌ನ ಆರ್ಯನ್ ನೆಹ್ರಾ ಅವರು ಕ್ರಮವಾಗಿ ಮಹಿಳೆಯರ ಹಾಗೂ ಪುರುಷರ ವಿಭಾಗಗಳಲ್ಲಿ 'ಶ್ರೇಷ್ಠ ಈಜುಪಟು' ಗೌರವಕ್ಕೆ ಪಾತ್ರರಾದರು. ಲಿನೇಶಾ ಅವರು ಎರಡು ಚಿನ್ನ ಮತ್ತು ಒಂದು ಬೆಳ್ಳಿ ಗೆದ್ದಿದ್ದಾರೆ. ಎರಡು ರಾಷ್ಟ್ರೀಯ ದಾಖಲೆಯನ್ನೂ ಸ್ಥಾಪಿಸಿದ್ದಾರೆ. ಆರ್ಯನ್ ಅವರು ನಾಲ್ಕು ರಾಷ್ಟ್ರೀಯ ದಾಖಲೆಗಳೊಂದಿಗೆ ನಾಲ್ಕು ಚಿನ್ನ ಜಯಿಸಿದ್ದಾರೆ.

ಬೆಂಗಳೂರು: ಕರ್ನಾಟಕದ ಈಜುಪಟುಗಳು ಹೈದರಾಬಾದ್‌ನಲ್ಲಿ ಬುಧವಾರ ಕೊನೆಗೊಂಡ 76ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡರು.

ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ನಾಲ್ಕು ದಿನ ನಡೆದ ಕೂಟದಲ್ಲಿ ಕರ್ನಾಟಕ ತಂಡ 16 ಚಿನ್ನ, 10 ಬೆಳ್ಳಿ ಮತ್ತು 12 ಕಂಚು ಸೇರಿದಂತೆ ಒಟ್ಟು 38 ಪದಕಗಳನ್ನು ಜಯಿಸಿತು. 299 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿ ಕಾಣಿಸಿಕೊಂಡಿತು. ಪುರುಷರ ಮತ್ತು ಮಹಿಳೆಯರ ವಿಭಾಗಗಳ ತಂಡ ಪ್ರಶಸ್ತಿ ಕರ್ನಾಟಕದ ಪಾಲಾಯಿತು. ಮಹಾರಾಷ್ಟ್ರ ತಂಡ 'ರನ್ನರ್ಸ್ ಅಪ್' ಆಯಿತು.

ಕೂಟದ ಕೊನೆಯ ದಿನವೂ ಮಿಂಚಿದ ಕರ್ನಾಟಕದ ಸ್ಪರ್ಧಿಗಳು ಮೂರು ರಾಷ್ಟ್ರೀಯ ದಾಖಲೆ ಸ್ಥಾಪಿಸಿದರಲ್ಲದೆ, ಐದು ಚಿನ್ನ ಮತ್ತು ಐದು ಬೆಳ್ಳಿ ಗೆದ್ದುಕೊಂಡರು.

ಮಹಿಳೆಯರ 100 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯನ್ನು ಎ.ಕೆ.ಲಿನೇಶಾ 1 ನಿ. 12.67 ಸೆ.ಗಳಲ್ಲಿ ಪೂರೈಸಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡರು. ಚಾಹತ್ ಅರೋರಾ (1 ನಿ. 13.61 ಸೆ., 2022 ರಲ್ಲಿ) ಹೆಸರಿನಲ್ಲಿದ್ದ ದಾಖಲೆಯನ್ನು ಅವರು ಮುರಿದರು. ಮಾನವಿ ವರ್ಮಾ (1 ನಿ. 13.7 ಸೆ.) ಬೆಳ್ಳಿ ತಮ್ಮದಾಗಿಸಿಕೊಂಡರು. ಲಿನೇಶಾ, 200 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲೂ ರಾಷ್ಟ್ರೀಯ ದಾಖಲೆ ಸ್ಥಾಪಿಸಿದ್ದರು.

ನೀನಾ ವೆಂಕಟೇಶ್ ಮಹಿಳೆಯರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ 1 ನಿ. 02.51 ಸೆ.ಗಳಲ್ಲಿ ಗುರಿ ತಲುಪಿ ಹೊಸ ದಾಖಲೆ ಬರೆದರು. ಆಸ್ಥಾ ಚೌಧರಿ (1 ನಿ.03.07 ಸೆ.) ಅವರು ಕಳೆದ ವರ್ಷ ಸ್ಥಾಪಿಸಿದ್ದ ದಾಖಲೆಯನ್ನು ಮೀರಿ ನಿಂತರು.

ಮತ್ತೊಂದು ರಾಷ್ಟ್ರೀಯ ದಾಖಲೆ ಮಹಿಳೆಯರ 200 ಮೀ. ಫ್ರೀಸ್ಟೈಲ್‌ನಲ್ಲಿ ಮೂಡಿಬಂತು. ಧೀನಿಧಿ ದೇಸಿಂಗು ಅವರು 2 ನಿ. 04.24 ಸೆ.ಗಳಲ್ಲಿ ಕ್ರಮಿಸಿದರು. ಶಿವಾನಿ ಕಟಾರಿಯಾ ಅವರು 2019 ರಲ್ಲಿ (2 ನಿ. 05.80 ಸೆ.) ಸ್ಥಾಪಿಸಿದ್ದ ದಾಖಲೆ ಮುರಿದರು. ಈ ಸ್ಪರ್ಧೆಯ ಬೆಳ್ಳಿಯನ್ನು ಹಷಿಕಾ ರಾಮಚಂದ್ರ (2 ನಿ. 07.64 ಸೆ.) ಗೆದ್ದುಕೊಂಡರು.

ಪುರುಷರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಮೊದಲ ಎರಡೂ ಸ್ಥಾನಗಳು ಕರ್ನಾಟಕದ ಪಾಲಾದವು. 1 ನಿ. 52.10 ಸೆ.ಗಳಲ್ಲಿ ಗುರಿ ತಲುಪಿದ ತನಿಷ್ ಜಾರ್ಜ್ ಮ್ಯಾಥ್ಯೂ ಚಿನ್ನ ಗೆದ್ದರೆ, ಅನೀಶ್ ಎಸ್.ಗೌಡ (1 ನಿ. 52.18 ಸೆ.) ಬೆಳ್ಳಿ ಜಯಿಸಿದರು.

ಎಸ್.ಲಕ್ಷ್ಯ ಅವರು ಮಹಿಳೆಯರ 400 ಮೀ. ಮೆಡ್ಲೆಯಲ್ಲಿ 5 ನಿ. 10.93 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ಇದೇ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಶೋಯನ್ ಗಂಗೂಲಿ (4 ನಿ. 33.90 ಸೆ.) ಬೆಳ್ಳಿ ಪಡೆದರು.

ಪುರುಷರ 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಉತ್ಕರ್ಷ್ ಎಸ್.ಪಾಟೀಲ್ (2 ನಿ. 06.01 ಸೆ.) ಬೆಳ್ಳಿ ಜಯಿಸಿದರು.

ಆರ್ಯನ್ ದಾಖಲೆ: ಗುಜರಾತ್‌ನ ಆರ್ಯನ್ ನೆಹ್ರಾ ಪುರುಷರ 400 ಮೀ.ಮೆಡ್ಲೆ ಸ್ಪರ್ಧೆಯಲ್ಲಿ (4 ನಿ. 25.62 ಸೆ.) ರಾಷ್ಟ್ರೀಯ ದಾಖಲೆ ಸ್ಥಾಪಿಸಿದರು. ಕರ್ನಾಟಕದ ರೆಹಾನ್ ಪೂಂಚಾ (4 ನಿ. 30.13 ಸೆ.) ಅವರು 2009 ರಲ್ಲಿ ಸ್ಥಾಪಿಸಿದ್ದ ದಾಖಲೆ ಮುರಿದರು.


ಕೊಹ್ಲಿ ಅವರು ಸೋಬರ್ಸ್ ಅವರನ್ನು ಭೇಟಿಯಾದರು –ಟ್ವಿಟರ್ ಚಿತ್ರ

ಭಾರತ ತಂಡದ ಆಟಗಾರರಿಂದ ಗ್ಯಾರ್ಫೀಲ್ಡ್ ಸೋಬರ್ಸ್ ಭೇಟಿ

ಬಾರ್ಬಡೋಸ್ (ಪಿಟಿಐ): ವೆಸ್ಟ್ ಇಂಡೀಸ್ ಪ್ರವಾಸದಲ್ಲಿರುವ ಭಾರತ ಕ್ರಿಕೆಟ್ ತಂಡದ ಆಟಗಾರರು ಬುಧವಾರ ದಿಗ್ಗಜ ಆಲ್‌ರೌಂಡರ್ ಸರ್ ಗ್ಯಾರ್ಫೀಲ್ಡ್ ಸೋಬರ್ಸ್ ಅವರನ್ನು ಭೇಟಿಯಾಗಿ ಅನೌಪಚಾರಿಕ ಮಾತುಕತೆ ನಡೆಸಿದರು.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಈ ಸಂಬಂಧ ವಿಡಿಯೊವೊಂದನ್ನು ಹಂಚಿಕೊಂಡಿದ್ದು, 'ಇನ್ ಬಾರ್ಬಡೋಸ್ ಆ್ಯಂಡ್ ಇನ್ ದ ಕಂಪನಿ ಆಫ್ ಗ್ರೇಟ್‌ನೆಸ್' ಎಂಬ ಶೀರ್ಷಿಕೆ ನೀಡಿದೆ. ಟೀಮ್ ಇಂಡಿಯಾ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾದ ಸರ್ ಗ್ಯಾರ್ಫೀಲ್ಡ್ ಸೋಬರ್ಸ್ ಅವರನ್ನು ಭೇಟಿ ಮಾಡಿದೆ ಎಂದೂ ಉಲ್ಲೇಖವಿದೆ.

86 ವರ್ಷದ ಸೋಬರ್ಸ್ 93 ಟೆಸ್ಟ್‌ಗಳಿಂದ 8,032 ರನ್ ಗಳಿಸಿದ್ದಾರೆ. ಅಲ್ಲದೇ ಎಡಗೈ ಬೌಲರ್ ಆಗಿ 235 ವಿಕೆಟ್‌ಗಳನ್ನೂ ಪಡೆದಿದ್ದಾರೆ.

ಸೋಬರ್ಸ್ ದಂಪತಿಯನ್ನು ರೋಹಿತ್, ವಿರಾಟ್ ಕೊಹ್ಲಿ, ಶುಭಮನ್ ಗಿಲ್, ರವಿಚಂದ್ರನ್ ಅಶ್ವಿನ್ ಮತ್ತು ತಂಡದ ಕೋಚ್ ರಾಹುಲ್ ದ್ರಾವಿಡ್ ಭೇಟಿಯಾದರು. ಗಿಲ್ ಅವರನ್ನು ಸೋಬರ್ಸ್ ಅವರಿಗೆ ಪರಿಚಯಿಸಿದ ದ್ರಾವಿಡ್ 'ನಮ್ಮ ಕಿರಿಯ ಆಕರ್ಷಕ ಆಟಗಾರ' ಎಂದು ಹೇಳಿದರು.

ವಿಶ್ವ ಯೂತ್ ಆರ್ಚರಿ: ಪ್ರಿಯಾಂಶ್– ಕೌರ್‌ಗೆ ಚಿನ್ನದ ಪದಕ

ಲಿಮ್‌ರಿಕ್, ಐರ್ಲೆಂಡ್ (ಪಿಟಿಐ): ಭಾರತದ ಪ್ರಿಯಾಂಶ್ ಮತ್ತು ಅವನೀತ್ ಕೌರ್ ಜೋಡಿ ವಿಶ್ವ ಯೂತ್ ಆರ್ಚರಿ ಚಾಂಪಿಯನ್‌ಷಿಪ್‌ನ ಮಿಕ್ಸಡ್ ಡಬಲ್ಸ್ ವಿಭಾಗದಲ್ಲಿ ಚಿನ್ನ ಜಯಿಸಿತು.

ಬುಧವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 146–144 ರಲ್ಲಿ ಇಸ್ರೇಲ್‌ನ ಎದುರಾಳಿಗಳನ್ನು ಮಣಿಸಿತು.

ಭಾರತದ ಮಾನವ್ ಜಾಧವ್–ಐಶ್ವರ್ಯಾ ಶರ್ಮಾ ಜೋಡಿ ಕಂಚು ಜಯಿಸಿತು. ಮೂರನೇ ಸ್ಥಾನಕ್ಕಾಗಿ ಪಡೆದ ಪಂದ್ಯದಲ್ಲಿ ಅವರು ಮೆಕ್ಸಿಕೊ ತಂಡವನ್ನು ಸೋಲಿಸಿದರು.

ಆ್ಯಷಸ್: ಇಂದಿನಿಂದ 3ನೇ ಟೆಸ್ಟ್ ಆ್ಯಂಡರ್‌ಸನ್ ಕೈಬಿಟ್ಟ ಇಂಗ್ಲೆಂಡ್

ಲೀಡ್ಸ್ (ಎಎಫ್‌ಪಿ): ಆಸ್ಟ್ರೇಲಿಯಾ ವಿರುದ್ಧದ ಆ್ಯಷಸ್ ಕ್ರಿಕೆಟ್ ಟೆಸ್ಟ್ ಸರಣಿಯ ಮೂರನೇ ಪಂದ್ಯಕ್ಕೆ ಇಂಗ್ಲೆಂಡ್ ತಂಡ ಮೂರು ಬದಲಾವಣೆಗಳನ್ನು ಮಾಡಿದ್ದು, ವೇಗದ ಬೌಲರ್ ಜೇಮ್ಸ್ ಆ್ಯಂಡರ್‌ಸನ್ ಅವರನ್ನು ಕೈಬಿಟ್ಟಿದೆ.

ಮೂರನೇ ಟೆಸ್ಟ್ hew ಕ್ರೀಡಾಂಗಣದಲ್ಲಿ ನಡೆಯಲಿದೆ. ಐದು ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾ, 2–0 ರಲ್ಲಿ ಮುನ್ನಡೆ ಸಾಧಿಸಿದೆ. ಸರಣಿ ಗೆಲುವಿನ ಕನಸು ಜೀವಂತವಾಗಿರಿಸಿಕೊಳ್ಳಬೇಕಾದರೆ ಮೂರನೇ ಟೆಸ್ಟ್‌ನಲ್ಲಿ ಇಂಗ್ಲೆಂಡ್‌ಗೆ ಜಯ ಅನಿವಾರ್ಯ.

ಆ್ಯಂಡರ್‌ಸನ್ ಮತ್ತು ಜೋಶ್ ಟಂಗ್ ಅವರಿಗೆ 'ವಿಶ್ರಾಂತಿ' ನೀಡಲಾಗಿದೆ ಎಂದು ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ತಿಳಿಸಿದೆ. ಇವರ ಬದಲಿಗೆ ವೇಗದ ಬೌಲರ್ ಮಾರ್ಕ್ ವುಡ್ ಮತ್ತು ಆಲ್‌ರೌಂಡರ್ ಕ್ರಿಸ್ ವೋಕ್ಸ್ ಅವರಿಗೆ ಸ್ಥಾನ ನೀಡಲಾಗಿದೆ.

ಗಾಯಾಳು ಒಲಿ ಪೋಪ್ ಬದಲು, ಸ್ಪಿನ್ನರ್ ಮೊಯೀನ್ ಅಲಿ ತಂಡವನ್ನು ಸೇರಿಕೊಂಡಿದ್ದಾರೆ. ಕೈಬೆರಳಿನ ಗಾಯದಿಂದಾಗಿ ಮೊಯೀನ್, ಲಾರ್ಡ್ಸ್‌ನಲ್ಲಿ ನಡೆದಿದ್ದ ಎರಡನೇ ಟೆಸ್ಟ್‌ನಲ್ಲಿ ಆಡಿರಲಿಲ್ಲ. ಎರಡನೇ ಪಂದ್ಯದ ವೇಳೆ ಭುಜದ ಕೀಲುತಪ್ಪಿರುವ ಕಾರಣ, ಪೋಪ್ ಅವರು ಸರಣಿಯ ಉಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

ವಿಂಬಲ್ಡನ್: ಮೂರನೇ ಸುತ್ತಿಗೆ ಇಗಾ ಶ್ವಾಂಟೆಕ್

ಮೆಡ್ವೆಡೇವ್ ಶುಭಾರಂಭ

ಲಂಡನ್ (ರಾಯಿಟರ್ಸ್): ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಯುವ ಆಟಗಾರ ಆರ್ಥರ್ ಫೆರಿ ಅವರ ಹೋರಾಟವನ್ನು ನೇರ ಸೆಟ್‌ಗಳಿಂದ ಬದಿಗೊತ್ತಿದ ಮೂರನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೆವ್ ವಿಂಬಲ್ಡನ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿಗೆ ಮುನ್ನಡೆದರು.

ಈ ವರ್ಷ ಐದು ಟೂರ್ನಿಗಳನ್ನು ಗೆದ್ದಿರುವ ರಷ್ಯದ ಆಟಗಾರ ಬುಧವಾರ 7–5, 6–4 6–3 ರಿಂದ 391ನೇ ಕ್ರಮಾಂಕದ ಆತಿಥೇಯ ಆಟಗಾರ ಫೆರಿ ಅವರನ್ನು ಸೋಲಿಸಿದರು. ಕಳೆದ ವರ್ಷ ಈ ಟೂರ್ನಿಯಲ್ಲಿ ರಷ್ಯದ ಆಟಗಾರರಿಗೆ ಪ್ರವೇಶ ನಿಷೇಧಿಸಲಾಗಿತ್ತು. ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಮೆಡ್ವೆಡೆವ್ ಕೂಡ ಈ ಬಾರಿ ಪ್ರಶಸ್ತಿಗೆ ನೆಚ್ಚಿನ ಆಟಗಾರರಲ್ಲಿ ಒಬ್ಬರಾಗಿದ್ದಾರೆ.

ಮೊದಲ ಸೆಟ್‌ನಲ್ಲಿ ಉತ್ತಮ ಸರ್ವ್ ಮತ್ತು ವಾಲಿಗಳಿಂದ ಗಮನ ಸೆಳೆದ 20 ವರ್ಷದ ಫೆರಿ ಒಂದು ಹಂತದಲ್ಲಿ 5–5ರಲ್ಲಿ ಸ್ಕೋರ್ ಸಮ ಮಾಡಿದ್ದರು. ಈ ಸಂದರ್ಭದಲ್ಲಿ ಮಳೆ ಕೆಲಕಾಲ ಆಟಕ್ಕೆ ವಿರಾಮ ನೀಡಿತು. ವಿರಾಮದ ನಂತರ, 27 ವರ್ಷದ ಮೆಡ್ವೆಡೆವ್ 7–5ರಲ್ಲಿ ಸೆಟ್ ಪಡೆದು ಮೇಲುಗೈ ಸಾಧಿಸಿದರು.

ಮೂರನೇ ಸುತ್ತಿಗೆ ಶ್ವಾಂಟೆಕ್: ಉತ್ತಮ ಲಯದಲ್ಲಿರುವ ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್, ಸೆಂಟರ್ ಕೋರ್ಟ್‌ನಲ್ಲಿ ನಡೆದ ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಸ್ಪೇನ್‌ನ ಸಾರಾ ಸೊರಿಬೆಸ್ ಟೊರ್ಮೊ ಅವರನ್ನು 6–0, 6–2 ರಿಂದ ಬಗ್ಗುಬಡಿದು ಮೂರನೇ ಸುತ್ತಿಗೆ ದಾಪುಗಾಲಿಟ್ಟರು.

2021ರಲ್ಲಿ ನಾಲ್ಕನೇ ಸುತ್ತಿಗೆ ತಲುಪಿದ್ದೇ ವಿಂಬಲ್ಡನ್‌ನಲ್ಲಿ ಪೋಲೆಂಡ್ ಆಟಗಾರ್ತಿಯ ಇದುವರೆಗಿನ ನಾಲ್ಕು ಯತ್ನಗಳಲ್ಲಿ ಉತ್ತಮ ಸಾಧನೆಯಾಗಿದೆ.

ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಉಕ್ರೇನ್‌ನ ಮಾರ್ತಾ ಕೋಸ್ಟ್ಯುಕ್ 0–6, 7–5, 6–2 ರಿಂದ ಎಂಟನೇ ಶ್ರೇಯಾಂಕದ ಮರಿಯಾ ಸಕ್ಕರಿ ವಿರುದ್ಧ ಅನಿರೀಕ್ಷಿತ ಜಯಗಳಿಸಿ ಎರಡನೇ ಸುತ್ತನ್ನು ತಲುಪಿದರು.

ಮಂಗಳವಾರ ಏಳನೇ ಶ್ರೇಯಾಂಕದ ಕೋಕೊ ಗಾಫ್ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದ್ದರು. ಅಮೆರಿಕದ ಇನ್ನೊಬ್ಬ ಆಟಗಾರ್ತಿ ಸೋಫಿಯಾ ಕೆನಿನ್ 6–4, 2–6, 6–4 ರಿಂದ ಗಾಫ್ ಮೇಲೆ ಜಯಗಳಿಸಿದ್ದರು.


ಡೇನಿಯಲ್ ಮೆಡ್ವೆಡೇವ್ ಆಟದ ವೈಖರಿ –ಎಎಫ್‌ಪಿ ಚಿತ್ರ

ವಿಂಡೀಸ್ ಪ್ರವಾಸ: ಭಾರತ ಟಿ20 ತಂಡದಲ್ಲಿ ತಿಲಕ್ ವರ್ಮಾಗೆ ಸ್ಥಾನ


ತಿಲಕ್ ವರ್ಮಾ

ನವದೆಹಲಿ (ಪಿಟಿಐ): ಕಳೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮಿಂಚಿದ್ದ ತಿಲಕ್ ವರ್ಮಾ ಅವರನ್ನು ಭಾರತ ಟಿ20 ತಂಡಕ್ಕೆ ಆಯ್ಕೆ ಮಾಡಲಾಗಿದೆ.

ವೆಸ್ಟ್ ಇಂಡೀಸ್‌ನಲ್ಲಿ ಸರಣಿ ಆಡಲಿರುವ ಭಾರತ ತಂಡವನ್ನು ಬುಧವಾರ ಪ್ರಕಟಿಸಲಾಗಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ನೇತೃತ್ವದ ತಂಡದಲ್ಲಿ 15 ಆಟಗಾರರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಹೈದರಾಬಾದಿನ ತಿಲಕ್ ವರ್ಮಾ ತಂಡಕ್ಕೆ ಇದೇ ಮೊದಲ ಬಾರಿ ಆಯ್ಕೆಯಾಗಿದ್ದಾರೆ.

ವೇಗಿ ಆವೇಶ್ ಖಾನ್ ಮತ್ತು ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ತಂಡಕ್ಕೆ ಮರಳಿದ್ದಾರೆ. ಇಬ್ಬರು ವಿಕೆಟ್‌ಕೀಪರ್, ಮೂವರು ಸ್ಪಿನ್ನರ್‌ಗಳು ತಂಡದಲ್ಲಿದ್ದಾರೆ. ಸೂರ್ಯಕುಮಾರ್ ಯಾದವ್ ಉಪನಾಯಕನಾಗಿದ್ದಾರೆ.

ಟಿ20 ತಂಡ: ಹಾರ್ದಿಕ್ ಪಾಂಡ್ಯ (ನಾಯಕ), ಇಶಾನ್ ಕಿಶನ್ (ವಿಕೆಟ್‌ಕೀಪರ್), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ಉಪನಾಯಕ), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಅಕ್ಷರ್ ಪಟೇಲ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ರವಿ ಬಿಷ್ಣೋಯಿ, ಅರ್ಷದೀಪ್ ಸಿಂಗ್, ಉಮ್ರಾನ್ ಮಲಿಕ್, ಆವೇಶ್ ಖಾನ್, ಮುಕೇಶ್ ಕುಮಾರ್.

ಮಣಿಪುರ ಬಾವುಟ ಪ್ರದರ್ಶಿಸಿದ ಫುಟ್‌ಬಾಲ್ ಆಟಗಾರ ಜೀಕ್ಸನ್

ಬೆಂಗಳೂರು: ಮಂಗಳವಾರ ರಾತ್ರಿ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಫೈನಲ್ ನಂತರ ಭಾರತದ ತಂಡದ ಆಟಗಾರ ಜೀಕ್ಸನ್ ಸಿಂಗ್ ಅವರು ಮಣಿಪುರ (ಮೈತೆಯಿ) ಬಾವುಟವನ್ನು ಹೊದ್ದುಕೊಂಡು ವಿಜಯವೇದಿಕೆಗೆ ಬಂದರು.

ಮಣಿಪುರದ ಜೀಕ್ಸನ್ ಹಾಕಿಕೊಂಡಿದ್ದ ಬಾವುಟ ಚೌಕಾಕಾರದ್ದಾಗಿದ್ದು, ಏಳು ಬಣ್ಣಗಳನ್ನು ಹೊಂದಿದೆ. ಪುರಾತನ ಮಣಿಪುರದ ಏಳು ಬುಡಕಟ್ಟು ರಾಜವಂಶಗಳನ್ನು ಈ ಬಣ್ಣಗಳು ಪ್ರತಿನಿಧಿಸುತ್ತವೆ.

ಫೈನಲ್‌ನಲ್ಲಿ ಕುವೈತ್ ತಂಡದ ವಿರುದ್ಧ ಭಾರತ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ ಜಯಿಸಿತ್ತು. ಅದರ ನಂತರ ವೈಯಕ್ತಿಕ ಪದಕ ಗಳಿಸಲು ಬಂದ ಜೀಕ್ಸನ್ ಸಿಂಗ್ ಈ ಬಾವುಟ ಸುತ್ತಿಕೊಂಡಿದ್ದರು.

ಅವರು ತಂಡದ ವಿಜಯೋತ್ಸವದಲ್ಲಿ ಬಾವುಟ ಸುತ್ತಿಕೊಂಡು ಸಾಂಕೇತಿಕ ಪ್ರದರ್ಶನ ಮಾಡಿದ್ದರ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗಳು ವ್ಯಕ್ತವಾಗಿವೆ. ಈ ಕುರಿತು ಜೀಕ್ಸನ್ ಕೂಡ ಪ್ರತಿಕ್ರಿಯಿಸಿದ್ದಾರೆ.

'ಪ್ರಿಯ ಅಭಿಮಾನಿಗಳೇ. ಈ ಬಾವುಟದಲ್ಲಿ ಸಂಭ್ರಮಾಚರಣೆ ಮಾಡುವ ಮೂಲಕ ಯಾರ ಮನಸ್ಸಿಗೂ ನೋವುಂಟುಮಾಡುವ ಉದ್ದೇಶ ನನ್ನದಲ್ಲ. ನನ್ನ ತವರು ಮಣಿಪುರವು ಪ್ರಸ್ತುತ ಎದುರಿಸುತ್ತಿರುವ ಪರಿಸ್ಥಿತಿಯನ್ನು ಎಲ್ಲರ ಗಮನಕ್ಕೆ ತರುವುದಷ್ಟೇ ನನ್ನ ಗುರಿಯಾಗಿತ್ತು. ಇಂದಿನ ಈ ವಿಜಯವು ಎಲ್ಲ ಭಾರತೀಯರಿಗೂ ಅರ್ಪಣೆ' ಎಂದು ಟ್ವೀಟ್ ಮಾಡಿದ್ದಾರೆ.

'ಇದು ನನ್ನ ಮಣಿಪುರದ ಬಾವುಟ. ಎಲ್ಲರೂ ಶಾಂತಿಯಿಂದ ಬಾಳಬೇಕು ಮತ್ತು ಸಂಘರ್ಷ ಬೇಡ ಎಂಬ ಸಂದೇಶವನ್ನು ಭಾರತ ಮತ್ತು ಮಣಿಪುರಕ್ಕೆ ನೀಡಿದೆ. ನನಗೆ ಶಾಂತಿ ಮುಖ್ಯ. ಕಳೆದೆರಡು ತಿಂಗಳುಗಳಿಂದ ಸಂಘರ್ಷ ನಡೆಯುತ್ತಿದೆ. ಇದು ಇಲ್ಲಿಗೆ ನಿಲ್ಲಲಿ. ಸರ್ಕಾರ ಮತ್ತು ಜನರು ಈ ನಿಟ್ಟಿನಲ್ಲಿ ಪ್ರಯತ್ನಿಸಲಿ' ಎಂದು ಜೀಕ್ಸನ್ ಸಿಂಗ್ ಇಎಸ್‌ಪಿಎನ್. ಇನ್ ವೆಬ್‌ಸೈಟ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.


ಮಣಿಪುರಿ ಬಾವುಟದೊಂದಿಗೆ ಜೀಕ್ಸನ್ ಸಿಂಗ್ ಪದಕ ಪಡೆಯುತ್ತಿರುವುದು

ಕೃಷ್ಣ–ವಿಷ್ಣು ಜೋಡಿ ಮುನ್ನಡೆ

ಕ್ಯಾಲ್ಗರಿ (ಪಿಟಿಐ): ಭಾರತದ ಡಬಲ್ಸ್ ಜೋಡಿಯಾದ ಕೃಷ್ಣಪ್ರಸಾದ್ ಗರಗ ಮತ್ತು ವಿಷ್ಣುವರ್ಧನ ಗೌಡ ಪಂಜಾಲ ಅವರು ಕೆನಡಾ ಓಪನ್ ಸೂಪರ್ 500 ಟೂರ್ನಿಯಲ್ಲಿ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ಎರಡನೇ ಸುತ್ತನ್ನು ತಲುಪಿದರು. ಆದರೆ ಪರುಪಳ್ಳಿ ಕಶ್ಯಪ್ ಬೇಗನೇ ಹೊರಬಿದ್ದರು.

ವಿಶ್ವಕ್ರಮಾಂಕದಲ್ಲಿ 37ನೇ ಸ್ಥಾನದಲ್ಲಿರುವ ಕೃಷ್ಣ- ವಿಷ್ಣು ಜೋಡಿ ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ 21–14, 21–16ರಿಂದ ಚೀನಾ ತೈಪೆಯ ಚೆನ್ ಝಿ ರೇ ಮತ್ತು ಲು ಚೆನ್ ಜೋಡಿಯನ್ನು ಸೋಲಿಸಿತು.

ಭಾರತದ ಈ ಜೋಡಿ ಕಳೆದ ವರ್ಷ ಆರ್ಲಿನ್ಸ್ ಮಾಸ್ಟರ್ ಮತ್ತು ಸೈಯ್ಯದ್ ಮೋದಿ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿತ್ತು.

ಸಿಂಗಲ್ಸ್‌ನಲ್ಲಿ ಭಾರತದ ಪರುಪಳ್ಳಿ ಕಶ್ಯಪ್ ಮೊದಲ ಸುತ್ತಿನಲ್ಲಿ ಗೆದ್ದರೂ, ಎರಡನೇ ಸುತ್ತಿನಲ್ಲಿ ಸೋಲು ಅನುಭವಿಸಬೇಕಾಯಿತು. 36 ವರ್ಷದ ಕಶ್ಯಪ್ 17–21, 20–22 ರಲ್ಲಿ ಚೀನಾದ ಲೀ ಲಾನ್ ಕ್ಸಿ ಅವರಿಗೆ ಮಣಿದರು.

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ವಿಂಡೀಸ್‌ಗೆ ಸಮಾಧಾನದ ಜಯ

ಹರಾರೆ (ಎಎಫ್‌ಪಿ): ವಿಶ್ವಕಪ್‌ಗೆ ಅರ್ಹತೆ ಪಡೆಯಲು ವಿಫಲವಾಗಿದ್ದ ವೆಸ್ಟ್ ಇಂಡೀಸ್, ಅರ್ಹತಾ ಟೂರ್ನಿಯ ಸೂಪರ್ ಸಿಕ್ಸ್‌ನ ತನ್ನ ಕೊನೆಯ ಪಂದ್ಯದಲ್ಲಿ ಬುಧವಾರ ಒಮಾನ್ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿತು. ವೆಸ್ಟ್ ಇಂಡೀಸ್ ಪಾಲಿಗೆ ಈ ಜಯ ಒಂದಿಷ್ಟು ಸಮಾಧಾನ ಮೂಡಿಸಿತು.

ಆರಂಭ ಆಟಗಾರ ಬ್ರಾಂಡನ್ ಕಿಂಗ್ 100 ರನ್ ಹೊಡೆದರೆ, ಕಪ್ತಾನ ಶಾಯಿ ಹೋಪ್ 63 ರನ್ ಗಳಿಸಿ ಅಜೇಯರಾಗುಳಿದರು. ಒಮಾನ್ ತಂಡ 50 ಓವರುಗಳಲ್ಲಿ 9 ವಿಕೆಟ್‌ಗೆ 221 ರನ್ ಗಳಿಸಿದರೆ, ವಿಂಡೀಸ್ ಇನ್ನೂ 10.2 ಓವರುಗಳಿರುವಂತೆ 3 ವಿಕೆಟ್ ನಷ್ಟದಲ್ಲಿ ಗುರಿ ತಲುಪಿತು.

ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ಕಳೆದ ವಾರ ಸೂಪರ್ ಸಿಕ್ಸ್‌ನ ಈ ಹಿಂದಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡದೆದುರು ಮುಖಭಂಗ ಅನುಭವಿಸಿದ್ದರಿಂದ ವಿಶ್ವಕಪ್ ಸ್ಥಾನದ ಪೈಪೋಟಿಯಿಂದ ಹೊರಬಿದ್ದಿತ್ತು.

ರಸ್ತೆ ಅಪಘಾತ: ಮಾಜಿ ವೇಗಿ ಪ್ರವೀಣ್ ಪಾರು

ಮೀರತ್ (ಪಿಟಿಐ): ಭಾರತ ತಂಡದ ಮಾಜಿ ವೇಗಿ ಪ್ರವೀಣ್ ಕುಮಾರ್ ಮತ್ತು ಅವರ ಮಗ ಮೀರತ್‌ನಲ್ಲಿ ಮಂಗಳವಾರ ರಾತ್ರಿ ರಸ್ತೆ ಅಪಘಾತದಲ್ಲಿ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅವರು ಪ್ರಯಾಣಿಸುತ್ತಿದ್ದ ಎಸ್‌ಯುವಿ ವಾಹನಕ್ಕೆ, ಹಿಂದಿನಿಂದ ಟ್ರಕ್ ಹೊಡೆದಿದೆ.

ಬಾಗಪತ್ ರಸ್ತೆಯ ಮುಲ್ತಾನ್ ನಗರ ನಿವಾಸಿಯಾದ ಕುಮಾರ್, ಪಾಂಡವನಗರದಿಂದ ಮಗನೊಂದಿಗೆ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸ್ ಅಧಿಕಾರಿ ಅರವಿಂದ್ ಚೌರಾಸಿಯಾ ತಿಳಿಸಿದ್ದಾರೆ. ಈ ಅಪಘಾತ, ಕಳೆದ ವರ್ಷದ ಡಿಸೆಂಬರ್‌ನಲ್ಲಿ ರಿಷಭ್ ಪಂತ್ ಅವರ ಕಾರು ಅಪಘಾತವನ್ನು ನೆನಪಿಸಿತು.

ಜು.3 ಅತಿ ಹೆಚ್ಚು ತಾಪಮಾನದ ದಿನ

ಪ್ಯಾರಿಸ್(ಎಎಫ್‌ಪಿ): ಜುಲೈ 3ರ ಸೋಮವಾರವು ಜಗತ್ತಿನಲ್ಲಿ ಈವರೆಗಿನ ಅತಿಹೆಚ್ಚು ಬಿಸಿಲ ಝಳವಿದ್ದ ದಿನವಾಗಿತ್ತು ಎಂದು ಅಮೆರಿಕದ ಹವಾಮಾನ ಶಾಸ್ತ್ರಜ್ಞರು ತಿಳಿಸಿದ್ದಾರೆ.

ಅಂದು ಭೂ ಮೇಲ್ಮೈನಲ್ಲಿ ಜಾಗತಿಕ ಸರಾಸರಿ ತಾಪಮಾನವು 17.01 ಸೆಲ್ಸಿಯಸ್ (62.6 ಡಿಗ್ರಿ ಫ್ಯಾರನ್ಹೀಟ್) ದಾಖಲಾಗಿದೆ ಎಂದು ಅಮೆರಿಕದ ರಾಷ್ಟ್ರೀಯ ಸಾಗರ ಮತ್ತು ವಾಯುಮಂಡಲ ಆಡಳಿತ (ಎನ್‌ಒಎಎ) ತಿಳಿಸಿದೆ.

ಕಳೆದ ವರ್ಷದ ಜುಲೈ 24ರಂದು ತಾಪಮಾನವು 16.92 ಸೆಲ್ಸಿಯಸ್‌ಗೆ ಏರಿಕೆಯಾಗಿತ್ತು. ಸೋಮವಾರದ ತಾಪಮಾನ ಈ ದಾಖಲೆಯನ್ನು ಮೀರಿದೆ. ಜಾಗತಿಕ ತಾಪಮಾನದ ಏರಿಳಿತ ಸಹಜವಾದುದು. 1979ರಿಂದ 2000ರ ಅವಧಿಯಲ್ಲಿ ಸರಾಸರಿ ತಾಪಮಾನವು 16.2 ಸೆಲ್ಸಿಯಸ್ ದಾಖಲಾಗಿತ್ತು ಎಂದು ಎನ್‌ಒಎಎ ಹೇಳಿದೆ.

ಭಾರತದ ಬಾಹ್ಯಾಕಾಶ ಕಾರ್ಯಕ್ರಮ ಹೊಗಳಿದ 'ನ್ಯೂಯಾರ್ಕ್ ಟೈಮ್ಸ್'

ನ್ಯೂಯಾರ್ಕ್ (ಪಿಟಿಐ): ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮಾಡಿರುವ ಸಾಧನೆಯನ್ನು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಹೊಗಳಿದೆ.

'ಬಾಹ್ಯಾಕಾಶ ತಂತ್ರಜ್ಞಾನ, ನವೋದ್ಯಮಗಳ ಕ್ಷೇತ್ರದಲ್ಲಿ ಭಾರತ ಭಾರಿ ಪ್ರಗತಿ ದಾಖಲಿಸಿದೆ. ಬಾಹ್ಯಾಕಾಶದೊಂದಿಗೆ ಪೃಥ್ವಿ ಸಾಧಿಸಲಿರುವ ಸಂಪರ್ಕ ವಿಷಯದಲ್ಲಿ ಅಗಾಧ ಪರಿವರ್ತನೆ ತರಲಿರುವ ಭಾರತ, ಚೀನಾಕ್ಕೆ ಪ್ರತಿಸ್ಪರ್ಧಿಯಾಗಿ ಹೊರಹೊಮ್ಮಲಿದೆ' ಎಂದು ಪತ್ರಿಕೆ ಬಣ್ಣಿಸಿದೆ.


'ದಿ ಸಪ್ರೈಸಿಂಗ್ ಸ್ಟ್ರೈವರ್ ಇನ್ ದಿನ ವರ್ಲ್ಡ್ ಸ್ಪೇಸ್ ಬ್ಯುಸಿನೆಸ್' ಎಂಬ ಲೇಖನದಲ್ಲಿ, ಭಾರತದ ಸಾಧನೆಗಳನ್ನು ವಿವರಿಸಲಾಗಿದೆ.

'1963ರಲ್ಲಿ ಮೊದಲ ರಾಕೆಟ್ ಉಡ್ಡಯನ ಮಾಡಿದಾಗ ಭಾರತ ಬಡರಾಷ್ಟ್ರವಾಗಿತ್ತು. ಚಿಕ್ಕದಾದ ಗಗನನೌಕೆಯನ್ನು ಸೈಕಲ್ ಮೇಲೆಯೇ ಉಡಾವಣೆ ಕೇಂದ್ರಕ್ಕೆ ಒಯ್ದು, ಭೂಮಿಯಿಂದ 124 ಮೈಲುಗಳಷ್ಟು ದೂರದ ಕಕ್ಷೆಯಲ್ಲಿ ಅದನ್ನು ಸೇರಿಸಲಾಗಿತ್ತು'.

'ಬಾಹ್ಯಾಕಾಶ ಕ್ಷೇತ್ರದಲ್ಲಿ ಅಮೆರಿಕ ಹಾಗೂ ರಷ್ಯಾಕ್ಕೆ ಸರಿಸಮನಾಗಿ ಹೆಜ್ಜೆ ಹಾಕಲು ಆಗ ಹೆಣಗಾಡುತ್ತಿದ್ದ ಭಾರತ, ಈ ವಿಚಾರದಲ್ಲಿ ಈಗ ತನ್ನ ಛಾಪು ಮೂಡಿಸಿದೆ' ಎಂದು ಲೇಖನ ಹೊಗಳಿದೆ.

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದನ್ನು ಪ್ರಸ್ತಾಪಿಸಿರುವ ಪತ್ರಿಕೆ, ಬಾಹ್ಯಾಕಾಶ ಕ್ಷೇತ್ರದಲ್ಲಿನ ಸಹಕಾರವನ್ನು ಹೊಸ ಎತ್ತರಕ್ಕೆ ಒಯ್ಯುವ ಕುರಿತು ಮೋದಿ ಹಾಗೂ ಅಧ್ಯಕ್ಷ ಜೋ ಬೈಡನ್ ನೀಡಿದ್ದ ಜಂಟಿ ಹೇಳಿಕೆಯನ್ನು ಉಲ್ಲೇಖಿಸಿದೆ.

ಇಸ್ರೊ ಅಲ್ಲದೇ, ನವೋದ್ಯಮಗಳಾದ ಹೈದರಾಬಾದ್ ಮೂಲದ 'ಸ್ಕೈರೂಟ್ ಏರೋಸ್ಪೇಸ್', 'ಧ್ರುವ ಸ್ಪೇಸ್', ಬೆಂಗಳೂರು ಮೂಲದ 'ಪಿಕ್ಸೆಲ್'ನ ಸಾಧನೆಯನ್ನು 'ನ್ಯೂಯಾರ್ಕ್ ಟೈಮ್ಸ್' ಶ್ಲಾಘಿಸಿದೆ.



ಚಾರ್ಲ್ಸ್ ಪಟ್ಟಾಭಿಷೇಕ ಸರ್ವಧರ್ಮ ಪ್ರಾರ್ಥನೆ

ಲಂಡನ್ (ಪಿಟಿಐ): ಬ್ರಿಟನ್ ರಾಜ 3ನೇ ಚಾರ್ಲ್ಸ್ ಅವರ ಪಟ್ಟಾಭಿಷೇಕದ ಅಂಗವಾಗಿ ಸ್ಕಾಟ್ಲೆಂಡ್ ರಾಜಧಾನಿ ಎಡಿನ್‌ಬರ್ಗ್‌ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸರ್ವಧರ್ಮ ಪ್ರಾರ್ಥನೆ ನಡೆಯಿತು.

ರಾಜ ಚಾರ್ಲ್ಸ್ ಹಾಗೂ ರಾಣಿ ಕ್ಯಾಮಿಲ್ಲಾ ಅವರಿಗೆ ರತ್ನಖಚಿತ ಕಿರೀಟವನ್ನು ಸಮರ್ಪಿಸಲಾಯಿತು.

'ಯುನೈಟೆಡ್ ಕಿಂಗ್‌ಡಮ್ ಮತ್ತು ಕಾಮನ್‌ವೆಲ್ತ್ ಜನರ ಏಳಿಗೆಗೆ ಶ್ರಮಿಸಲು, ಅವರ ಸೇವೆ ಮಾಡಲು ಲಕ್ಷ್ಮಿ ದೇವಿ ಹಾಗೂ ವೆಂಕಟೇಶ್ವರ ದೇವರು ರಾಜಮನೆತನವನ್ನು ಅನುಗ್ರಹಿಸಲಿ' ಎಂದು ಡಾ.ಶ್ರೀಹರಿ ವಲ್ಲಭಜೋಸುಲ ಪ್ರಾರ್ಥಿಸಿದರು. ಅವರು ಸ್ಕಾಟ್ಲೆಂಡ್‌ನ ಗ್ಲಾಸ್ಗೊದಲ್ಲಿರುವ ದೇವಸ್ಥಾನದ ಮುಖ್ಯ ಅರ್ಚಕರು.

ಕ್ರೈಸ್ತ, ಮುಸ್ಲಿಂ ಧರ್ಮ ಗುರುಗಳ ಜೊತೆಗೆ ಯೆಹೂದಿ ಹಾಗೂ ಬೌದ್ಧ ಧರ್ಮಗಳ ಗುರುಗಳು ಪಾಲ್ಗೊಂಡಿದ್ದರು.